ಚೀನ ದೇಶಕ್ಕೆ ಸೇರಿದ ಆರು ಹಾಯಿಕೋರ್ಟುಗಳ ಕಾರಕೂನರಿಗೆ ಮೂರು ತಿಂಗಳಿಂದ ಸಂಬಳ ದೊರೆತಿಲ್ಲ. ಸಂಬಳಕ್ಕಾಗಿ ಇವರು ಹರತಾಳ ಮಾಡಿ, ಕೋರ್ಟಿಗೆ ಹೋಗುವದನ್ನು ನಿಲ್ಲಿಸಿದ್ದಾರೆ. ಕೋರ್ಟುಗಳು ಬಿಟ್ಟಿಂಬೊಮ್ಮೆ ಬಂದಾದ್ದರಿಂದ ಪಕ್ಷಕಾರರು ಮುಂದುಗಾಣದೆ ಕೂತುಕೊಂಡಿದ್ದಾರೆ.

ನೂಲುವವರ ಪ್ರಗತಿ.

ಸಾಬರಮತಿಯಲ್ಲಿರುವ ಮಹಾತ್ಮರ ಆಶ್ರಮದಲ್ಲಿ ಪ್ರತಿಯೊಬ್ಬರೂ ನೂಲುವರು. ಆದರೆ ದುಡಿತಕ್ಕೆ ಕಟ್ಟುಬಿಟ್ಟು ಬರುವುದಾಗುತ್ತಿರಲಿಲ್ಲ. ಆದುದರಿಂದ ಮಹಾತ್ಮರು ದಿನಾಲು ಸಾಯಂಕಾಲದಲ್ಲಿ ಯಾರಾರು ಎಷ್ಟೆಷ್ಟು ನೂಲೆಂಬ ವರದಿ ತಕ್ಕೊಳ್ಳಲಾರಂಭಿಸಿದ್ದಾರೆ. ಇದರಿಂದ ಹುಟ್ಟುವಳಿಯು ಹೆಚ್ಚಾಗುತ್ತಿರುವದು. ಕೆಲವರಿಗಂತು ಸ್ವಲ್ಪ ದಿನಾಲು ಇಂತಿಷ್ಟು ನೂಲಬೇಕೆಂಬ ಚುರುಕು ಮಾಡುವರು. ಅಷ್ಟು ನೂಲದಿದ್ದರೆ ಶಿಕ್ಷೆ ಮಾಡುವರು. ಶಿಕ್ಷೆಯ ಭಯವಿದ್ದರೇ ಜನರು ಹೇಳಿದ ಕೆಲಸ ಮುಂದೇರಿದು ಮಾಡುವರು. ದೇಶದ ಹಿತ, ದೇಶೋಪಕಾರವೆಂದರೆ ಪ್ರತಿಯೊಬ್ಬನು ಆಶ್ರಮದ ಉದ್ಗಾರ ತೆಗೆಯುವನು.

ಆಸ್ಟ್ರೇಲಿಯಾದಲ್ಲಿ ೮೦ ಸಾವಿರ ಎಕರೆ ವಿಸ್ತಾರವಾದಂಥ ಗೋಧಿಹೊಲಗಳಿಗೆ ಬೆಂಕಿ ಹತ್ತಿದೆ. ಇದರಲ್ಲಿ ಬೆಳೆಯುಳ್ಳ ಕಟ್ಟಿಗೆಯುಂಟು

ವಿವಿಧ ವರ್ತಮಾನಗಳು

೧೯ನೆಯ ತಾರೀಖಿನ ದಿವಸ ಬೆಳಗಾವಿ ಮ್ಯುನಿಸಿಪಾಲಿಟಿಯ ಚುನಾವಣೆ ಇರುತ್ತದೆ.

ಸಿಂಧದ [illegible] ಜಿಲ್ಲೆಯಲ್ಲಿ ಕ್ರಿಸ್ತಿಶಕ ಕ್ಕಿಂತ ಎರಡು ಸಾವಿರ ವರ್ಷದ ಹಿಂದಿನ ಭವ್ಯವಾದ ಒಂದು ಪಟ್ಟಣವು ಸಿಕ್ಕಿರುತ್ತದೆ.

ಕಲಕತ್ತೆಯ ಮ್ಯುನಿಸಿಪಾಲಿಟಿಯಲ್ಲಿ ಸ್ವರಾಜ್ಯ ಪಕ್ಷೀಯ ಸಭಾಸದರನ್ನು ಅಧ್ಯಕ್ಷರು ಕಮಿಟಿಯ ಮುಂದೆ ತೆಗೆದುಹಾಕಿದ್ದರಿಂದ, ಸ್ವರಾಜ್ಯ ಪಕ್ಷೀಯರು ಕಮಿಟಿ ಬಿಟ್ಟು ಹೊರಬಿದ್ದು ಬಂದು, ಅಧ್ಯಕ್ಷರ ಕೃತ್ಯವನ್ನು ನಿಷೇಧಿಸಿದರು.

ಇರುವದ ಸೊಸೈಟಿಗಳನ್ನು [illegible] ರಚಿಯವರು [illegible] ಬಗ್ಗೆ [illegible] ಆದ ವ್ಯಾಖ್ಯಾನ ಬಂದಾಗಿ, [illegible] ಸಾವಿರಾರು [illegible] ಹಾನಿಯಾಗುತ್ತಿರುವದು.

ನಾಡಿನ ತಿಂಗಳ ೭ನೆಯ ತಾರೀಖಿನ ದಿವಸ ದಿಲ್ಲಿಯಲ್ಲಿ ಆಲ ಇಂಡಿಯಾ ಕಾಂಗ್ರೆಸ ಕಮಿಟಿಯು ಪಕ್ಕಾಂಗ ಕಮಿಟಿಯ ಕೂಡಿ ಕಾನಪೂರದ ಕಾಂಗ್ರೆಸ ಠರಾವಿನ ವಿಚಾರ ಮಾಡುವದು.

ಸೀರಿಯಾದಲ್ಲಿಯ [illegible] ಆರಿಸುವ ಬಗ್ಗೆ ಕೇವಲ ಸಾಮ್ರಾಜ್ಯ ಕಾಲದ ಮಾತಾಡುವದಕ್ಕಾಗಿ ಫ್ರೆಂಚ ಹಾಯ ಕಮಿಷನರರಾದ ಎಂ. [illegible] ಸಾಹೇಬರು ಇಂಗ್ಲೆಂಡಕ್ಕೆ ಹೋಗಿರುವರು.

ಧಾರವಾಡದ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ನಾಂ ರಜಿಸ್ಟರ್ಡ ಪೇಟಿ ಧಾರವಾಡ.

ಕೆಳಗೆ ಬರೆದೆಂತೆ ಪ್ರತಿ ದಿನಾಲಯವು [illegible] ಪ್ರಕಾರ ಠೇವು ಮಾಡಿಸ್ಕೊಳ್ಳುತ್ತದೆ.

ಕರ್ನಾಟಕದಲ್ಲಿ ಬ್ಯಾಂಕಿನ ಸ್ಥಾಪನೆಯಲ್ಲಿ ಪ್ರಥಮವಾದ ಸ್ಥಾನ.

ಠೇವಿಗೆಯು [illegible] ಹೊಂದಿ [illegible] ಬ್ಯಾಂಕಿನ ಎಲ್ಲ [illegible] [illegible]

ಇವರಿಗಿಗರಿಗೆ [illegible]

ರಿಂದ ತಿಳಕೊಳ್ಳಬೇಕು.

ಮುಧ್ಧ ವರ್ಗ [illegible]

[illegible]

ಟಿ. ಎಸ್. ಮೋಟಾರ ಸರ್ವೀಸ

ಹುಬ್ಬಳ್ಳಿ.

ಶಿವರಾತ್ರಿ ಸಮಯದಲ್ಲಿ ಗೋಕರ್ಣಕ್ಕೆ ಹೋಗುವ ಪ್ರಯಾಣಿಕರ ಸೌಕರ್ಯಕ್ಕಾಗಿ

ತಾ|| ೧—೨—೩೬ ರಿಂದ ರೆಗ್ಯುಲರ ಸರ್ವೀಸ ಇಟ್ಟಿದೆ.

—: ಕಾಲಕ್ರಮಗಳು :—

೧.	ಹುಬ್ಬಳ್ಳಿ ಬಿಡುವದು	ಗೋಕರ್ಣ ಸೇರುವದು
	ಬೆಳಗ್ಗೆ ೭ ಘಂಟೆ.	ಸಾಯಂಕಾಲ ೫ ಘಂಟೆ
	ಸಾಯಂಕಾಲ ೫ ಘಂಟೆ	ಬೆಳಗ್ಗೆ ೫ ಘಂಟೆ
೨	ಸಾಗರ ಬಿಡುವದು	ಗೋಕರ್ಣ ಸೇರುವದು
	ಬೆಳಗ್ಗೆ ೭ ಘಂಟೆ	ಸಾಯಂಕಾಲ ೫ ಘಂಟೆ

ಶಿಮೋಗಾ
೩೦-೧-೧೯೩೬

ಎಮ. ಮಂಜಪ್ಪಾ,
ಪ್ರೊಪ್ರಾಯಿಟರ.

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲೇಕೆ? ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ? ಹಲ್ಲುಕಡಿಯೋ? ಮಂಡ್ಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು?

ಅಜ್ಜನು— ಕಂದಾ— ಹೌದು ಮಯ್ಯಲ್ಲಾ ನೋಯ್ಯುತ್ತದೆ.

ಕಂದ— ಹಾಗಾದರೆ ಮೊಮೆಂಟ ಕ್ಯುಯರ ತಕ್ಕೊಳ್ಳು. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಡ್ರುವಿ ಕಿಮ್ಮತ್ತು ಶೀಶ ಒಂದು. ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ವಿಳಾಸ— ಕರ್ನಾಟಕ ಮೆಡಿಕಲ ಸ್ಟೋರ್ಸ್, ಡಿಸ್ಪೆನ್ಸಿಂಗ ಕೆಮಿಸ್ಟ ಮತು ಡ್ರಗಿಸ್ಟ
ಸ್ಟೇಶನರೋಡ ಹುಬ್ಬಳ್ಳಿ

ವ್ರಣಸಂಹಾರ

ಅಥವಾ

ಘಾಯದ ಮೇಲಿನ ಮಲಮು

ಈ ಮಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣಬಚ್ಚ, ಗರ್ಮಿ ಯುಜಟ್ಟಿ, ಭಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಿರಬೇಕೆಂದು ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ. ಪರಸ್ಥಳದವರಿಗೆ ಅಂಚೇಖರ್ಚು ಬೇರೆ

ಹುಬ್ಬಳ್ಳಿಯ ಏಜೆಂಟರು ದಿ ಕರ್ನಾಟಕ ಮೆಡಿಕಲಸ್ಟೋರ್ಸ, ಸ್ಟೇಶನ ರೋಡ ಹುಬ್ಬಳ್ಳಿ ಕೋಲ ಮತ್ತು ಕಿರಾಳವರಿಂದ ದೊರೆಯುವದು.

ಎಸ. ಎಚ. ಪೆಂಟರ
ಖಡೇಬಝಾರ ಬೆಳಗಾವಿ

ನೋಟೀಸಿನ ಉತ್ತರ

ಜಮಾಲಬಿ ಕೋಮ ಸೈಯ್ಯದಸಾಬ ಅಂ ಕಲ ಹಾಲಿವಸ್ತಿ ಹುಬ್ಬಳ್ಳಿ ಇವಳಿಗೆ—

ಕೆಳಗೆ ಸಹಿ ಮಾಡಿದ ಸೈಯ್ಯದಸಾಬ ವ|| ರಾಜೆಸಾಬ ವೃಣಕಲ್ ಸಾ. ಧಾರವಾಡ ಪೈಕಿ ಮಾ ರ್ಕೇಟ ಪೇಟ ಈತನು ನಿನಗೆ ಈ ನೋಟೀಸಿನಿಂದಾ ತಿಳಿ ಸುವದೇನಂದರೆ— ಈಗ ಅಂದಾಜು ೧ ತಿಂಗಳ ಹಿಂದೆ ನಿನ್ನ ತಂದೆಯಾದ ಮೊಹದಿನಸಾಬ ಈತನು ನಿನ್ನ ತಾಯಿಗೆ ಶೀಕ ಆದೆ ಅಂತಾ ನಿನಗೆ ಕರಕೊಂಡು ಹೋಗನು ಹೋಗುವಾಲಕ್ಕೆ ನಿನ್ನ ಮೈಮೇಲೆ ಇ ದ್ದ ದಾಗೀನೆಗಳ ತಪಶೀಲು ಕೆಳಗೆ ಬರೆದ ಪ್ರಕಾರ

೧ ಭಂಗಾರದಬಳೆಜೋಡು ಒಂದು ಅಜಮಾಸ ತೂಕಾ ೬ ಕಿಮ್ಮತ್ತು ೧೨೦ ೨ ಗುಂಡಿನಟೀಕಿ ಒಂದು ಅಜಮಾಸ ತೊ. ೨ ಕಿ. ೪೫ ೩ ಭಂಗಾರದ ಪೋಸ್ತು ತೋಡೆ ಜೋಡಿ ಒಂದು ತೊ. ೪ ಕಿ. ೯೦ ೪ ಕೊಳಬಂದಿ ಬೆಳ್ಳಿವು ಅಜಮಾಸ ತೂಕ ಶೇರು ೨ ಕಿ. ೩೩ ೫ ನಡಿಗೆ ಬೆಳ್ಳಿದು ಅಜಮಾಸ ತೂಕಾ ಒಂದು ಶೇರು ಕಿ. ೧೮ ೬ ಪಟ್ಟಿ ಬೆಳ್ಳಿದು ಅಜ ಮಾಸ ತೂಕಾ ಒಂದು ಶೇರು ಕಿ. ೧೮ ೭ ಬಂಗಾ ರ ಗುಂಡಿನಸರಾ ಒಂದು ಅಜಮಾಸ ಕಿ. ೧೨ ೮ ನ ತ್ತು ಬಂಗಾರದ್ದು ಅಜಮಾಸ ಕಿ. ೧೫. ದಿನಪ್ರಂತಿ ಉಡುವ ಶೀರಿಗಳು ಎರಡು ಅಜಮಾಸ ಕಿ. ೨೫ ನಿಮ್ಮ ತಂದೆ ಮೊಹದಿನಸಾಬ ಅಡಚಣಿ ಕಾಲಕ್ಕೆ ಮೈದ ರೂಪಾಯಿ ೫೦. ಅಂತೂ ರೂ. ೪೩೪

ಈ ಪ್ರಕಾರ ಪೈದಿಯತ್ತಿದಿ ಮತ್ತು ನಿಮ್ಮ ತಂದೆಗೆ ರೂಪಾಯಿ ಕೊಟ್ಟಿರುತ್ತೇನೆ ನೀನು ಎಂಟು ದಿವಸದಲ್ಲಿ ಬರುತ್ತನಂತಾ ಹೇಳಿಹೋದಿ ಬರಲಿಲ್ಲಾ ನಾನು ೩-೪ ಸಾರೆ ಕರಿಯಲಿಕ್ಕೆ ಬಂದೆ ಇವತ್ತ ತ ನಾಳೆ ಬರುತ್ತೇನೆಂದು ಸುಳ್ಳು ಹೇಳುತ್ತ ಬಂದಿ ಈಗ ನಿಮ್ಮ ತಾಯಿತಂದಿ ವ ಕೆಟ್ಟ ಜನರ ಚಿಥಾವಣಿ ಯಿಂದಾ ಈ ಸುಳ್ಳ ನೋಟೀಸು ತಾ. ೩-೨-೩೬ನೇ ದಿವಸ ಕೊಟ್ಟಿರುತ್ತೀದಿ ನೋಟೀಸಿನಲ್ಲಿ ಮಾಹರಿನ ಹ ಣ ಬರಬೇಕು ಅಂತಾ ಸುಳ್ಳೆ ಬರದೀದಿ ಈ ವರೆಗಾಗಿ ನಮ್ಮಲ್ಲಿ ಮೇಲೆ ಹಾಲ್ಕು ಜನ ಸಂಭಾವಿತರ ಸಮಕ್ಷ ಮಾ ಕೊಟ್ಟಿರುತ್ತಿದಿ ನೀನು ತಾಯಿಗೆ ಶೀಕ ಆದೆ ನೋಡಿ ಬರತೆನಂತ ಹೇಳಿ ಹೋಗಿದಿ ಈಗ ಹೊರಗೆ ಹಾಕೀರಿ ಅಂತಾ ಸುಳ್ಳು ನೋಟೀಸಿನಲ್ಲಿ ಬರದೀದಿ ಫೋಟಗಿ ಬೇಡಲಿಕ್ಕೆ ನಿನಗೆ ಹಕ್ಕ ಇಲ್ಲಾ ಮೇಲೆ ಬರದ ಪ್ರಕಾರ ಯಾವತ್ತು ಮಾಲ ತಕ್ಕೊಂಡು ಈ ನೋಟೀಸ ಮುಟ್ಟಿದ ಎಂಟು ದಿವಸದೊಳಗೆ ನನ್ನ ಮನಿಗೆ ಬರಬೇಕು ಜರ ಬಾರದಿದ್ದರೆ ನಿನ್ನ ಮೇಲೆ ಕಾಯದೆ ಪ್ರಕಾರಾ ದಿವಾಣಿ ವ ಫೌಜದಾರಿ ಒಳಗೆ ಇಲಾಜ ನಡಸಲಿಕ್ಕೆ ಬರಿವೀಕು ಈ ಯಾವತ್ತು ನೋಟೀಸಿನ ಖರ್ಚ ನಿನ್ನ ತಲೆ ಮೇಲೆ ಇರುತ್ತದೆ ತಾ. ೧೦-೨-೧೯೩೬

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ಸೈಯ್ಯದ ವಲ್ಲದ ರಾಜೇಸಾಬ ಉಣಕಲ್ಲದವರ ಸಾ. ಧಾರ ವಾಡ ಇವರದು ಇರುತ್ತದೆ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾ ರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತ ಮ್ಮ ವಾಗ್ಭೂಷಣ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾ ಡಿದರು.

R. N. B 1443

ವಿಜಯ

ಸಿಶ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭] ಧಾರವಾಡ ಗುರುವಾರ ತಾ|| ೧೧ನೇ ಫೇಬ್ರುವರಿ ೧೯೩೭ [ಸಂಚಿಕೆ ೩೫

ಸರಕಾರದಿಂದ ಪೇಟೆಂಟ ದೊರೆತಿದೆ

ಮಲ್ಹಾರ ಕಪ್ಪಲಿ.

ತೋಟಿಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉತ್ತಮ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟಿದ ಕೂಡಲೇ ಅದರ ಕೆಳಭಾಗದಲ್ಲಿಯ ಬಾಗಿಲಿನಿಂದ ನೀರು ಒಳ ಸೇರುವದು. ಕಪ್ಪಲಿಯು ಜಗ್ಗಲ್ಪಡುತ್ತಲೇ ಬಾಗಿಲಿನ ಪರದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳದ್ದಿರುವವು.

ನಂ ೧	೩॥ ಗ್ಯಾಲನ್.	ಬೆಲೆ ೨೦ ರೂ.
ನಂ ೨	೫॥ ,,	,, ೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ಬಿಗ್‌ಬೆನ್ ಟಾಯಿಂಪೀಸ ದರ ರೂಪಾಯಿ ೯

ರಿಸ್ಟವಾಚ ಬೆಳ್ಳಿ ಜುಪಿಲ್ಡ ಲಿವ್ಹರ ರೇಡಿಯಂ ದರ ರೂಪಾಯಿ ೧೫

ನಮ್ಮಲ್ಲಿ ಬೇಕಾದ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ಸ್ಟೊವ್ಹ, ಪೆಟ್ರೊಮ್ಯಾಕ್ಸ ಸಿಗುತ್ತವೆ. ಅಲ್ಲದೆ ಎಂಥ ಬಿಗಡಾಯಿಸಿದ ವಾಚುಗಳು ಯೋಗ್ಯ ದರದಿಂದ ರಿಪೇರಿ ಮಾಡಲ್ಪಡುತ್ತವೆ. ನಾವು ಹೊಸ ವಾಚ ಕಂಪನಿಯ ರಜಿಸ್ಟರ್ಡ ಏಜಂಟರು ಇರುತ್ತೇವೆ. ವ್ಹಿ. ಪಿ. ಮುಖಾಂತರ ತರಿಸಿಕೊಳ್ಳುವವರು ೧/೪ ಹಣ ಅಡ್ವಾನ್ಸ ಕಳಿಸಬೇಕು.

ಅಯ್ಯನಗೌಡರ ಅ್ಯಂಡ ಗುಡಿ.

ವಾಚ ಮರ್ಚಂಟ್ಸ ಅ್ಯಂಡ ಕಮೀಶನ್ ಏಜಂಟ್ಸ, ನಾಮಜೋಶಿ ರೋಡ, ಗದಗ

ಧಾರವಾಡದಿಂದ ಗದಗ ಮಾರ್ಗವಾಗಿ ಬೆಟಗೇರಿಗೆ ಮೋಟಾರ ಸರ್ವಿಸ್.

ನಾವು ಧಾರವಾಡದಿಂದ ದಿನಾಲು ಮುಂಜಾನೆ ೭ ಗಂಟೆಯಿಂದ ಮೋಟಾರ ಬಿಟ್ಟು ಗದಗ, ತಹಶೀಲ ಕಚೇರಿ, ಕೆಳಗಿನ ಕಲ್ಲೂರ ದಿಂದ ಬೆಟಗೇರಿಗೆ ೯ ಗಂಟೆಗೆ ಮುಟ್ಟಿಸುವೆವು. ಅಲ್ಲಿಂದ ತಿರುಗಿ ಕೂಡಲೆ ಹೊರಟು ಕಚೇರಿಯ ವೇಳೆಗೆ ೧೦॥ ಗೆ ಧಾರವಾಡಕ್ಕೆ ತರುವೆವು. ಹೆಚ್ಚಿಗೆ ಪ್ಯಾಸೆಂಜರರು ಸಿಕ್ಕರೆ ಸಾಯಂಕಾಲದಲ್ಲಿಯೂ ಮೋಟಾರ ಬಿಡುವೆವು. ಧಾರವಾಡದಲ್ಲಿ ಮಾರ್ಕೆಟ ಧರ್ಮ ಶಾಲೆಯ ಹತ್ತರ ನಮ್ಮ ಆಫೀಸದಿಂದ ಮೋಟಾರ ಬಿಡುವೆವು.

ಬೆಟಗೇರಿ ಏಜಂಟರು ಮೆ. ಹಮಜಸಾಹೇಬ ಚಾರಿಗೇರಿ ಮತ್ತು ಮೆ. ಹುಸೇನಸಾಹೇಬ ಟೊಪಜಾರ ಇವರಲ್ಲಿ ಟಿಕೇಟುಗಳು ಮಾರಾಟಕ್ಕೆ ದೊರೆಯುವವು.

ಎಮ್. ಕೆ. ನವದಾಗರ

ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಾಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ತಕ್ತೆ ಇಟ್ಟುಕೊಳ್ಳುವ ಬಡ್ಡಿ ಯು ದರವು ನಿಶ್ಚಿತ ತಿಂಗಳಿಗೆ ಸಣ್ಣದು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,

ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೧೧-೨-೨೬ ನೇ ಇಸ್ವಿ

ಹುಟ್ಟಿದವರೆಲ್ಲರೂ ಕ್ಷತ್ರಿಯರೇ.

ಹಿಂದುಸ್ಥಾನದಲ್ಲಿ ಮಾತ್ರ ವರ್ಣಾಶ್ರಮ ಧರ್ಮವಿರುವದರಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರು ಬೇರೆ ಬೇರೆ ವ್ಯವಸಾಯಗಳಿಂದ ಜೀವಿಸಬೇಕೆಂದು ಧರ್ಮಶಾಸ್ತ್ರಕಾರನು ಬರೆದನು. ಆದರೂ ಭೀಷ್ಮಾಚಾರ್ಯ ದ್ರೋಣಾಚಾರ್ಯ, ಕೃಪಾಚಾರ್ಯ ಮೊದಲಾದವರು ಕ್ಷಾತ್ರವೃತ್ತಿಯಿಂದ ನಡೆದರು. ಪುರಾಣಕಾಲದಲ್ಲಿ ಕೂಡ ಬ್ರಾಹ್ಮಣರು ಕ್ಷತ್ರಿಯರಾದಂತೆ ಪಾತಶಾಹಿಯಲ್ಲಿ ಅನೇಕ ಬ್ರಾಹ್ಮಣರು ವೀರ ಭಟರಾಗಿ ಜಹಾಗಿರಿಯನ್ನು ಗಳಿಸಿದರು. ಕ್ಷತ್ರಿಯರು ಮಾತ್ರರಲ್ಲ; ಶೂದ್ರರಲ್ಲಿಯೂ ಅನೇಕರು ಅಸಹಾಯ ಶೂರರಾಗಿ ದೊಡ್ಡ ದೊಡ್ಡ ರಾಜ್ಯಗಳನ್ನು ಸಂಪಾದಿಸಿದರು ವರ್ಣಾಶ್ರಮವೆಂಬದು ಹೆಸರಿಗೆ ಉಳಿದು ಹೊತ್ತು ಬಂದಂತೆ ಪ್ರತಿಯೊಬ್ಬನ್ನನೂ ಚಿಕ್ಕ ದೊಡ್ಡ ಪ್ರಮಾಣದಿಂದ ಅಂಸೊತ್ತಿಗೆಯನ್ನು ಅನುಭವಿಸಿದನು.

ಇಂಗ್ಲಿಷರು ಹಿಂದುಸ್ಥಾನಕ್ಕೆ ಬಂದ ಬಳಿಕ ವರ್ಣಾಶ್ರಮ ಧರ್ಮಕ್ಕೆ ಬೇರೆ ಸ್ವರೂಪ ಬಂತು. ಬ್ರಾಹ್ಮಣರು ಸರಕಾರದ ಬರಹ ಗೀಚುವ ಭೃತ್ಯರಾದರು. ಶೀಖ, ಮರಾಠಾ, ರಜಪೂತ ಮೊದಲಾದವರು ದಂಡಿನಲ್ಲಿ ಸೇರಿದರು. ಕ್ಷತ್ರಿಯರು ಧರ್ಮಾಶ್ರಮಗಳ ಸಂರಕ್ಷಣೆ ಮಾಡಬೇಕೆಂಬ ಉದಾತ್ತವಾದ ತತ್ವದಿಂದಲ್ಲ; ಹೊಟ್ಟೆಯ ದೆಸೆಯಿಂದ ಪರಕೀಯರ ಸೇವೆಯನ್ನು ಅಂಗೀಕರಿಸಿದರು. ದಂಡಿನ ಸಂಖ್ಯೆಯು ಎರಡು ಲಕ್ಷಕ್ಕಿಂತ ಹೆಚ್ಚಿಲ್ಲ. ಸೈನ್ಯದಲ್ಲಿ ಸೇರಿ ಕವಾಯತು ಕಲಿತವನು ಕ್ಷತ್ರಿಯನಾಗಿ ಉಳಿದವರು ಹೊಲ ಮಾಡುವ ಒಕ್ಕಲಿಗನೂ, ವ್ಯಾಪಾರ ಮಾಡುವ ವೈಶ್ಯನೂ ಕೂಲಿ ಮಾಡುವ ಶೂದ್ರನೂ ಆಗುವನು.

ಇಂಗ್ರೇಜಿ ಶಿಕ್ಷಣದ ಮಹಿಮೆಯಿಂದ ಹಿಂದೀ ಜನರ ಆಚಾರವಿಚಾರಗಳಲ್ಲಿ ಕ್ರಾಂತಿಯಾಗಿರುತ್ತದೆ. ಇಂಗ್ಲಿಷರಲ್ಲಿ ವರ್ಣಾಶ್ರಮವಿಲ್ಲ. ಅವರಲ್ಲಿ ಬೇಕಾದವನು ಬೇಕಾದ ವ್ಯವಸಾಯ ಮಾಡುವನು. ಪಾಪ್ರಿಯ ಮಗನು ಹಿಂದೂ ಜನರ ವಿಚಾರದಿಂದ ಕೀಳೆನಿಸುವಂಥ ಹೋರೆ ಮಾಡುವನು. ಅದೇ ಪ್ರಕಾರ ಹಿಂದುಸ್ಥಾನದಲ್ಲಿಯೂ ಉದ್ಯೋಗ ವ್ಯವಸಾಯದಲ್ಲಿ ಉಚ್ಚ ನೀಚ ಭಾವವಿಲ್ಲದಾಗುತ್ತಿರುವದು.

ಸ್ಕೀನ ಕಮಿಟಿಯ ಮುಂದೆ ನಡೆದ ಸಾಕ್ಷಿಗಳಲ್ಲಿ ಪ್ರತಿಯೊಬ್ಬನಿಗೂ ಬಲವಂತಿಕೆಯಿಂದ ದಂಡಿನ ಶಿಕ್ಷಣ ಕೊಡಬೇಕೆಂಬದಾಗಿ ಅನೇಕರು ಸಾಕ್ಷೀ ನುಡಿದಿದ್ದಾರೆ. ಸಕ್ತಿಯ ಪ್ರಾಥಮಿಕ ಶಿಕ್ಷಣದಂತೆ ಎಲ್ಲರೂ ಈ ಶಿಕ್ಷಣ ಹೊಂದುವದು ಶಕ್ಯವಿಂದಿದ್ದರೂ, ಕಲಿಯುವವರಿಗೆ ಅಡ್ಡೀ ಇರಬಾರದೆಂದು ಶಿಕ್ಷಣದ ಮುಖ್ಯ ತತ್ವವಾಗಿರತಕ್ಕದ್ದು. ದಂಡಿನ ಹೊರ್ತು ಎಲ್ಲ ಖಾತೆಗಳಲ್ಲಿಯೂ ಶ್ರೇಷ್ಠರಿಂದ ಕನಿಷ್ಠರ ತನಕ ಎಲ್ಲ ಕುಲದವರಿಗೂ ಕೆಲಸ ಕೊಡುತ್ತಿರುವಂತೆ, ದಂಡಿನಲ್ಲಿಯೂ ವರ್ಣಾಶ್ರಮದ ವಿಚಾರ ಮಾಡದೆ, ಬ್ರಾಹ್ಮಣರು ಮೊದಲು ಮಾಡಿಕೊಂಡು, ಕ್ಷತ್ರಿಯ ಅಥವಾ ಖಿನೀಸರೆಸಿಕೊಳ್ಳದಂಥ ಕುಲಗಳ ಜನರನ್ನು ಸೇರಿಸಿಕೊಳ್ಳಬೇಕೆಂದು ಕೆಲವು ಮಹತ್ವದ ಸಾಕ್ಷಿಗಳಾಗಿವೆ. ಬ್ರಹ್ಮದೇಶದಲ್ಲಿ ಇಂಥ ಭೇದವೇ ಇಲ್ಲೆಂದು ಬ್ರಹ್ಮಜನರು ಸಾಕ್ಷೀ ಹೇಳಿದ್ದಾರೆ. ಅದೇ ಪ್ರಕಾರ ಹಿಂದುಸ್ಥಾನದಲ್ಲಿಯೂ ದಂಡಿನ ಬಾಗಿಲವು ಎಲ್ಲರಿಗೂ ತೆರೆದಿರಬೇಕೆಂದೂ, ಸ್ತ್ರೀಯರಿಗೂ ಶಿಕ್ಷಣ ಕೊಟ್ಟರೆ- ಅವರೂ ಧನುರ್ಧಾರಿಯಾಗುವರೆಂದೂ ಸಾಕ್ಷಿಗಳಲ್ಲಿ ಅಭಿಪ್ರಾಯ ಹೊರಬೀಳುತ್ತದೆ ಯುರೋಪಿಯನ್ನ ಸ್ತ್ರೀಯರು ರಿವಲ್ಯೂಸ ಮುಂತಾದವುಗಳಲ್ಲಿ ಸೇರಿ, ಸೋಲ್ಜರರ ಆಸ್ಥೆ ಮಾಡುತ್ತಿದ್ದಾರೆ. ಆದರೆ ಹಿಂದೂ ಸ್ತ್ರೀಯರು ಯುದ್ಧ ಮಾಡಿ, ಜಯಶಾಲಿಯಾಗಿದ್ದಾರೆ. ಅವರೂ ಲಷ್ಕರೀ ಶಿಕ್ಷಣ ಹೊಂದಿದರೆ- ಪ್ರಮೀಳೆ ಅಥವಾ ಲಕ್ಷ್ಮೀಬಾಯಿಯನ್ನು ಸಹಜವಾಗಿ ಮರೆಸಬಹುದು ಆದುದರಿಂದ ಹುಟ್ಟಿದವರೆಲ್ಲರೂ ಕ್ಷತ್ರಿಯರೇ ಎಂಬ ಭಾವವಿಟ್ಟುಕೊಂಡು ದೇಶ ಪುಷ್ಟಿಯುಳ್ಳಂಥವರನ್ನು ದಂಡಿನಲ್ಲಿ ಸೇರಿಸುವದೇ ಪ್ರಕೃತದ ರಾಜಧರ್ಮವಾಗುತ್ತದೆ.

ಕೌನ್ಸಿಲ ಚುನಾವಣೆಯು ಮುಂದೆ ಬೀಳುವದೇ?

ಮುಂಬಯಿ ಇಲಾಖೆಯ ಕಾಯದೆ ಕೌನ್ಸಿಲದ ಚುನಾವಣೆಯನ್ನು ಒಂದು ವರ್ಷ ಮುಂದೆ ಹಾಕಬೇಕೆಂದು ಸರಕಾರದ ಮನಸ್ಸಿನಲ್ಲಿದ್ದು, ಆ ಪ್ರಕಾರ ಮೆಂಬರರ ಮತ ಕೇಳಿದ್ದಾರೆಂದೂ, ಅದಕ್ಕೆ ಇವರು ಒಪ್ಪಿಗೆ ಕೊಟ್ಟಿದ್ದಾರೆಂದೂ ಒಂದು ವರ್ತಮಾನವು ಪ್ರಸಿದ್ಧವಾಗಿದೆ. ಕೌನ್ಸಿಲ ಚುನಾವಣೆಯನ್ನು ಒಂದು ವರ್ಷ ಮುಂದೆ ಹಾಕುವಂಥ ಘನ ಪ್ರಸಂಗವು ಸರಕಾರಕ್ಕೆ ಏಕೆ ಉಂಟಾಯಿತೆಂದು ಈಗಲೇ ತಿಳಿಯಲು ಶಕ್ಯವಿಲ್ಲ.

ಗೋವೆಯಲ್ಲಿದ್ದ ಹಲಚಲಿಯು.

ಲಿಸಬಿನ ಸರಕಾರದವರು ಗೋವೆಯ ಗೆವ್ಹರ್ನರ ಜನರಲರ ರಾಜೀನಾಮೆಯನ್ನು ಅಂಗೀಕರಿಸಿದಾಗಿನಿಂದ ಗೋವೆಯ ನಾಡಿನಲ್ಲಿ ಕ್ಷೋಭವು ತಲೆ ಪ್ರಕಟ್ಟವಾಗಿದೆ. ಹಿಂದುಸ್ಥಾನದ ಪೋರ್ತುಗಾಲ ವಸಾಹತಿನಲ್ಲಿ ಮಾತ್ರವಲ್ಲ, ಮೊಜಾಂಬಿಕ, ಅಂಗೋಲಾ ಮುಂತಾದ ಪೋರ್ತುಗಾಲದ ವಸಾಹತುಗಳಲ್ಲೆಲ್ಲ ರಾಜ್ಯಕಾರಭಾರದ ಘಟ್ಟಿಯು ಕೆಟ್ಟು ಹೋಗಿದೆ. ಈ ದೇಶಗಳಿಂದ ದ್ರವ್ಯಶೋಷಣ ಮಾಡುವದೊಂದೇ ಮಂತ್ರಿಗಳ ವಿನೋದವಾಗಿರುತ್ತದೆಂದು ಪ್ರಜರು ಧಾರಾಳವಾಗಿ ಮಾತಾಡುತ್ತಿದ್ದಾರೆ.

ಪೋರ್ತುಗಾಲ ಸರಕಾರದವರು ವಸಾಹತುಗಳಿಗೆ ಸ್ಥಾನಿಕ ಸ್ವರಾಜ್ಯದ ಅಧಿಕಾರ ಕೊಟ್ಟಿದ್ದಾರೆ. ಮಂತ್ರಿಗಳ ಕೃತಿಯಿಂದ ಅಧಿಕಾರವು ಕೇವಲ ನಾಮಧಾರಿ ಆಗುವ ಬಗೆಯಲ್ಲಿರುವದು. ಗೋವೆಯ ಗವ್ಹರ್ನರರು ಸೂಚಿಸಿದ ಉಪಾಯಗಳಂತೆ ಕಾರಭಾರ ಮಾಡದಿದ್ದರೆ- ದೇಶದ ಸಾಂಪತ್ತಿಕ ಸ್ಥಿತಿಯು ಕೆಟ್ಟು ದೇಶವು ದಿವಾಳಿಗೆ ಬರುವದು. ವ್ಯಾಪಾರ ಕುಗುವದು, ಮತ್ತು ಹುಂಡಿ ಆರದಷ್ಟು ಹಾನಿಯಾಗುವದು, ಮತ್ತು ಸ್ವರಾಜ್ಯಾಧಿಕಾರವು ಹೆಸರಿಗೆ ಮಾತ್ರ ಆಗುವದೆಂದು ಪ್ರಜರು ದೊಡ್ಡ ದೊಡ್ಡ ಸಭೆಗಳನ್ನು ಮಾಡಿ, ಮಂತ್ರಿಗಳಿಗೆ ತಾರಿನಿಂದ ತಿಳಿಸಿದ್ದಾರೆ. ಈ ಚಳವಳಿಯಲ್ಲಿ ಬಡವರು, ಭಾಗ್ಯವಂತರು ಮತ್ತು ಎಲ್ಲ ಧರ್ಮದವರು ಒಂದು ವಿಚಾರದಿಂದ ಸೇರಿದ್ದಾರೆ.

ದಕ್ಷಿಣ ಆಫ್ರಿಕೆಯಲ್ಲಿ ವರ್ಣದ್ವೇಷ.

ಲಾರ್ಡ ರೀಡಿಂಗಸಾಹೇಬರು ಪಂಡಿತ ಮೋತಿಲಾಲ, ಲಾಲಾ ಲಜಪತರಾಯ ಮೊದಲಾದವರ ಕೂಡ ದಕ್ಷಿಣ ಆಫ್ರಿಕೆಯಲ್ಲಿ ಹಿಂದೀ ಜನರ ವಿರುದ್ಧ ನಡೆದಿರುವ ಅನ್ಯಾಯದ ಕೃತ್ಯಗಳ ಕಾಯದೆಯ ಬಗ್ಗೆ ಸಂಭಾಷಣೆ ಮಾಡಿದ ಸುದ್ದಿಯನ್ನು ನಿನ್ನಿನ ಸಂಚಿಕೆಯಲ್ಲಿ ಬರೆದಿರುತ್ತೇವೆ. ಈ ಸಂಭಾಷಣೆ ನಡೆದ ನಿನ್ನೆಗೆ ಮುಂದಾಗಿ ಕ್ಲಾಸ ಏರಿಯಾ ಬಿಲ್ಲೆಂಬ ಹೆಸರಿನೊಂದು ಬಿಲ್ಲು ಬಹುತೇಕವಾಗಿ ಆಲ್ಲಿಯ ಪಾರ್ಲಮೆಂಟ ಸಭೆಯಲ್ಲಿ ಪಾಸಾಯಿತು. ಅಧ್ಯಕ್ಷರು ಸಮ್ಮತಿ ಕೊಟ್ಟರೆ- ಇದು ಪಾಸಾದ ಸ್ವರೂಪದಲ್ಲಿ ಬರುವದು. ಈ ಕಾಯದೆಯಿಂದ ಮ್ಯುನಿಸಿಪಾಲಿಟಿಗಳ ಹದ್ದಿನಲ್ಲಿ ವ್ಯಾಪಾರ ಮಾಡುವದಕ್ಕೆ ಪರವಾನಿಗೆ ಕೊಡುವ ಅಧಿಕಾರವು ಮ್ಯುನಿಸಿಪಾಲ್ಟಿಗಳಿಗೆ ಬರುತ್ತದೆ. ಹಿಂದೀ ವರ್ತಕರು ಮುಖ್ಯವಾಗಿ ದೊ

ಷ್ಟ ದೊಡ್ಡ ಪಟ್ಟಣಗಳಲ್ಲಿರುವರು. ಗೌರಕಾಯಸ್ಥರು ಅಧಿಕಾರಸ್ಥರಾಗಿರುವದರಿಂದ ತಾವು ಕೊಡುವ ಸಂಪೂರ್ಣ ಸ್ವಾತಂತ್ರ್ಯವು ಅವರಿಗೇ ಇರುತ್ತದೆ. ಆದ್ದರಿಂದ ಸ್ವಾರ್ಥ ಪರಾಯಣರೂ, ಪರೋಪಕಾರ ರಹಿತರೂ ಆದಂಥ ಗೌರಕಾಯಸ್ಥರು ಹಿಂದೀ ಜನರಿಗೆ ನ್ಯಾಯವಾದ ಹಕ್ಕುಗಳನ್ನು ಕೊಡುವದನ್ನೇ ತಪ್ಪಿಸುವ ಉಪಕ್ರಮ ಮಾಡಿದ್ದಾರೆ. ಹಾಗಾದರೆ ಹಿಂದೀ ಜನರು ಹಲ್ಲಿಲ್ಲಿಕ್ಕೆ ಅನುವು ಇಲ್ಲದವರಾಗಿ ಗಂಟು ಗದಡಿ ಕಟ್ಟಿಕೊಂಡು, ದೇಶಭ್ರಷ್ಟರಾಗಬೇಕೆಂದು ಇವರ ಖಂಡಿತವಾದ ತಿಳುವಳಿಕೆಯು. ಇಷ್ಟರಿಂದಲೇ ಇವರು ತೃಪ್ತರಾಗದೆ, ಹಿಂದೀ ಜನರ ವಿರುದ್ಧ ದೊಡ್ಡ ದೊಡ್ಡ ಸಭೆಗಳನ್ನು ಮಾಡಿ ಅವರ ಮೇಲೆ ಅಲ್ಲದ ಸಲ್ಲದ ಆರೋಪಗಳನ್ನು ಹೊರಿಸುವರು. ಇವೆಲ್ಲ ಕೃತ್ಯಗಳನ್ನು ಆರ್ಲ ರೀಡಿಂಗಸಾಹೇಬರ ಕಡೆಯಿಂದ ಅಲ್ಲಿಗೆ ಹೋದ ಡೆಪ್ಯೂಟೇಶನದವರು ಬಿನಾಖು ಪ್ರತ್ಯಕ್ಷ ನೋಡುತ್ತಿದ್ದಾರೆ. ಇವರು ಕಳಿಸಿದ ರಿಪೋರ್ಟಿನ ವಿಚಾರ ಮಾಡುವದಕ್ಕಾಗಿಯೇ ಸಾಹೇಬರವರು ಮಂಡಿಕಪೆ ಪರಿಷತ್ತನ್ನು ಕರಿಸಿಕೊಂಡರು. ಪಾಶ್ಚಾತ್ಯರ ಅತ್ಯಂತ ಸ್ವಾರ್ಥವಿಚಾರದಿಂದ ಬೋಯರರನ್ನು ಹಾದಿಗೆ ತರುವ ಕೆಲವು ಹಿಂದಾಗಿಟ್ಟು, ಮುಳ್ಳಿನಿಂದಲೇ ಮುಳ್ಳು ತೆಗೆಯುವ ಕಾಲವು ಬಂದಿರುತ್ತದೆ.

ಪ್ರಾಥಮಿಕ ಶಿಕ್ಷಕರ ಸಂಬಳ.

—೦—

ಮುಂಬಯಿಯಲ್ಲಿ ಪ್ರಾಥಮಿಕ ಶಿಕ್ಷಣದ ಅಭಿಮಾನವುಳ್ಳಂಥ ಜನರದೊಂದು ಪರಿಷತ್ತು ಕೂಡಿದೆ. ಕರಾಚಿ ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಪರಿಷತ್ತಿನ ಅಧ್ಯಕ್ಷರಾಗಿದ್ದಾರೆ. ಪ್ರಾಥಮಿಕ ಶಾಲೆಗಳ ಶಿಕ್ಷಕರ ಸಂಬಳವನ್ನು ಸರಕಾರವು ಕಾಂಚಿವ ಸ್ಕೀಮಿನಷ್ಟು ಕೊಡಬೇಕೆಂಬ ಪ್ರಶ್ನೆ ಹೊರಟಿತು. ಮ. ಕಾವರಿಯವರ ರೇವಡಿಗಾರರ ಅಂಗಡಿಯ ಮೇಲೆ ಬ್ರಹ್ಮಾವರ್ಗವನ್ನುವಂಥ ಭಾಷಣ ಮಾಡಿದರು. ಮ್ಯುನಸಿಪಾಲಿಟಿ ಲೋಕಲ ಬೋರ್ಡುಗಳು ಈ ಪ್ರಕಾರ ಸಂಬಳ ಕೊಟ್ಟರೆ. ಸರಕಾರವು ಅಡ್ಡ ಬರಲಾರದೆಂದು ಇವರು ಅಂದಿದ್ದಾರೆ.

ಇಂದೂರಿಂದ ದ್ರವ್ಯದ ನದಿಯು ಹರಿಯುತ್ತಿರುವದೆಂದು ಪ್ರಸಿದ್ಧವಾದ ಸುದ್ದಿಯು ತಳಬುಡದ ವಿಲ್ಲದ್ದಿದ್ದು, ಇಂಥ ಸುದ್ದೀ ಸೂರ್ಯನ ಮೇಲೆ ಕಾಯಿದೆ ಪ್ರಕಾರ ಕೆಲಸ ನಡಿಸುವೆವೆಂದು ದಿವಾನ ನರಸಿಂಗರಾಯರು ಪ್ರಸಿದ್ಧ ಮಾಡಿದ್ದಾರೆ.

ತಗ್ಗು ಇದ್ದಲ್ಲಿ ನೀರು ಹರಿಯುವದು.

—೦—

ಜಿ. ಆಯ. ಪಿ. ರೇಲ್ವೆಯವರು ಶ್ರೀಮಂತವರ್ಗದವರ ದೆಸೆಯಿಂದ ಫರ್ಸ್ಟಕ್ಲಾಸದ ಟಿಕೇಟುಗಳ ಆರು ತಿಂಗಳ ಸೀಜನ ಪಾಸುಗಳನ್ನು ತೆಗೆಯುವರು. ಸಾಧಾರಣವಾಗಿ ಇದರ ದಂಡವು ಮೈಲಿಗೆ ೧೮ ಪೈ ಉಂಟು. ಸೀಜನ ಟಿಕೇಟು ದರವು ೧೫ ಪೈ ಆಗುವದು. ಶ್ರೀಮಂತರಿಗಿಂತ ಮಧ್ಯಮ ಪ್ರತಿಯ ವರ್ಗದವರು ಲಕ್ಷ ಸಂಖ್ಯೆಯುಂಡಿದ್ದು ಇವರಿಗಾಗಿ ಕಡಿಮೆ ದಂಡ ಸೀಜನ ಟಿಕೇಟು ತೆಗೆಯುವದು ಅವಶ್ಯವಾಗುತ್ತದೆ. ಇಂಥವನ್ನು ಕೇಳುವವರಾರು? ತಗ್ಗು ಇದ್ದಲ್ಲೇ ನೀರು ಹರಿಯುವದುಂಟು.

ಮುದುಕರ ಕುರುವ ಗಟ್ಟಿಗತನ

—೦—

ಹೈದರಾಬಾದ ಮತ್ತು ಸಿಕಂದರಾಬಾದಿನ ಮಧ್ಯದಲ್ಲಿರುವ ಹುಸೇನಸಾಗರ ಕೆರೆಯು ನಾಲ್ಕು ಮೈಲು ಉದ್ದವಿರುತ್ತದೆ. ಇದರಲ್ಲಿ ಒಂದು ದಂಡೆಯಿಂದ ಮತ್ತೊಂದು ದಂಡೆಗೆ ಈಸಿ, ಪುನಃ ಮರಳಿ ಬರುವ ಸಾಹಸವನ್ನು ಹಿಂದೆ ಅನೇಕರು ಮಾಡಿದರು. ಆದರೆ ಯಾರ ಹೊಂದಲಿಲ್ಲ. ಮ್ಯೊಲ್ವಿ ಯುಸೂಫ ಹುಸೇನನಾಮಕನೊಬ್ಬ ೬೦ ವರ್ಷದ ವೃದ್ಧ ಪೈಲವಾನನು ಈಜುವ ಸಂಕಲ್ಪ ಮಾಡಿದ ಶುಕ್ರವಾರ ದಿವಸ ಆರು ಘಂಟೆಯಲ್ಲಿ ಈಸಲಿಕ್ಕೆ ಪ್ರಾರಂಭಿಸಿದನು. ಈತನ ಈ ಸಾಹಸವನ್ನು ನೋಡಲು ಸಾವಿರಾರು ಜನರು ದುರ್ಬಿನ ಸಹಿತವಾಗಿ ನೆರೆದರು. ಸಂಗಡ ದೋಣಿ ಬೇಕಾಗಿಲ್ಲೆಂದು ಹೇಳಿದರೂ, ಇಬ್ಬರು ಸಾಹೇಬರು ಅಂಗರಕ್ಷಕರಾಗಿ ದೋಣಿಯನ್ನು ಹಾಕಿದ್ದರು. ಪೈಲವಾನನು ಆಡಿದಂತೆ ಎರಡೂವರೆ ತಾಸುಗಳಲ್ಲಿ ಎಂಟು ಮೈಲು ಈಸಿದನು. ದಂಡೆಗೆ ಬಂದಕೂಡಲೆ ಪ್ರೇಕ್ಷಕರು ಪ್ರಚಂಡ ಘೋಷ ಮಾಡಿ, ಜಯ ಜಯಕಾರ ಮಾಡಿದರು. ಮುದುಕನಾಗಿ ಸತತವಾಗಿ ಎರಡೂವರೆ ತಾಸು ನೀರಲ್ಲಿದ್ದರೂ, ಮೌಲ್ವಿಯು ದಣಿಯಲಿಲ್ಲ!!

ಪೋಲೀಸ ಸಾಹೇಬನ ಕೊಲೆ.

ಸಂಪದ್ದಿನಲ್ಲಿ ಮರ್ಧಾನವೆಂಬ ಪ್ರದೇಶದಲ್ಲಿ ಅಸಿಸ್ಟಂಟ ಪೋಲೀಸ ಸಾಹೇಬರಾದ ಮ. ಎಕಿನ್ಸರೆಂಬ ಸಾಹೇಬರು ತಮ್ಮ ಹೆಂಗಿಯೊಡನೆ ಸಾಯಂಕಾಲದ ಹವೆ ತಕ್ಕೊಳ್ಳುವದಕ್ಕೆ ಹೋಗುತ್ತಿದ್ದಾಗ, ಒಬ್ಬ ಪಠಾಣನ ಕೈಯಲ್ಲಿ ರಾಮಫಲ ಒಂದಾತನು ಕಂಡರು. ಒಂದೂತನು ಎಲ್ಲಿಯದು? ಏಕೆ ತಂದಿ ಎಂದು ಸಾಹೇಬರು ಆತನಿಗೆ ಪ್ರಶ್ನೆ ಮಾಡಿದ ಕೂಡಲೆ ಆತನು ಪಲಾಯನ ಹೇಳಿಸಿದನು. ಸಾಹೇಬರು ಆತನನ್ನು ಹಿಡಿಯಲು ಬೆನ್ನಟ್ಟಿದರು. ಪಠಾಣನು ಗಕ್ಕನೆ ತಿರುಗಿ ಸಾಹೇಬರ ಮೇಲೆ ಗುಂಡು ಹಾಕಿದನು. ಗುಂಡು ಹಣೆಗೆ ಬಡಿದು, ಸಾಹೇಬರು ನೆಲಕ್ಕೆ ಬಿದ್ದರು.

ಇಂದೂರಿನ ಸಂಗತಿಗಳು.

ಶಿವಾಜೀರಾವ ನೇಮಾಣಿಕರ. ಜಗದೀಶ್ವರರು, ಈ ... ದ ಮುಂದೆ ಕಾಗದ ಪತ್ರಗಳನ್ನು ಇಟ್ಟು ... ಕಾಗಿ ಮುಂಬಯಿಯಿಂದ ಮ. ಜುಲೈ ... ದಿಲ್ಲಿಗೆ ಪಯಣ ಮಾಡಿದ್ದಾರೆ.

ನೀಜರ ಗ್ರಾಮಾಧಿಕಾರಿ ... ದ ... ಇವರು ಇಂದೂರಿಗೆ ಹೋ ...

ಶ್ರೀ ಹೋಳಕರ ಮಹಾರಾಜರನ್ನು ಕಂಡು ... ಅನೇಕ ಪ್ರಮುಖರು ಹೋಗಿದ್ದರು. ಮಹಾರಾಜರು ಎ ... ಸಂತಾಪ ಪ್ರಕಟಿಸಿ ... ಇಲ್ಲ. ದ್ರವ್ಯ ... ಮುಂದೆ ... ಯೋ ... ವದೆಂದು ... ರು ... ಬಗೆದಿದ್ದಾರೆ.

ಧಾರವಾಡ—

ಇಂದು ಶಿವಯೋಗದ ದೆಸೆಯಿಂದ ಮು ... ದ್ರಾಲಯಕ್ಕೆ ರಜೆ ಇರುವದರಿಂದ ನಾಳಿನ ಸಂಚಿಕೆಯ ವಿಜಯವು ಪ್ರಕಟವಾಗುವದಿಲ್ಲ.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ. ಆಪರೇಟಿವ್ಹ ... ಯ ... ಪ್ರಕಾರ ... ದ ...

ಕರ್ನಾಟಕದಲ್ಲಿ ಬ್ಯಾಂಕಿನ ... ವಿದ್ದ ...

ಠೇವುಗಳು ...

ಬಂದಿಗೆಯು ... ಮಾಡಿ ಮೊದಲಾಗಿ ಬ್ಯಾಂಕಿನ ಎಲ್ಲ ... ವ್ಯ ... ವಿನಾಯಿತಿಗಳಿಗೆ ... ಬಂದ ತಿಳಕೊಳ್ಳಬೇಕು.

ವೃದ್ಧಪರವಾನ ... ಮ್ಯಾನೇಜರ ...

ಟಿ. ಎಸ್. ಮೋಟಾರ ಸರ್ವ್ಹೀಸ
ಹುಬ್ಬಳ್ಳಿ

ಶಿವರಾತ್ರಿ ಸಮಯದಲ್ಲಿ ಗೋಕರ್ಣಕ್ಕೆ ಹೋಗುವ ಪ್ರಯಾಣಿಕರ ಸೌಕರ್ಯಕ್ಕಾಗಿ

ತಾರೀಖು ೧—೨—೨೮ ರಿಂದ ರೆಗ್ಯುಲರ ಸರ್ವ್ಹೀಸ ಇಟ್ಟಿದೆ.

— ಕಾಲಕ್ರಮಗಳು —

೧. ಹುಬ್ಬಳ್ಳಿ ಬಿಡುವದು	ಗೋಕರ್ಣ ಸೇರುವದು
ಬೆಳಗ್ಗೆ ೭ ಘಂಟೆ.	ಸಾಯಂಕಾಲ ೫ ಘಂಟೆ
ಸಾಯಂಕಾಲ ೫ ಘಂಟೆ	ಬೆಳಗ್ಗೆ ೫ ಘಂಟೆ
೨. ಸಾಗರ ಬಿಡುವದು	ಗೋಕರ್ಣ ಸೇರುವದು
ಬೆಳಗ್ಗೆ ೭ ಘಂಟೆ	ಸಾಯಂಕಾಲ ೫ ಘಂಟೆ

ಶಿರಸೀಗಾ
೩೦-೧-೧೯೨೮

ಎಮ್. ಮಂಜಪ್ಪಾ,
ಪ್ರೊಪ್ರಾಯಿಟರ.

ಮಾತಾಡುವ ಔಷಧವು.

ಅಪ್ಪಾ! ಮಾತಾಡುವದಿಲ್ಲೇಕೆ! ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ! ತಲೆನೋವೋ! ಹಲ್ಲುಶೂಲೆಯೋ! ಮೈಯಲ್ಲಿ ನೋಯುತ್ತದೆಯೋ! ಆಗಿರುವದಾದರೂ ಏನು!

ಅಪ್ಪನು— ಕಂದಾ— ಹೌದು ಮೈಯಲ್ಲಾ ನೋಯುತ್ತದೆ.

ಕಂದ— ಹಾಗಾದರೆ ಮೊಮೆಂಟ ಕ್ಯುಯರ ತಕ್ಕೊಳ್ಳು. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕುಣಿಯುವಿ ಕಿಮ್ಮತ್ತು ಶೀಶ ಕುಸು. ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ಶಿಸ್ತಾರ ಮಾಡಿ ಕೊಡುವೆವು.

ವಿಳಾಸ— ಕರ್ನಾಟಕ ಮೆಡಿಕಲ ಸ್ಟೋರ್ಸ್, ಡಿಸ್ಪೆನ್ಸಿಂಗ ಕೆಮಿಸ್ಟ ಡುಕು ಡ್ರಗಿಸ್ಟ
ಸ್ಟೇಶನರೋಡ ಹುಬ್ಬಳ್ಳಿ

ವ್ರಣಸಂಹಾರ
ಅಥವಾ
ಘಾಯದ ಮೇಲಿನ ಮಲಮು

ಈ ಮಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಹುಣ್ಣು ಮತ್ತು ಒಣಬಣ್ಣೆ, ಗರ್ಮಿ ಉಪಟ್ಟೆ, ಭಗೇಂದ್ರ, ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಬೇಕೆಂದು ... ಒಂದು ಡಬ್ಬಿಗೆ ಎರಡೇ ಆಣೆ. ... ಅಂಚೇವೆಚ್ಚ ಬೇರೆ

ಹುಬ್ಬಳ್ಳಿಯ ಮಾಂಟೇನು- ದಿ ಕರ್ನಾಟಕ ಮೆಡಿಕಲಸ್ಟೋರ್ಸ- ಸ್ಟೇಶನ ರೋಡ ಹುಬ್ಬಳ್ಳಿ ... ಮತ್ತು ... ದೊರೆಯುವದು.

ಎನ. ಎಫ. ಪೆಂಟರ
ಮಿಡೇಬಝಾರ ಬೆಳಗಾವಿ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ
ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ... ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ,
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಆರುಲಕ್ಷದ ಮೇಲೆ ... ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ... ಮಾಡುವದು. ಕಾಹಿಲ ಮುದ್ದತಿ ... ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಠಾರ,
ಮ್ಯಾನೆಜಿಂಗ ಡಾಯರೆಕ್ಟರ.

ಜಾಹೀರಾತಿನ ದರಗಳು.

ತಿಂಗಳು ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ... ಆಣೆ ಡಬಲ್‌ಕಾಲಮಿನ ಓಳಿಗಳಿಗೆ ... ಕಾಯಂ ಜಾಹೀರಾತುಗಳನ್ನು ಕೊಡುವವರು ... ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

ವಿಕ್ಕ ಪತ್ರಿಕೆ

೧೨ ತಿಂಗಳಿಗೆ		೧೨—೮—೦ ರೂ
೬	„	೬—೦—೦ ರೂ
೩	„	೪—೦—೦ ರೂ
ವಾರಪತ್ರಿಕೆ ೧ ವರ್ಷಕ್ಕೆ		೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ, ಧಾರವಾಡ

ಚಂದಾದಾರರಿಗೆ ಸೂಚನೆ.

ಫೆಬ್ರುವರಿ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ಶಿಕ್ಷ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕರಿಸ ಮಾಡಿ ವಿಜಯದ ಕ್ಕೆ ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ... ಮುದ್ರಿಸಿ ... ಧಾರವಾಡದಲ್ಲಿಯ ... ಪ್ರಸಿದ್ಧ ಮಾಡಿ ... ದನು.

ಸಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:– ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭) ಧಾರವಾಡ ಶನಿವಾರ ತಾರೀಖು ೧೩ನೇ ಫೇಬ್ರುವರಿ ೧೯೨೬ (ಸಂಚಿಕೆ ೩೬

ಸರಕಾರದಿಂದ ಪೇಟಂಟ ದೊರೆತ

ಮಲ್ಹಾರ ಕಪ್ಪಲಿ.

ತೋಟಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟಲು ಅದರ ಕೆಳಭಾಗದಲ್ಲಿಯ ಜಾಳಿಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಎತ್ತಲ್ಪಡುತ್ತಲೇ ಜಾಳಿಗೆಯು ಪರದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ [illegible] ನೀರನ್ನು ಹೊರ ಚಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ	೨೦ ರೂ.
ನಂ ೨	೫೫ ,,	,,	೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಧಾರವಾಡದಿಂದ ಗದಗ ಮಾರ್ಗವಾಗಿ ಬೆಟಗೇರಿಗೆ ಮೋಟಾರ ಸರ್ವೀಸ.

ನಾವು ಧಾರವಾಡದಿಂದ ದಿನಾಲು ಮುಂಜಾನೆ ೭ ಗಂಟೆಯಿಂದ ಮೋಟಾರ ಬಿಟ್ಟು ಗದಗ, [illegible] [illegible] ಬೆಟಗೇರಿಗೆ ೯ ಗಂಟೆಗೆ ಮುಟ್ಟಿಸುವೆವು. ಅಲ್ಲಿಂದ ತಿರುಗಿ ಕೂಡಲೆ ಹೊರಟು ಕಚೇರಿಯ ವೇಳೆಗೆ ೧೦|| ಗೆ ಧಾರವಾಡಕ್ಕೆ ತರುವೆವು. ಪೆಟ್ಟಿಗೆ ಪ್ಯಾಸೆಂಜರರು ಸಿಕ್ಕರೆ ಸಾಯಂಕಾಲದಲ್ಲಿ ಸಹ ಮೋಟಾರ ಬಿಡುವೆವು. ಧಾರವಾಡದಲ್ಲಿ [illegible] ಧರ್ಮಶಾಲೆಯ ಹತ್ತರ ನಮ್ಮ [illegible] ಮೋಟಾರ ಬಿಡುವೆವು.

ಬೆಟಗೇರಿ ಎಜಂಟರು ಮೆ. [illegible] ಬಾರಿಗಿಡದ ಮತ್ತು ಮೆ. [illegible] ಇವರಲ್ಲಿ ಟಿಕೀಟುಗಳು ದೊರಕಲ್ಕೆ [illegible] ವವು.

ಎಚ್. ಕೆ. [illegible]
ಧಾರವಾಡ

ಬಿಗೆಪಿನ್ ಟಾಯಿಂಪೀಸ ದರ ರೂಪಾಯಿ ೯ | ರಿಸ್ಟವಾಚ ಬೆಳ್ಳಿ ಜುಬಿಲ್ಲ ಲಿವ್ಹರ ರೇಡಿಯಂ ದರ ರೂಪಾಯಿ ೧೫

ನಮ್ಮಲ್ಲಿ ಬೇಕಾದ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ಪೆಟ್ರೋಮ್ಯಾಕ್ಸ [illegible] ಬೇಕಾದ [illegible] ವಾಜಿಗಳು ಯೋಗ್ಯ ದರದಿಂದ ಸಿಗುತ್ತವೆ. [illegible] [illegible] ಎಜಂಟ್ಸ ಇರುತ್ತೇವೆ. [illegible] ೧/೪ [illegible] ಕಳಿಸೇವು.

ಅಯ್ಯನಗೌಡರ ಆ್ಯಂಡ ಗುಡಿ.

ವಾಚ ಮರ್ಚಂಟ್ಸ್ ಆ್ಯಂಡ ಕಮಿಶನ್ ಏಜಂಟ್ಸ, [illegible], ಗದಗ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಂಡು [illegible] ತಿಂಗಳಿಗೆ [illegible]

ಎ. ಕೆ. [illegible]
[illegible]

ವಿಜಯ.

ಧಾರವಾಡ ತಾ- ೧೩-೨-೨೬ ನೇ ಇಸ್ವಿ

ಅಸೆಂಬ್ಲಿಗೆ ಒದಿಕೆಯೋ? ಗುದಿಕೆಯೋ?

ಬ್ರಿಟಿಶ ದೇಶದಲ್ಲಿ ವಾಸವಾಗಿರುವಂಥ ಪರದೇಶಿಯರಲ್ಲಿ ಯಾರಾದರೂ ಅಪ್ರಿಯರು, ಅನವಶ್ಯಕರೆಂದು ಕಂಡು ಬಂದರೆ ಅವರನ್ನು ಆ ದೇಶದಿಂದ ಹೊರಗೆ ಹಾಕುವ ಕಾಯದೆಗೆ ಲಾರ್ಡ ರೀಡಿಂಗಸಾಹೇಬರು ಸಮ್ಮತಿ ಪಟ್ಟಾಗ ರಂಗೂನದ ಒಂದು ಪತ್ರಿಕೆಯು "ಇದು ಲಾರ್ಡ ರೀಡಿಂಗ ಸಾಹೇಬರ ಪ್ರಧಾನ ಕಾಲದ ಒದಿಕೆಯಾಗಿರುತ್ತದೆಂದು" ಅಭಿಪ್ರಾಯ ಪಟ್ಟಿತು. ಇದರ ತರುವಾಯ ಲಾರ್ಡಸಾಹೇಬರು ಅಸೆಂಬ್ಲಿಗೂ ಒದಿಕೆ ಅಥವಾ ಗುದಿಕೆ ಕೊಟ್ಟರೆಂದು ಇವರು ಕೌನ್ಸಿಲ ಆಫ ಸ್ಟೇಟದ ಸಭೆಯ ಪ್ರಾರಂಭದಲ್ಲಿ ಮಾಡಿದ ಭಾಷಣದಿಂದ ಧ್ವನಿತವಾಗುತ್ತದೆ. ಕೌನ್ಸಿಲ ಆಫ ಸ್ಟೇಟದ ಹೊಸ ಚುನಾವಣೆಯಾಗಿ, ಅದರ ಪ್ರಾರಂಭ ಮಾಡುವಾಗ ಲಾರ್ಡಸಾಹೇಬರು ಇದರ ಅನುಭವ, ಸಾತ್ವಿಕ ವಿಚಾರ, ದೇಶಾಭಿಮಾನ ಮುಂತಾದವುಗಳನ್ನು ಬಹುವಾಗಿ ಹೊಗಳಿ, ಸರಕಾರದ ಕೂಡ ಸಹಕಾರ ಮಾಡಿದ ಬಗ್ಗೆ ಭಪ್ಪರೆ ಬಹಾದ್ದೂರ ಎಂಬ ಸರ್ಟಿಫಿಕೇಟು ಕೊಟ್ಟರು. ಸಾಹೇಬರು ಇಷ್ಟರಿಂದಲೇ ಸಮಾಧಾನ ಪಡದೆ, ಅಸೆಂಬ್ಲಿಯ ಕೃತ್ಯವನ್ನು ಪರ್ಯಾಯದಿಂದ ಹಳಿದರು. ಲಾರ್ಡ ಬರ್ಕನಹೆಡ್ಡ ಸಾಹೇಬರು ಸಹಕಾರದ ಗುರುಮಂತ್ರವನ್ನು ಹೇಳಿದ್ದಾರೆ. ಅಸೆಂಬ್ಲಿಯು ಚಿತ್ತೈಕಾಗ್ರ ಮಾಡಿಕೊಳ್ಳದೆ ಏಕಚಿತ್ತದಿಂದ ಜಪಿಸಿದರೆ ಹಿಂದುಸ್ಥಾನಕ್ಕೆ ಹೆಚ್ಚೆಚ್ಚು ರಾಜಕೀಯ ಹಕ್ಕುಗಳನ್ನು ಕೊಡಲು ಬೇಗನೆ ರಾಯಲ ಕಮಿಶನ ನೇಮಿಸುವೆವೆಂದರು. ಅಸೆಂಬ್ಲಿಯಲ್ಲಿ ಪ್ರಮುಖ ಮತ್ತು ಪ್ರಬಲ ಮಂಡಳರಾದ ಸ್ವರಾಜ್ಯ ಪಕ್ಷೀಯರು ಕಾಂಗ್ರೆಸ್ಸದ ವಿಧ್ಯಮಾನವಾಗಿ ಸರಕಾರಕ್ಕೆ ಎರಡು ತಿಂಗಳ ನೋಟೀಸು ಕೊಟ್ಟಿದ್ದಾರೆ. ಈ ನೋಟೀಸಿನ ಅವಧಿಯು ಇದೇ ತಿಂಗಳ ಕೊನೆಯಲ್ಲಿ ಮುಗಿಯುವದು. ಮತ್ತು ಮಾರ್ಚ ತಿಂಗಳ ೭ನೆಯ ತಾರೀಖಿನ ದಿವಸ ತಮ್ಮ ಠರಾವನ್ನು ಯಾವ ಬಗೆಯಿಂದ ಅಮಲಿನಲ್ಲಿ ತರಬೇಕೆಂದು ದಿಲ್ಲಿಯಲ್ಲಿಯೇ ಕಾಂಗ್ರೆಸ ಕಚೇರಿಯಲ್ಲಿ ವಿಚಾರ ಮಾಡುವರು. ಈ ವಿಚಾರ ಮಾಡುವ ಪೂರ್ವದಲ್ಲಿ ಲಾರ್ಡ ಸಾಹೇಬರು ಇವರಿಗೆ ತಮ್ಮ ಕೂಡ ಮೊದಲು ಸಹಕಾರ, ಅನಂತರ ಸ್ವರಾಜ್ಯದ ಹಂತಗಳ ವಿಚಾರವೆಂದು ಆಹ್ವಾನ ಮಾಡಿದ್ದಾರೆ. ಸಹಕಾರವೆಂದರೆ ಕಾಯಾ- ವಾಚಾ- ಮನಸಾ ಸಂಪೂರ್ಣ ಶರಣಾಗತವಾಗುವಂತಾಗಿ ಒಂದು ಪ್ರಕಾರದ ಅವಮಾನಕ್ಕೊಳಪಡುವಂತಾಗುತ್ತದೆ. ಮೇಲಾಗಿ ಈ ಸಹಕಾರದಿಂದ ಅವರು ಕೊಟ್ಟಷ್ಟು ರೊಟ್ಟಿಯನ್ನು ತಿಂದು, ತೇಗಬೇಕಾಗುತ್ತದೆ. ಇದರಿಂದ ಅಸೆಂಬ್ಲಿಯಲ್ಲಿ ಪಾಸು ಮಾಡಿದ ಠರಾವು ಮೂರ್ಖತನದ್ದಾಯಿತೆಂದು ತಲೆವಾಗಿ ಒಪ್ಪುವದು ಮಾತ್ರವಲ್ಲದೆ, ಹಿಂದೀ ಜನತೆಯಲ್ಲಿ ರಾಷ್ಟ್ರೀಯ ಮಹತ್ವಾಕಾಂಕ್ಷೆಯು ನವೀನವಾದ ಚೈತನ್ಯವನ್ನು ಕಮರಿಸಿದ ಪಾಪಕಟ್ಟಿಕೊಳ್ಳುವ ಪ್ರಸಂಗ ಬರುತ್ತದೆ. ಆದಕಾರಣ ವಿವೇಕನಾದ ಯಾವ ಹಿಂದೀ ಮನುಷ್ಯನು ವಿನೀತನಾಗಿ ಸಹಕಾರವನ್ನು ಬಯಸಲಾರನು. ಅದು ಸದ್ಬುದ್ಧಿ ಸರಿ ವಿಚಾರ, ಸದೀಕ್ಷತನದಿಂದಾದರೆ ಅಂಗೀಕರಿಸುವನು. ಲಾರ್ಡ ರೀಡಿಂಗಸಾಹೇಬರು ಈ ವಿಚಾರವನ್ನು ಸಮ್ಮತಿಸುವದಿಲ್ಲ. ಮುತ್ಸದ್ದಿತನದ ಸವಿಮಾತಿನಿಂದ ಸ್ವರಾಜ್ಯ ಪಕ್ಷೀಯರನ್ನು ಮರುಳು ಮಾಡಬೇಕೆನ್ನುವರು. ದಾಸ್ಯಪಂಕದಲ್ಲಿ ಬೀಳುವಂತೆ ಮರುಳಾಗುವ ದಿವಸಗಳು ನಿಸ್ಸಂಶಯವಾಗಿ ಹಿಂದಾದವು

ಮ್ಯುನಿಸಿಪಾಲಿಟಿಯಲ್ಲಿ ಖಾದಿಯ ಪ್ರವೇಶ-

ಮದ್ರಾಸ ಮ್ಯುನಿಸಿಪಾಲಿಟಿಯಲ್ಲಿ ಕೆಲಸಗಾರರಿಗೆ ಖಾದಿಯ ಒಂದೇ ಮಾದರಿಯ ಬಟ್ಟೆ ಕೊಡಬೇಕೆಂದೂ, ಪ್ರಾಥಮಿಕ ಶಾಲೆಗಳಲ್ಲಿ ನೂಲುವದನ್ನು ಸಕ್ತಿಯ ಶಿಕ್ಷಣ ಮಾಡಬೇಕೆಂದೂ ಠರಾವು ಪಾಸಾಯಿತು. ಮ್ಯುನಿಸಿಪಾಲಿಟಿಗಳಲ್ಲಿ ಸ್ವರಾಜ್ಯ ಪಕ್ಷೀಯರ ಬಹುಮತವಾದರೆ ಈ ಪ್ರಕಾರ ದೇಶಹಿತದ ಕಾರ್ಯಗಳು ಜರುಗುತ್ತಿರುವವು. ಧಾರವಾಡದ ಮತದಾರರು ಸ್ವರಾಜ್ಯ ಪಕ್ಷೀಯರಿಗೇ ಮತಕೊಟ್ಟು, ಬಹಾದ್ದೂರ ಕರ್ನಾಟಕವೆಂಬ ಬಿರುದಿಗೆ ಗೌರವ ತರುವರೆಂದು ಆಶಿಸುತ್ತೇವೆ.

ಕರ್ನಾಟಕ ವಿಶ್ವವಿದ್ಯಾಲಯ-

ಮುಂಬಯಿಯಲ್ಲಿ ಕೂಡಿದ ಯುನಿವರ್ಸಿಟಿಯ ಸಿನೇಟ ಸಭೆಯಲ್ಲಿ ಗುಜರಾಥ ಮತ್ತು ಮಹಾರಾಷ್ಟ್ರದ ದೆಸೆಯಿಂದ ಸ್ವತಂತ್ರ ಯುನಿವರ್ಸಿಟಿಗಳನ್ನು ಸ್ಥಾಪಿಸುವ ಠರಾವು ಪಾಸಾಯಿತು. ಅದೇ ಪ್ರಕಾರ ಸಿಂಧದ ದೆಸೆಯಿಂದ ಕರಾಚಿಯಲ್ಲಿ ಮತ್ತು ಉತ್ತರ ಕರ್ನಾಟಕದ ದೆಸೆಯಿಂದ ಧಾರವಾಡದಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂಬ ತತ್ವವನ್ನು ಸಭೆಯವರು ಅಂಗೀಕರಿಸಿದರು. ಸಿಂಧ, ಗುಜರಾಥ ಮತ್ತು ಮಹಾರಾಷ್ಟ್ರಕ್ಕೆ ಬೇಕಾದಷ್ಟು ದ್ರವ್ಯದ ನೆರವು ದೊರೆಯುವದು. ಕರ್ನಾಟಕ ಮಾತ್ರ ದುರ್ದೈವಿಯಾಗಿರುವದು. ಪ್ರಸ್ತುತದ ಸ್ಥಿತಿಯು ಸರೀ ಮನೆಯವಳು ಸರಿ ಹಾಕಿಕೊಂಡದ್ದನ್ನು ಕಂಡು ನೆರೆಮನೆಯವಳು ಉರ್ಲು ಹಾಕಿಕೊಂಡಳೆಂಬಂತಾಗಿರುತ್ತದೆ.

ಚುನಾವಣೆಯು ಮುಂದೆ ಬೀಳಲಿಲ್ಲ

ಮುಂಬಯಿ ಸರಕಾರದವರು ಕೌನ್ಸಿಲ ಚುನಾವಣೆಯನ್ನು ನವ್ಹಂಬರದ ಬದಲಾಗಿ ಎಪ್ರಿಲ, ಮೇದ ತನಕ ಚುನಾವಣೆಯನ್ನು ಮುಂದೆ ಹಾಕಬಹುದೇ ಎಂಬದಾಗಿ ಕಮಿಶನರ ಸಾಹೇಬರ ಅಭಿಪ್ರಾಯ ಕೇಳಿದ್ದರು. ಲೋಕಮತವು ಪ್ರತಿಕೂಲವಾದದ್ದನ್ನು ಕಂಡು, ತಮ್ಮ ವಿಚಾರವನ್ನು ರಹಿತ ಪಡಿಸಿ, ನವ್ಹಂಬರದಲ್ಲಿ ಚುನಾವಣೆ ನಡೆಯಬೇಕೆಂದು ಜಾಹೀರ ಮಾಡಿದ್ದಾರೆ.

ಪೋಸ್ಟಿನ ದರ ಕಡಿಮೆ ಯಾಗಬಹುದೇ?

ಲೆಜಿಸಲೆಟಿವ್ಹ ಅಸೆಂಬ್ಲಿಯಲ್ಲಿ ಕಾರ್ಡು ಪಾಕೀಟುಗಳ ಹಾಸಿಲನ್ನು ಮೊದಲಿನಂತೆ ಕಾಲಾಣೆ-ಅರ್ಧಾಣೆ ಮಾಡಬೇಕೆಂಬ ಠರಾವು ಬಂದಿತ್ತು. ಸರಕಾರದವರು ಹೊಸ ಬಜೆಟ್ಟನ್ನು ಪ್ರಸಿದ್ಧ ಮಾಡಲಿ; ಅದರ ಲಾಭ ಹಾನಿಗಳನ್ನು ನೋಡಿಕೊಂಡು, ಈ ಬಗ್ಗೆ ವಿಚಾರ ಮಾಡಬಹುದೆಂದು ಬಹುಮತವಾಯಿತು. ಈ ಸಮಯದಲ್ಲಿ ಸ್ವರಾಜ್ಯ ಪಕ್ಷೀಯರು ವೋಟು ಕೊಡದೆ, ತಟಸ್ಥವೃತ್ತಿಯಿಂದಿದ್ದರು. ಹಾಸಿಲು ಹೆಚ್ಚು ಮಾಡಿದ್ದರಿಂದ ಹಳ್ಳಿಗಳಲ್ಲಿ ಜನರು ಪತ್ರವ್ಯವಹಾರ ಮಾಡುವದು ಪುಷ್ಕಳವಾಗಿ ಕಡಮೆಯಾಗಿದೆಂದು ಲೆಕ್ಕ ಹೊರಟಿರುತ್ತದೆ.

---

೩೭ ಲಕ್ಷದ ಕಡಕ-

ಲೀ ಕಮಿಶನದ ಠರಾವಿನ ಪ್ರಕಾರ ಜಿ. ಆಯ. ಪಿ. ಮತ್ತು ಬಂಗಾಲ ರೇಲ್ವೆಯ ಯುರೋಪಿಯನ್ನ ಕಾಮದಾರರಿಗೆ ೧೯೨೦ರಿಂದ ಇಂದಿನ ತನಕ ಹೆಚ್ಚಿಗೆ ಸಂಬಳ ಕೊಡುವದಕ್ಕಾಗಿ ೩೭ ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಸರಕಾರದವರು ಅಸೆಂಬ್ಲಿಯಲ್ಲಿ ಠರಾವು ತಂದರು. ಆದರೆ ಒಂದೇ ವೋಟು ಹೆಚ್ಚು ಬಿದ್ದು ಠರಾವು ನಾಮಂಜೂರಾಯಿತು. ಸಿವ್ಹಿಲ ಸರ್ವೆಂಟರಿಗೂ ಇದೇ ಪ್ರಕಾರ ಹೆಚ್ಚು ಸಂಬಳ, ಭತ್ತೆ ಮತ್ತು ಪ್ರವಾಸದ ವೆಚ್ಚ ಕೊಡಬಾರದೆಂದು ಅಸೆಂಬ್ಲಿಯಲ್ಲಿ ಠರಾವಾಗಿತ್ತು. ಲಾರ್ಡ ರೀಡಿಂಗಸಾಹೇಬರು ಸರ್ಟಿಫಿಕೇಟು ಕೊಟ್ಟು ಅದನ್ನು ಮಂಜೂರ ಮಾಡಿದರು. ಅದೇ ಪ್ರಕಾರ ಅಸೆಂಬ್ಲಿಯವರು ಕಡಕ ತಳ್ಳಿಸಿದ್ದು ಲಾರ್ಡ ಸಾಹೇಬರು ಮಂಜೂರ ಮಾಡಿ, ಗೌರವ

ಯಷ್ಟರ ಹೊಟ್ಟೆಯಲ್ಲಿ ನಾಲು ತುಪ್ಪದ ಶಾಲಿವೆ ಹರಿಸುವದೇ ಸಿಜ.

ಮಾಂಸ ತಿಂದರೆ ಶಕ್ತಿ ? ಬರುವದು.

ಸ್ಪೇನ ಕಮೀಟಿ ಮಾಡಿರಿಯ ಬಂದು ಕಮಿಟಿಯು ಕಾಗಪೂರಲ್ಲಿ ಕೂತದೆ. ಸುಶಿಕ್ಷಿತ ತರುಣ ವಿದ್ಯಾರ್ಥಿಗಳಿಗೆ ಕಪಾಯಿತು, ಗುರಿ ಜೋಡೆಯುವದು ದಿಕ್ಕ್ಯಯಾಸು ಮುಂತಾದವುಗಳ ಶಿಕ್ಷಣ ಕೊಡಬೇಕೆಂಬದೇ ಕಮಿಟಿಯು ವಿಚಾರವು. ಇದರ ಮುಂದೆ ಶಾಸ್ತ್ರಿ ಚಿತ್ತಳೆಯುವರು ಸಾಕ್ಷಿಯಾಯಿತು. ಮಾಂಸ ತಿಂದರೆ ರೋಗಪ್ರತಿಬಂಧಿಯಾಗಿ, ಶರೀರ ಸಾಮರ್ಥ್ಯಹೆಚ್ಚುವದೆಂದು ಇವರು ಸಾಕ್ಷೀ ನುಡಿದರು. ಎಲ್ಲರೂ ತಿನ್ನಬೇಕೇ ಎಂಬದಾಗಿ ಪುನಃ ಪ್ರಶ್ನೆ ಮಾಡಲು ಶಾಸ್ತ್ರಿಗಳು ಸಾವಧಾನರಾಗಿ ಅವರವರ ಅಪೇಕ್ಷೆ ಎಂದು ಉತ್ತರ ಕೊಟ್ಟಿರುತ್ತಾರೆ.

ಸಭೆಬಿಟ್ಟು ಎದ್ದು ಬಂದರು.

ಪಂಡಿತ ಮೋತೀಲಾಲ ಮತ್ತು ಲಾರ್ಡ ರೀಡಿಂಗ ಮೊದಲಾದವರು ದಕ್ಷಿಣ ಅಫ್ರಿಕೆಯಲ್ಲಿ ನಡೆದ ಅನ್ಯಾಯದ ವಿಚಾರವನ್ನು ಮಾಡುತ್ತಿರುವಾಗ, ಮಂತ್ರಿಗಳು ಅಲ್ಲಿ ಹಿಂದೀ ಜನರು ಗುಡಿಸಿ ಕಟ್ಟುವ ಪ್ರಥಕಾಯದೆಯನ್ನು ಪಾರ್ಲಮೆಂಟ ಸಭೆಯಲ್ಲಿ ತಂದರು. ಇದು ಕೊನೆಯಲ್ಲಿ ಸಾಮ್ರಾಜ್ಯಕ್ಕೂ, ತನಗೂ ಭಯಂಕರವಾದ ದುಷ್ಪರಿಣಾಮವನ್ನುಂಟು ಮಾಡುವದೆಂದು ಅನೇಕ ಲಷ್ಕರ ಸಾಹೇಬರು ಸಿಟ್ಟಿನಿಂದ ಹಾಕಿ, ಪಾರ್ಲಮೆಂಟ ಸಭೆಯಿಂದ ಹೊರಬಿದ್ದು ಬಂದರು. ಇವರ ಪಕ್ಷಕ್ಕೆ ಹತ್ತೇ ಜನರು ಸೇರಿದ್ದಾರೆ.

ಮಂತ್ರಿಯು ಪಲಾಯನ ಹೇಳಿಸಿದನು.

ಬೆಲ್ಜಿಯಮದಲ್ಲಿ ದಂಡು ಕಡಿಮೆ ಮಾಡುವಂತೆ ಮಂತ್ರಿಮಂಡಳದಲ್ಲಿ ಠರಾವು ಪಾಸಾಯಿತು. ಇದರಿಂದ ಕನಿಷ್ಠ ೫೦ ಸಾವಿರ ಜನರು ನಿರುದ್ಯೋಗಿಯಾಗುವರು. ಸೈನ್ಯ ಸಂಖ್ಯೆ ಕಡಿಮೆ ಮಾಡಿದ್ದು ಪ್ರಜಾ ಕೋಪಕ್ಕೆ ಕಾರಣವಾಯಿತು. ಸರಕಾರದ ಕೃತ್ಯವನ್ನು ನಿಷೇಧಿಸಲು ಪ್ರಚಂಡ ಸಭೆಯು ಕೂಡಿತು. ನಿಷೇಧದ ಮೆರವಣಿಗೆಯೂ ಹೊರಟಿತು. ಮಂತ್ರಿಗಳಿಗೆ ಧಿಕ್ಕಾರವಿರಲೆಂದು ಗಗನ ಮಂಡಲವು ನಡುಗುವಂತೆ ಕೋಲಾಹಲವೆಬ್ಬಿಸಿದರು. ಅಷ್ಟರಲ್ಲಿ ಮುಖ್ಯ ಮಂತ್ರಿಗಳು ದಾರಿಯಲ್ಲಿ ಸಿಕ್ಕನು. ಇವರನ್ನು ಥಳಿಸಬೇಕೆಂದು ಕುಂಬರು ಜೋಕೆ ಹೊಡೆಯುತ್ತ ಬೆನ್ನಟ್ಟಿದರು. ಬೇವದಾಸೆಯಿಂದ ಇವರು ವಿವಿಧ ವಸ್ತು ಪದಾರ್ಥಾಲಯದಲ್ಲಿ ಹೊಕ್ಕು ಅಡಗಿಕೊಂಡು ಮೆಲ್ಲನೆ ಹಿತ್ತಲಬಾಗಿಲದಿಂದ ಪಲಾಯನ ಸೂಕ್ತ ಪಠಿಸಿದರು.

ಇಂಗ್ಲಂಡಕ್ಕೆ ಬೊದ್ಧಬಂತೆ.

ಮೇ ತಿಂಗಳ ೧ ನೇ ತಾರೀಖು ವಿಲಾಯತಿಯಲ್ಲಿ ಕೂಲಿಕಾರರ ವಾರ್ಷಿಕೋತ್ಸವದ ದಿನವು. ಅಂದು ಇಂಗ್ಲಂಡದ ಕೂಲಿಕಾರರು ಅದ್ಭುತ ಸಂಪಿನ ಕಹಳೆ ಹಿಡಿಯುವರು. ಚಕಮಕಾಗ್ನಿ ಎಷ್ಟು ಸಾರ್ಥಕ ದಿಕ್ಕಿನಲ್ಲಿ ಸಂಪಾದರೆ ಭಯಂಕರ ಅನರ್ಥವೇಳುವದೆಂದು ಭಾವಿಸಿ, ಪ್ರಧಾನರು ಈಗಿನಿಂದಲೇ ಮುಂಜಾಗ್ರತೆಯ ನೋಟೀಸು ಕೊಟ್ಟು, ಊರೂರಿಗೆ ಧಾನ್ಯ ಪೂರೈಸುವ ಏರ್ಪಾಡು ಮಾಡುವರು. ಕೂಲಿಕಾರರ ಸಂಪಿಗಿಂತ ಪ್ರಜಾರಕ್ಷಣೆಯು ಅವಶ್ಯವಾದ ಕರ್ತವ್ಯ ಕರ್ತವ್ಯವಾಗಿದೆಂದೂ, ಕೂಲಿಕಾರರು ಅಂಜಿಸುವದಕ್ಕೆ ಸರಕಾರವು ಸೊಪ್ಪು ಹಾಕಲಾರದೆಂದೂ ಸರ ಜಾಯನಸನ ಹಿಕ್ಸರೆಂಬ ಮಂತ್ರಿಯು ಭಾಷಣ ಮಾಡಿದ್ದಾರೆ. ಕೂಲಿಕಾರರ ಹಿತಕ್ಕಾಗಿ ಸರಕಾರವು ಕೆಲವು ಯೋಜನೆಗಳನ್ನು ಮಾಡುತ್ತಿರುವದು. ಆದರೆ ಅವರು ಇವನ್ನು ತುಚ್ಛೀಕರಿಸಿ, ಸಂಪಿನಿಂದ ಸಂಕಟ ತಂದು, ತಮ್ಮ ಉದ್ದೇಶವನ್ನು ಪೂರ್ಣಮಾಡಿಕೊಳ್ಳಬೇಕೆಂದಿದ್ದಾರೆ.

ಹೊಗೆಬಂಡಿಯಲ್ಲಿ ದರೋಡೆ.

—೦—

ಬಂಗಾಲ ನಾಗಪೂರ ರೇಲ್ವೆಯಲ್ಲಿ ಭೊಜುಡಿಯಾ ಎಂಬ ಸ್ಟೇಶನದ ಸಿಗ್ನಲ ಕಂಬದ ಹತ್ತರ ದರೋಡೆಗಾರರು ಸರಪಳಿ ಜಗ್ಗಿ, ಗಾರ್ಡನ ಡಬ್ಬಿಯಲ್ಲಿ ಹೊಕ್ಕು, ಅಲ್ಲಿಯ ಬ್ರೇಕ್ಕ ಮುರಿದು, ಗಾರ್ಡನನ್ನು ಕೊಂದು, ಸೇಫಿನ ಪೆಟ್ಟಿಗೆ ಒಡೆದು, ೧೮೨೦ ರೂಪಾಯಿಗಳನ್ನು ತಕ್ಕೊಂಡು ಕಾಲಿಗೆ ಬುದ್ಧಿ ಹೇಳಿದ್ದಾರೆ.

ಅಮೇರಿಕೆಯಲ್ಲಿ ತಾಜಮಹಾಲ.

—೦—

ಜಗತ್ತಿನಲ್ಲಿ ಅತಿ ಸುಂದರವೆನಿಸಿದಂಥ ತಾಜಮಹಾಲಿನಂಥ ಕಟ್ಟಡವು ತಮ್ಮ ದೇಶದಲ್ಲಿರಬೇಕೆಂದು ಅಮೇರಿಕೆಯ ಧನಾಢ್ಯರು ಯೋಚಿಸಿ, ಅಂಥದೊಂದು ಕಟ್ಟಡ ಕಟ್ಟುವದಕ್ಕಾಗಿ ಒಂದು ಕಂಪನಿಗೆ ೧೦ ಲಕ್ಷ ಡಾಲರಕ್ಕೆ ಗುತ್ತಿಗೆ ಕೊಟ್ಟಿದ್ದಾರೆ.

ಜರ್ಮನರ ದಸ್ತಗಿರಿಯು.

ಇಟಲಿ ಮತ್ತು ಜರ್ಮನಿಯ ಕಲಹವು ವಿಕೋಪಕ್ಕೆ ಹೋಗಿದೆ. ಜರ್ಮನಿಯು ಮೊದಲಿನಂತೆ ಬಲಿಷ್ಠವಾಗಿದ್ದರೆ- ಇದೊಂದು ಯುದ್ಧ ಪ್ರಸಂಗವೇ ಆಗುತ್ತಿತ್ತೆಂದು ಜರ್ಮನ ಪತ್ರಗಳು ಅಂದಿವೆ. ಇಟಲಿಯವರು ಟ್ರಾಯ ಪ್ರಾಂತದಲ್ಲಿರುವ ಅನೇಕ ಜರ್ಮನರನ್ನು ದಸ್ತಗಿರ ಮಾಡಿ, ಹೇರಳವಾಗಿ ಮದ್ದು ಗುಂಡನ್ನು ಜಪ್ತ ಮಾಡಿದ್ದಾರೆ.

ವಿವಿಧ ವರ್ತಮಾನಗಳು.

—೦—

ಲಾರ್ಡ ರೀಡಿಂಗಸಾಹೇಬರು ಫ್ರಾನ್ಸ ದೇಶದಲ್ಲಿ ಬ್ರಿಟಿಶ ರಾಯಭಾರಿಯಾಗುವರೆಂದು ಒಂದು ವರ್ತಮಾನಪತ್ರವು ಹೇಳುತ್ತದೆ.

ಹೋಳಕರ ಮಹಾರಾಜರು ಕಮಿಶನದ ಮುಂದೆ ಆರೋಪಿಯಾಗಿ ನಿಲ್ಲುವ ಬಗ್ಗೆ ವಿಚಾರ ಮಾಡಲು ಮುದ್ದತು ಕೇಳಿಕೊಂಡಿದ್ದಾರೆ.

ಕಾಳಹಸ್ತಿಯಲ್ಲಿ ಸುವರ್ಣಮುಖರಿ ನದಿಗೆ ಹಿಂದೂವರೇ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿ, ಸೇತುವೆಯನ್ನು ಕಟ್ಟಿದ್ದಾರೆ.

ಶ್ರೀ ಮಾಧವರಾವ ಅಣೆಯವರು ಕೊಟ್ಟ ರಾಜೀನಾಮೆಯಿಂದ ಕೆಲವಾದ ಅಸೆಂಬ್ಲಿಯ ಸ್ಥಳದಲ್ಲಿ ಬ್ಯಾರಿಸ್ಟರ ರಾಮರಾವ ದೇಶಮುಖ (ಮರಾಠ) ಇವರು ಎದುರಾಳಿ ಇಲ್ಲದೆ ಆರಿಸಲ್ಪಟ್ಟರು.

ವಿ. ಜೋಶಿಯವರು ತಾವು ಬಾದಶಹರ ಪ್ರಜರಾಗಿರುವದರಿಂದ, ಅವರ ಪ್ರತಿನಿಧಿಯಾಗಿರುತ್ತೇವೆಂದು ಹಾಯಕೋರ್ಟಿನಲ್ಲಿ ತಂದ ವ್ಯಾಜ್ಯದಲ್ಲಿ ಇವರಿಗೆ ಹಾಗೆ ಪ್ರತಿನಿಧಿಯಾಗಲಿಕ್ಕೆ ಬರುವದಿಲ್ಲೆಂದು ನ್ಯಾಯಮೂರ್ತಿಗಳು ತೀರ್ಪು ಹೇಳಿದ್ದಾರೆ.

ಮುಂಬಯಿಗೆ ಐದು ವರ್ಷದ ಒಬ್ಬ ಹುಡುಗನು ಬಂದಿದ್ದಾನೆ. ಈತನು ಮಹಾಸ್ತ್ರ ಮನೋಹರನಂತೆ ಅನೇಕ ರಾಗಗಳಲ್ಲಿ ಹಾಡುವನು. ಮತ್ತು ವಾದ್ಯಗಳನ್ನು ಬಾರಿಸುವನು. ಸಬಾಶ ಮನೋಹರನೇ ಸೈ.

ಮಾಪಿಳಿ ಜನರು ಮತ್ತು ಮದೀನಾದಲ್ಲಿ ಮಾಡಿದ ಅನರ್ಥದ ನಿಜ ಸಂಗತಿಯನ್ನು ತಿಳಕೊಳ್ಳುವದಕ್ಕಾಗಿ ಹಿಂದುಸ್ಥಾನದಿಂದ ಹೋದಂಥ ಪ್ರತಿನಿಧಿಗಳು ಹಿಂದಕ್ಕೆ ಬಂದರು. ವಾಹಿಬಿಗಳು ಯಾವ ಕೇಡು ಮಾಡಿಲ್ಲೆಂದೂ ಪೈಗಂಬರ ಗೋರಿಯ ಕಟ್ಟಡಕ್ಕೆ ಎರಡು ಗುಂಡುಗಳು ಬಡಿದಿವೆಂದೂ ಇವರು ಹೇಳುತ್ತಾರೆ.

ಬ್ರಹ್ಮದೇಶದಲ್ಲಿ ಬನಾರ [illegible] ಕಂಪನಿಯಲ್ಲಿ ಕೆಲಸ ಮಾಡುತ್ತಿರುವಂಥ [illegible] ಕೂಲಿಕಾರರು ಸಂಪು ಮಾಡಿ ಕೆಲಸ ಬಿಟ್ಟಿದ್ದಾರೆ.

ಟಿ. ಎಸ್. ಮೋಟಾರ ಸರ್ವ್ವೀಸ

ಹುಬ್ಬಳ್ಳಿ

ಶಿವರಾತ್ರಿ ಸಮಯದಲ್ಲಿ ಗೋಕರ್ಣಕ್ಕೆ ಹೋಗುವ ಪ್ರಯಾಣಿಕರ ಸೌಕರ್ಯಕ್ಕಾಗಿ.

ತಾ|| ೧—೨—೩೭ ರಿಂದ ರೆಗ್ಯುಲರ ಸರ್ವ್ವೀಸ ಇಟ್ಟಿದೆ.

— ಕಾಲಕ್ರಮಗಳು —

೧. ಹುಬ್ಬಳ್ಳಿ ಬಿಡುವದು
ಬೆಳಗ್ಗೆ ೭ ಘಂಟೆ.
ಸಾಯಂಕಾಲ ೫ ಘಂಟೆ

ಗೋಕರ್ಣ ಸೇರುವದು
ಸಾಯಂಕಾಲ ೫ ಘಂಟೆ
ಬೆಳಗ್ಗೆ ೫ ಘಂಟೆ

೨ ಸಾಗರ ಬಿಡುವದು
ಬೆಳಗ್ಗೆ ೭ ಘಂಟೆ

ಗೋಕರ್ಣ ಸೇರುವದು
ಸಾಯಂಕಾಲ ೫ ಘಂಟೆ

ಶಿರೋಗಾ }
೩೦-೧-೧೯೩೭ }

ಎಮ್. ಮಂಜಪ್ಪಾ.
ಪ್ರೊಪ್ರೈಯಟರ.

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲೇಕೆ! ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ! ತಲೆನೋವೋ! ಹಲ್ಲುಶೂಲೆಯೋ! ಮಯ್ಯಲ್ಲಿ ನೋಯುತ್ತದೆಯೋ! ಆಗಿರುವದಾದರೂ ಏನು?

ಅಜ್ಜನು— ಕಂದಾ— ಹಾಡು ಮಯ್ಯೆಲ್ಲಾ ನೋಯುತ್ತದೆ.

ಕಂದ— ಹಾಗಾದರೆ ಮೊಮೆಂಟ ಕ್ಯೂಯರ ತಕ್ಕೊಳ್ಳು. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಡ್ರುವಿ ಕಿಮ್ಮತ್ತು ಕೀರ ಖುಸು. ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ವಿಳಾಸ— ಕನಕಾದಿತ್ಯ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ್ಸ ಮತು ಡ್ರಗಿಸ್ಟ್ಸ
ಸ್ಟೇಶನರೋಡ ಹುಬ್ಬಳ್ಳಿ

ವ್ರಣಸಂಹಾರ

ಅಥವಾ

ಘಾಯದ ಮೇಲಿನ ಮುಲಮು

ಈ ಮುಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಹುಣ್ಣು ಮತ್ತು ಒಣಬಜ್ಜಿ, ಗಜ್ಜಿ ಮೊದಲಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಬೇಕೆಂದು ಸೂಚನೆಯಾಗಿರುತ್ತದೆ. ... ಒಂದು ಡಬ್ಬಿಗೆ ... ಆಣೆ. ... ಇಟ್ಟಿದೆ.

ಹುಬ್ಬಳ್ಳಿಯ ... ಕನಕಾದಿತ್ಯ ಮೆಡಿಕಲಸ್ಟೋರ್ಸ- ಸ್ಟೇಶನ ರೋಡ ಹುಬ್ಬಳ್ಳಿ, ... ಮತ್ತು ... ದೊರೆಯುವದು. }

ಎಸ್. ಎಸ್. ಪೆಂಟರ
... ಬೆಳಗಾವಿ

ಜಾಹೀರ ನೋಟೀಸು.

—೦—

ಕೆಳಗೆ ಹೆಚ್ಚಟ್ಟಿನ ಗ ತಾರ್ ಮಾಗುವ ಹಣ ಮಪ್ಪಾ ಕೋಮು ಯಲ್ಲಾ ಕಳವಾರ ಸಾಕೀನ ಹುಬ್ಬಳ್ಳಿ ಈಕೆಯು ಈ ಜಾಹೀರ ನೋಟೀಸಿನಿಂದ ಪ್ರಸಿದ್ಧ ಮಾಡುವದೇನೆಂದರೆ-

ನಾನು ನನ್ನ ಗಂಡನಾದ ಯಲ್ಲಾ ತಂದಿ ಚನ್ನಬಸಪ್ಪಾ ತಳವಾರ ಸಾಕೀನ ದೇ..ಕೊಪ್ಪ ಈತನಿಗೆ ಧಾರವಾಡ ವಿಜಯ ಪತ್ರದಲ್ಲಿ ತಾ. ೧ ಜನವರಿ ೧೯೩೭ನೇ ಇಸವಿಯ ದಿವಸ ನೋಟೀಸು ಕೊಟ್ಟು ನನ್ನನ್ನು ಕರಕೊಂಡು ಹೋಗಿ ಸುರಕ್ಷಿತವಾಗಿ ಪ್ರಪಂಚ ಮಾಡಲಿಕ್ಕೆ ತಿಳಿಸಿದೆ ಆದರೆ ಆತನು ಸದರ ನೋಟೀಸು ಇನಕಾರ ಮಾಡಿರತಾನೆ ಇದರಿಂದ ಆತನ ಮನಸಿನಲ್ಲಿ ಆ ನೋಟೀಸಿನಲ್ಲಿ ಬರೆದ ಶರ್ತುಗಳಂತೆ ನಡೆದು, ನನ್ನ ಕೂಡ ಪ್ರಪಂಚ ಮಾಡುವ ಉದ್ದೇಶ ಇರುವಂತೆ ತೋರುವದಿಲ್ಲ ಆದ್ದರಿಂದ ನನ್ನ ಉಪಜೀವನದ ದೆಸೆಯಿಂದ ಎರಡನೆಯವನನ್ನು ಉಡುಕೆ ಮಾಡಿಕೊಳ್ಳುವದು ಅನಿವಾರ್ಯವಾಗಿ ಉಂಟಾಗಿರುತ್ತದೆ ಈ ನೋಟೀಸು ಜಾಹೀರವಾದ ಎಂಟು ದಿವಸಗಳಲ್ಲಿ ಸದರ ನನ್ನ ಗಂಡನು ನಾನು ಇದ್ದಲ್ಲಿಗೆ ಬಂದು ಮೊದಲಿನ ನೋಟೀಸಿನಲ್ಲಿ ಬರೆದ ಪ್ರಕಾರ ಎಲ್ಲ ಕರಾರುಗಳನ್ನು ಪೂರ್ಣ ಮಾಡಿ, ನನ್ನ ಕೂಡ ಸುರಕ್ಷಿತ ಪ್ರಪಂಚ ಮಾಡಬೇಕು ಇದಕ್ಕೆ ತಪ್ಪಿದರೆ ನಾಇಲಾಜಾಗಿ ನಾನು ಎರಡನೆಯವನನ್ನು ಉಡಕೆ ಮಾಡಿಕೊಳ್ಳುವೆನು ಆನಂತರ ಸದರ ನನ್ನ ಗಂಡನ ಹಕ್ಕು ನನ್ನ ಮೇಲೆ ಮತ್ತು ನನ್ನ ಉಡಕೆ ಗಂಡನ ಮೇಲೆ ಬಿಲಕೂಲ ನಡೆಯಲಾರದು ಮತ್ತು ಈ ಒಕ್ಕಗಾಗಿ ನನಗಾದ ಸಾಲದ ದೆಸೆಯಿಂದ ಆತನ ಮೇಲೆ ಕಾಯದೆ ಪ್ರಕಾರ ಇಲಾಜ ಮಾಡಿ ಕೋರ್ಟು ಖರ್ಚು ಸಹಿತ ಆತನಿಂದ ವಸೂಲ ಮಾಡುವೆನು ಉಡಕೆ ಗಂಡನಿಗೆ ಸದರ ಯಲ್ಲಾ ಇವನಿಂದ ಯಾವ ಪ್ರಕಾರದ ತ್ರಾಸವಾಗಬಾರದೆಂದು ಖುಲಾಸೆವಾರ ಈ ನೋಟೀಸು ಜಾಹೀರ ಮಾಡಿರುತ್ತೇನೆ ತಿಳಿಯುವದು

ತಾ|| ೧೩ ಫೆಬ್ರುವರಿ೩೭ನೇ ಇಸ್ವಿ

ಈ ಎಡಗೈ ಹೆಚ್ಚಟ್ಟಿನ ಗುರ್ತು ಹಣಮವ್ವಾ ಕೋಮ ಯಲ್ಲಪ್ಪಾ ತಳವಾರ ಸಾ ಹುಬ್ಬಳ್ಳಿ ಈಕೆಯದು ಇರುತ್ತದೆ.

ಈ ಪತ್ರವನ್ನು ... ಯು ... ಮೆಣಸಿಕಾಯಿ ಇವರು ಧಾರವಾಡದಲ್ಲಿರುವ ... ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ.

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭ | ಧಾರವಾಡ ರವಿವಾರ ತಾರೀಖು ೧೪ನೇ ಫೇಬ್ರುವರಿ ೧೯೨೬ | (ಸಂಚಿಕೆ ೩೭

ಸರಕಾರದಿಂದ ಪೇಟೆಂಟ ದೊರೆಕಿದ

ಮಲ್ಹಾರ ಕಪ್ಪಲಿ.

ತೋಟಿಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇವು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವವು. ಕಪ್ಪಲಿಯು ನೀರನ್ನು ಮುಟ್ಟಲೇ ಅದರ ಕೆಳಭಾಗದಲ್ಲಿಯ ಜಾಳಿಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಮಗುಚುತ್ತಲೇ ಜಾಳಿಗೆಯು ಪರದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ ೩೦ ರೂ.
ನಂ ೨	೨೫ ,,	,, ೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಬಿಗಬೆನ್ ಟಾಯಿಂಪೀಸ ದರ ರೂಪಾಯಿ ೯ | ರಿಸ್ಟವಾಚ ಬೆಳ್ಳಿಜುಪಿಲ್ಲಿ ಲಿವ್ಹರ ರೇಡಿಯಂ ದರ ರೂಪಾಯಿ ೧೫



ನಮ್ಮ ಕಡೆ ಬೇಕಾದ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ಸ್ಪ್ರಿಂಗ, ಪೆಟಿ.ವ್ಯಾಕ್ಸ, ಬಿಗಬೆನ, ಅಲ್ಲದೆ ಎಲ್ಲ ನಮೂನೆ ಬೇಕಾದ ಕಂಪನಿಯ ವಾಚಗಳು ದೊರೆಯುವವು. ನಮ್ಮ ಕಡೆ ವಾಚ ಕಂಪನಿಯ ರಜಿಸ್ಟರ್ಡ ಏಜಂಟ್ರು ಇರುತ್ತಾರೆ. ವ್ಹಿ. ಪಿ. ಮೂಲಕ ತರಿಸಿಕೊಳ್ಳುವವರು ೧/೪ ರೂ. ಅಡ್ವಾನ್ಸ ಕಳಿಸಬೇಕು.

ಅರವಿನಗೌಡರ ಕ್ರಾಂತಿ ಗುಡಿ

ವಾಚ ಮಾರ ಬ್ಯಾಂಕ ಕಮಿಶನ್ ಏಜಂಟ್ಸ್, ಬಾಸೂರಿನ ಓಣಿ, ಗದಗ

ಧಾರವಾಡದಿಂದ ಗದಗ ಮಾರ್ಗವಾಗಿ ಬೆಟಗೇರಿಗೆ ಮೋಟಾರ ಸರ್ವಿಸ.

ನಾವು ಧಾರವಾಡದಿಂದ ದಿನಾಲು ಮುಂಜಾನೆ ೭ ಗಂಟೆಯಿಂದ ಮೋಟಾರ ಬಿಟ್ಟು ಗದಗ, ಹುಬ್ಬಳ್ಳಿ, ಕುಂದಗೋಳ, ಕೆಲಗೇರಿ ಅಣ್ಣಿಗೇರಿ ಕಲ್ಲೂರದಿಂದ ಬೆಟಗೇರಿಗೆ ೯ ಗಂಟೆಗೆ ಮುಟ್ಟಿಸುವೆವು. ಅಲ್ಲಿಂದ ತಿರುಗಿ ಕಾಲಕಲೆ ಹೊರಟು ಸಂಜೆಯ ವೇಳೆ ೧೦ ಗೆ ಧಾರವಾಡಕ್ಕೆ ತರುವೆವು. ಹುಬ್ಬಳ್ಳಿಗೆ ಪ್ರವಾಸಿಕರು ಸಿಕ್ಕರೆ ಸಾಯಂಕಾಲದಲ್ಲಿಯೂ ಮೋಟಾರ ಬಿಡುವೆವು. ಧಾರವಾಡದಲ್ಲಿ ಮಾರ್ಕೆಟ ಧರ್ಮಶಾಲೆಯ ಹತ್ತರ ನಮ್ಮ ಆಫೀಸದಿಂದ ಮೋಟಾರ ಬಿಡುವೆವು.

ಬೆಟಗೇರಿ ಏಜಂಟರು ಮೆ. ಕಮರುದ್ದೀನ ಬಾಗೇವಾಡಿ ಮತ್ತು ಮೆ. ಹುಸೇನಸಾಹೇಬ ದೊಡ್ಡಮನಿ ಇವರಲ್ಲಿ ಟಿಕೇಟುಗಳು ಮಾರಲಿಕ್ಕೆ ದೊರೆಯುವವು.

ಎಮ್. ಕೆ. ಸವದಾಗರ
ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ಆರು, ಒಂಬತ್ತು ತಿಂಗಳ ಮುದ್ದತಿ ಠರಾವಿನಿಂದ ಹಣವನ್ನು ಇಡಲಿಕ್ಕೆ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಪದ್ಧತಿಯು ಪ್ರಾರಂಭವಾಗಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡೈರೆಕ್ಟರ

ವಿಜಯ.

ಧಾರವಾಡ ತಾ- ೧೪-೨-೨೨ ನೇ ಇಸ್ವಿ

ಬಂಗಾರದ ಮತ್ತು ಬೆಳ್ಳಿಗೆ ಒಂದೇ ಬೆಲೆ.

ಅಸಹಕಾರದ ಚಳವಳಿಯು ಮುಂಚೆ ಫೌಜದಾರಿ ಕಾಯದೆಯ ೧೨೪ ಕಲಮಿನ ಉಪಯೋಗವನ್ನು [illegible] ಜನರಿಗೆ ಮಾತ್ರ ಮಾಡುತ್ತಿದ್ದರು. ಅಸಹಕಾರದ ಆಂದೋಲನದಲ್ಲಿ [illegible] ಚಳವಳಿಯಲ್ಲಿ ಬಿದ್ದಂಥ ಸತ್ಪುರುಷರು ಸಹ ಸರಕಾರದ ದೃಷ್ಟಿಯಿಂದ [illegible]. [illegible] ಕಾರಾಗೃಹದಲ್ಲಿ ತುರುಕುವ ಉದ್ಯೋಗವು [illegible]. ಈ ಕಲಮಿನ ಪ್ರಕಾರದ [illegible] ಶಿಕ್ಷೆಯು [illegible], ತುರಂಗದಲ್ಲಿ [illegible] ಮತ್ತು [illegible] ಇವರ ನಡುವೆ ಯಾವ ಪ್ರಕಾರದ ಭೇದವಿಲ್ಲದಾಯಿತು. [illegible]

[illegible] ಈ ಕಲಮಿನ ಪ್ರಕಾರ ಶಿಕ್ಷೆಯಾಗುವದು [illegible] ಶಿಕ್ಷೆ [illegible] ಈ ಕಲಮಿನಲ್ಲಿ [illegible] ಮಾಡಿ, [illegible]

ಅನಿಬೆಸೆಂಟಮ್ಮನವರ ಕಾಮನವೆಲ್ಥ ಬಿಲ್ಲು.

ಅನಿಬೆಸೆಂಟಮ್ಮನವರ ಕಾಮನವೆಲ್ಥ [illegible] ಸ್ವರಾಜ್ಯದ ಬಿಲ್ಲನ್ನು [illegible] ಪಾರ್ಲಮೆಂಟ ಸಭೆಯಲ್ಲಿ [illegible] ಇಲ್ಲ, ಅಧಿಕಾರ [illegible] ಬಿಲ್ಲನ್ನು [illegible] ಬೇಕು. [illegible]

[illegible]

[illegible] ದೇಶದಲ್ಲಿ [illegible] ಶಿಕ್ಷೆಯನ್ನು [illegible] ವಿದ್ಯಾರ್ಥಿಯು [illegible] ಅಪಮಾನ [illegible] ಶಿಕ್ಷೆಯನ್ನು [illegible] ಮಾಡಿದರು. [illegible]

ಜಗದೋದ್ಧಾರಕನ ಆಗಮನ.

ಧರ್ಮಕ್ಕೆ ಹಾನಿ ಒದಗಿದಾಗ ಅವತಾರ ಧಾರಣ ಮಾಡುವೆನೆಂದು ಶ್ರೀ ಕೃಷ್ಣ ಪರಮಾತ್ಮನು ಅಂದಿದ್ದಾನೆ. [illegible] ಧರ್ಮಕ್ಕೆ [illegible] ಪ್ರಕಟವಾಗುವ ಕಾಲ [illegible]. [illegible] ಹಿಂದುಸ್ಥಾನಕ್ಕೆ [illegible]

ಹಣೆ ಸಡೆಯು ತ್ರಿರುತ್ತ್ರವೆಂದು ಆಸಿಸಿಯೂಂಟಿವ್ಯಕವರು ಮುಂಬಯಿಯಲ್ಲಿ ಭಾಷಣ ಮಾಡಿದ್ದಾರೆ. ಮಂಗಳರು ಸಂಬುವಂಥ ಮಾತೇ ಸ್ರಿ.

—

ಬಂದಹರಿನ ಸುದ್ದಿಗಳು.

—o—

ಮಹಾರಾಜರು ಪಟ್ಟಣದ ಹೊರಗಿರುವ ಬಂಗಲೆಯಲ್ಲಿ ವಾಸವಾಗಿರುತ್ತಾರೆಂದು. ಈ [illegible] ಕಡೆಂದು ಗುಪ್ತದ [illegible] ಬಿಟ್ಟಿರುವರೆಂದು ಹೇಳುತ್ತಾರೆ.

ಮಹಾರಾಜರು ಪಟ್ಟದರಸಿಯನ್ನು ಬಿಟ್ಟುಕೊಟ್ಟಿದ್ದರು. ಈಗ ಅವರನ್ನು ಅವರ ಇಬ್ಬರು ಮಕ್ಕಳನ್ನೂ ತಮ್ಮ ವಶ ಕಟ್ಟಿಕೊಂಡಿದ್ದಾರೆ. ತಾತ್ಯಾಸಾಹೇಬ ಹೋಳಕರರೆಂಬ ತಮ್ಮ ಆಪ್ತಜನನ್ನು ಗುಂಡಿಕ್ಕಿಸಿದ ತುರಂಗದಲ್ಲಿಟ್ಟು ಪತ್ತೆ ಮರ್ಗವಾಯಿತು. ಅವರನ್ನು ಬಂಧಮುಕ್ತ ಮಾಡಿ, ಸನ್ನಿಧಿಗೆ ಕರಿಸಿಕೊಂಡಿದ್ದಾರೆ. ಮಲ್ಹಾರರಾವ ಹೋಳಕರ ಕಿಂಬವರ ಮೇಲೂ ಅನುಗ್ರಹ ಮಾಡಿದ್ದಾರೆ.

ಮಹಾರಾಜ ವೇಗದಲು ಇಂದೂರಿಂದ ಗತ್ತಿ ಹೇಳಿರುವ ತನಕ ಮಹಾರಾಜರ ಅಪ್ತ ಲೋಕ ಕರದಲ್ಲಿ ಒಬ್ಬರಾಗಿದ್ದ ಶಂಕರರಾವ ಗಾವಡೆ ಮತ್ತು ಅಂದಿನ ಮೆಯು ಉಗ್ರಾಣದಾರನಾದ ಶ್ರೀ ರಾಮ ಇವರು ಮಹಾರಾಜರ ಕೋಪಕ್ಕಾಗಿ ತುರಂಗದಲ್ಲಿದ್ದಾರೆ ಇವರೂ ಸಹ ಗತಿ ಹೊಂದುವರೆಂದು ಲಕ್ಷಣವಾಗಿರುವುದು.

ಮುಂಬಯಿಯ ಪೋಲೀಸರು ತುರಂಗದಲ್ಲಿ ರಾ ಶ್ರೀರಾಮನ ಜವಾಬು ಬರಕೊಂಡರು.

ಕಮೀಶನ ಕಡಸುವ ಸ್ಥಳಕ್ಕೆ ಪ್ರಯಾಣ ಮಾಡಲು ಮಹಾರಾಜರ ಸಿದ್ಧತೆ ಮಾಡಿದ್ದಾರೆ. ಕಮೀಶನದ ಮುಂದೆ ದಿವಾನ ನರಸಿಂಗರಾವ, ಬಾಬಾ ಸೋಹೇಬ ನೇಳೆಯಲ್ಲಿ ಇಕ್ಕಿಂಗ ದಿವಾನರಾಗಿದ್ದ ಮಿ. ಬಾಪೂಸಾಹೇಬ, ಇನ್ನ ಹೆಕ್ಕರ ಜನರು [illegible] ಪಕ್ಕ ಹೊಂದಿದ ಮಿ. ಗುಲಾಬಸಿಂಗರ ಸ್ಟೆನಾ, ಕಾ ಅಧಿಕಾರಿ ಮೋತಿಲಾಲ ಬೆಗ್, ಮಿ. ನರಸೋಬರ ಅಕೌಂಟಂಟ ಜನರಲ, ಸಂಸ್ಥಾನದ ಸೇನಾಧಿಪತಿ ಜನಾಸಿಂಗ ಮತ್ತು ಬಾಂಗಿಡಿನ ಸ್ಟಾಂಪ ಕುರ್ (ಕಮೀಶನರ) ಮಿ. ಬಲ್ವಂತಸಿಂಗ ಇವರುಗಳ ಸಾಕ್ಷಿ ಸಾಗವೆ.

ಪುಂಡರೀಕನದ ಗುಡಿ ಮತ್ತು ಮಠಗಳನ್ನು ಹಿಂದೂ ಧರ್ಮಾದಾಯದಲ್ಲಿ ಸೇರಿಸಬಾರದೆಂದು ಮದ್ರಾಸದ ಕೌನ್ಸಿಲದಲ್ಲಿ ತಂದ ಬಿಲ್ಲು ಬಹುಮತದಿಂದ ಪಾಸಾಗಿತು. ತಿರುಪತಿಯ ಮಹಾಂತರು ತಂದ ದಾವೆಯಿಂದಲೇ ಕಲಹವು ಉತ್ಪನ್ನವಾಗಬೇಕಾಯಿತು.

ಅಖಿಲ ಪಟ್ಟಸಾಲಿ ದ್ವಿತೀಯ ಪ[illegible]

ಮೊದಲೇ ಹಸ್ತಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿದಂತೆ, ತಾ|| ೩೧-೧-೨೮ ನೆಯ ದಿವಸ ಗದಗ ಮಂಡಲಗಿಯಲ್ಲಿ ಶ್ರೀ ಹನುಮಂತಪ್ಪಾ ಬೆಂಚಿ ಇವರ ಅಧ್ಯಕ್ಷತೆಯ ಕೆಳಗೆ ಸಭೆಯು ನೆರೆಯಿತು. ಸಭೆಗೆ ಸ್ವಜಾತಿಯ ಎಲ್ಲ ಮಹನೀಯರೂ ಬಂದುದಲ್ಲದೆ ಶ್ರೀ. ಚನ್ನಬಸಪ್ಪಾ ಹಾಲಪ್ಪನವರ ಸಂಪಾದಕ ಬಸವರಾಜ, ಶ್ರೀ. ವೆಂಕಟೇಶ ಕುಲಕರ್ಣಿ ಗಳಗನಾಥ, ಶ್ರೀ. ತುಕಾರಾಮ ನಾಮದೇವ ಖಟಾವಕರ ಮತ್ತು ಶ್ರೀ. ರಾಮಪ್ಪ ಬೆಟಗೇರಿ ಮೊದಲಾಗಿ ಬ್ಯಾಡಗಿ ಪ್ರಮುಖ ಗೃಹಸ್ಥರು ನಮ್ಮ ವಿನಂತಿಯ ಮೇರೆಗೆ ಬಂದಿದ್ದರು. ಒಟ್ಟಿಗೆ ಐದಾರು ಸಾವಿರಕ್ಕಿಂತ ಹೆಚ್ಚಿಗೆ ಜನರು ಕೂಡಿರಬಹುದು. ಅಧ್ಯಕ್ಷರು ಸಭಾಮಂದಿರವನ್ನು ಪ್ರವೇಶಿಸಿದ ಮೇಲೆ ಸ್ವಾಗತ ಪದ್ಯಗಳಿಂದ ಎಲ್ಲರ ಸ್ವಾಗತವು ಮಾಡಲ್ಪಟ್ಟಿತು. ಸ್ವಾಗತ ಸಮಿತಿಯ ಅಧ್ಯಕ್ಷರ ಭಾಷಣವಾದ ಮೇಲೆ ಅಧ್ಯಕ್ಷ ಮಹಾಶಯರ ಸಮಾಲೋಚಕ ಉಪನ್ಯಾಸವು ನಡೆಯಿತು. ವಿಷಯ ಆಲೋಚನಾ ಸಮಿತಿಯೊಂದನ್ನು ನಿಯಮಿಸಲು ಅಂದಿನ ಸಭಾಕಾರ್ಯವು ಮುಗಿಯಿತು. ಅಂದೇ ರಾತ್ರಿ ವೇ. ಮೂ. ಮಿತ್ರಿಕೋಟಿ ವೇದವ್ಯಾಸಾಚಾರ್ಯರವರ ಸುಶ್ರಾವ್ಯ ಕೀರ್ತನವಾಯಿತು.

ಮರುದಿವಸದ ಸಭೆಯಲ್ಲಿ ಶ್ರೀ. ರಾಮಪ್ಪ ಬೆಟಗೇರಿ, ಶ್ರೀ. ಚನ್ನಬಸಪ್ಪ ಹಾಲಪ್ಪನವರ ಮತ್ತು ಶ್ರೀ ಗಳಗನಾಥ ಮಾಸ್ತರ ಇವರು ಏಕ್ಯತೆಯ ಮಹತ್ವ, ನೇಕಾರಿಕೆ ಮತ್ತು ಜಾಗೃತಿ ಇವುಗಳ ಬಗ್ಗೆ ಆವೇಶದಿಂದ ಭಾಷಣ ಮಾಡಿದರು. ಬಳಿಕ ಶ್ರೀ ನೀಲಪ್ಪ ಬೆಳ್ಳಾರ, ಪಂಡಿತ ಚನ್ನಬಸಪ್ಪ ಕವಲಿ ಮತ್ತು ರಾಮಪ್ಪ ಕೋರಿಕಲ್ಗ ಇವರು ನಮ್ಮ ಸಮಾಜದ ಸ್ಥಿತಿಗತಿಗಳ ಬಗ್ಗೆ ಉಪದೇಶಪರ ಭಾಷಣ ಮಾಡಿದರು. ಅನಂತರ ಗೊತ್ತಾದ ಕೆಳಗಿನ ಗೊತ್ತುವಳಿಗಳಲ್ಲಿ ಮುಖ್ಯವಾದವುಗಳನ್ನು ಬರೆಯುತ್ತೇವೆ

೧ ಈ ಸಭೆಯು ರಾಜನಿಷ್ಠವಾಗಿದೆ.

೨. ಶ್ರೀ. ವಾ. ವೀರಪ್ಪ ಹಮ್ಮಿಗಿ ಮತ್ತು ಶ್ರೀ ವಾ. ನಿಂಗಪ್ಪ [illegible] ಇವರ ಮರಣದ ಬಗ್ಗೆ ದುಃಖಪ್ರದರ್ಶನ

೩ ನಮ್ಮ ನೇಕಾರಿಕೆಯ ಉನ್ನತಿಯ ಬಗ್ಗೆ ಜಿಲ್ಹಾ ಪರಸ್ಪರ ಸಹಕಾರಿ ಸಂಘವನ್ನು ಸ್ಥಾಪಿಸುವುದು

೪ ಮದ್ಯಪಾನ ನಿಷೇಧ

೫ ಬಾಲವಿವಾಹ ನಿಷೇಧ

೬ ಪುನರ್ವಿವಾಹ ಪ್ರಸಾರ

೭ ಪ್ರತಿಯೊಬ್ಬನು ತನ್ನ ಹೆಣ್ಣು ಗಂಡು ಮಕ್ಕಳನ್ನು ಕನಿಷ್ಠ ಹತ್ತು ವರ್ಷಗಳವರೆಗಾದರೂ ಸಾಲೆಗೆ ಕಳಿಸಬೇಕು.

೮ ಗ್ರಾಮ ಸಂಘಸ್ಥಾಪನೆ.

೯ ಪ್ರತಿ ಲಗ್ನಕ್ಕೆ [illegible] ವಿದ್ಯಾಫಂಡು ತೆಗೆಯುವದು.

೧೦ ಪ್ರತಿ ಊರಲ್ಲಿ ನಮ್ಮ ಜಾತಿಯ ಜನರ ಗಣತಿ ಮಾಡುವದು.

ಇನ್ನು ಕೆಲವು ಗೊತ್ತುವಳಿಗಳಾಗಿ ಅಧ್ಯಕ್ಷರು. ಕ. ಅಧ್ಯಕ್ಷರ ಭಾಷಣವಾದ ಮೇಲೆ, [illegible] [illegible] ಸುಗಂಧ ದ್ರವ್ಯಗಳನ್ನು ಸಮರ್ಪಿಸಲು [illegible] ಗೀತದೊಡನೆ ಸಭಾಕಾರ್ಯ ಸಮಾಪ್ತಿಯಾಯಿತು.

ಕರ್ನಾಟಕ ರಾಷ್ಟ್ರಗೀತ.

(ಗಾಯಿತ ಕಪಲ್ಯ)

(ಇರು ಹಿತದ [illegible]...)

ಭೂದೇವಿ ಕರ್ನಾಟ ಭೂದೇವಿ ಪೂಜ್ಯೆ
ಸಾಧುಸಂಕವಿಸಹಿತೆ ಸಮಿನಿ [illegible] [illegible]
ಕಾವೇರಿಯಿಂದ ಗೋದಾವರಿಯ ವರೆಗಿರ
ದಾವ ಸುಧೆ ತಿಂಕ ಒಡನ ಗಡಿಯಿನಲು
ಭೋಗಸುಂದರೆ ಸಂಪದನ್ನು [illegible] ೧೦
ಕಾವರಿಗೆ ತಾಯಿನಿಸಿ ಮೆರೆದ ಕೊಡಲು || ||
ವೀರಕೇಶ ಚಾಲುಕ್ಯ ರಟ್ಟ ವಿಜಯನಗರ
ಶೂರರ ಜಕ್ಕಣನಕ್ಕ ನಾಗಾಂಬೆ ರಿಗೆ!
ಸೂರಿಶಾಸ್ತ್ರ ಶಿಲ್ಪ ಅಕ್ಕನಾಚಾರ್ಯರಿಗೆ!
ಧೀರ ಮಾಧವ ಮತ್ತ ಪಂಪನಿಗೆ ಜನನಿ || ||
ಮುನ್ನ ಗೈದಿಹ ಶಿಖರದ [illegible] ಗೊಳ
ಮುನ್ನಡೆಯ ಕಳೆಗುಂದಿ ನೆಲೆಗೊಂಡೊಡೆ,
ಚೆನ್ನೆ, ಹಿಂದಿಕ ಕನಕದಾಸಾದಿವಿಜನಸಿ
ನಿನ್ನ ವೈಭವವ ಪೊಗಳಲಸಾಧ್ಯವಮ್ಮಾ || ||

ಬ್ಯಾಡಗಿ
೧೦-೨-೨೮ } [illegible]

—

ಬಿಚ್ಚಗತ್ತಿಯಿಂದ ಬಲವಂತದ ಮತಾಂತರ [illegible].

—o—

ಚಿತಗಾಂಗ ಪ್ರಾಂತಕ್ಕೆ ಸೇರಿದ ರಂಗಮಾಟಿಯಲ್ಲಿನ [illegible] ಪೋಲೀಸ [illegible] ತನ್ನ ಜತೆಗ [illegible] [illegible] ವಿದ್ಯಾರ್ಥಿಗಳನ್ನು ಥಾಣಾದ [illegible] ಗಿ ಚೆಪ್ಪಟಿ [illegible] ಥಾಣಾ [illegible], ಕಾಳಿಮಾತೆಯ ಗುಡಿಗೆ ಹೋಗಿ [illegible] ಯಿಂದ ಥಾಣಾ ದರ್ಶಿಸಿದ. ಬಳಿಕ ಅವರನ್ನು ದಸ್ತಗಿರ ಮಾಡಿದರು.

ಪೋರ್ತುಗಾಲ [illegible] ಮೇಲೆಗೆ ಗೋವೆಯ ಗವರ್ನರ [illegible] ಕಾರ್ಯವನ್ನು ಒಂದಿದಿಗ ಕಳಿಸಿ [illegible].

ಟಿ. ಎಸ್. ಮೋಟಾರ ಸರ್ವ್ಹೀಸ

ಹುಬ್ಬಳ್ಳಿ.

ಶಿವರಾತ್ರಿ ಸಮಯದಲ್ಲಿ ಗೋಕರ್ಣಕ್ಕೆ ಹೋಗುವ ಪ್ರಯಾಣಿಕರ ಸೌಕರ್ಯಕ್ಕಾಗಿ.

ತಾ|| ೧—೨—೨೬ ರಿಂದ ರೆಗ್ಯುಲರ ಸರ್ವ್ಹೀಸ ಇಟ್ಟಿದೆ.

—: ಕಾಲಕ್ರಮಗಳು :—

೧. ಹುಬ್ಬಳ್ಳಿ ಬಿಡುವದು	ಗೋಕರ್ಣ ಸೇರುವದು
ಬೆಳಿಗ್ಗೆ ೭ ಘಂಟೆ.	ಸಾಯಂಕಾಲ ೫ ಘಂಟೆ
ಸಾಯಂಕಾಲ ೫ ಘಂಟೆ	ಬೆಳಿಗ್ಗೆ ೫ ಘಂಟೆ
೨ ಸಾಗರ ಬಿಡುವದು	ಗೋಕರ್ಣ ಸೇರುವದು
ಬೆಳಿಗ್ಗೆ ೭ ಘಂಟೆ	ಸಾಯಂಕಾಲ ೫ ಘಂಟೆ

ಶಿರಸಿ(?)
೩೦-೧-೧೯೨೬

ಎಮ್. ಮಂಜಪ್ಪಾ,
ಪ್ರೊಪ್ರಾಯಿಟರ.

ಮಾತಾಡುವ ಔಷಧವು.

ಅಪ್ಪಾ! ಮಾತಾಡುವದಿಲ್ಲೇಕೆ? ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ? ಹಲ್ಲುನೋವಿಯೋ? ಮಯ್ಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು?

ಅಪ್ಪನು— ಕಂದಾ— ಹೌದು ಮಯ್ಯಲ್ಲಿ ನೋಯುತ್ತದೆ.

ಕಂದ— ಹಾಗಾದರೆ ಪೇಮೆಂಟ ಕ್ಯೂಯರ ತಕ್ಕೊಳ್ಳು. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಡ್ರುವಿ ಕಿಮ್ಮತ್ತು ಶೀಶ [illegible]. ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ವಿಳಾಸ— ಕನಕಾದಿತ್ಯ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ
ಸ್ಟೇಶನರೋಡ ಹುಬ್ಬಳ್ಳಿ

ವ್ರಣಸಂಹಾರ

ಅಥವಾ

ಘಾಯದ ಮೇಲಿನ ಮಲಮು

ಈ ಮಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣಗಜ್ಜಿ, ಗರ್ಮಿಯ ಚಟ್ಟೆ, ಭಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಿರಬೇಕೆಂದು ಕ್ರಯ [illegible] ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ. ಪರಸ್ಥಳದವರಿಗೆ ಅಂಚೆವೆಚ್ಚ ಬೇರೆ.

ಹುಬ್ಬಳ್ಳಿ ಏಜಂಟರು— ದಿ ಕನಕಾದಿತ್ಯ ಮೆಡಿಕಲಸ್ಟೋರ್ಸ— ಸ್ಟೇಶನ ರೋಡ ಹುಬ್ಬಳ್ಳಿ. ಹೋಲ ಮತ್ತು ಕಿರುಕೋಳದಿಂದ ದೊರೆಯುವದು.

ಎಸ್. ಎಫ್. ಪಂಡಿತ
ಖಡೇಬಜಾರ ಬೆಳಗಾವಿ

ನೋಟೀಸು

ಬಾಳಪ್ಪಾ ತಾಯಿ ಅಡಿವೆವ್ವಾ ಚಲವಾದಿ ಸಾ. ಶಿರೇಗೂರ ತಾ. ಹುಬ್ಬಳ್ಳಿ ಇವಳಿಗೆ—

ಕೆಳಗೆ ಸಹಿ ಮಾಡುವ ಯಲ್ಲವ್ವಾ ಕೋಂ ಬಾಳಪ್ಪಾ ಚಲವಾದಿ ಸಾ— ಹೆಬಸೂರ ತಾಲೂಕ ಹುಬ್ಬಳ್ಳಿ ನಾನು ಈ ನೋಟೀಸಿನ ಮೂಲಕ ನಿನಗೆ ತಿಳಿಸುವದೇನಂದರೆ ನೀನು ನನ್ನ ಲಗ್ನದ ಗಂಡನಿದ್ದು ನನ್ನ ಲಗ್ನವಾದ ನಂತರ ನನ್ನನ್ನು ೫-೬ ವರ್ಷದ ಹಿಂದೆ ಕರಕೊಂಡು ಹೋಗಿ ಅಜಮಾಸ ಎರಡು ತಿಂಗಳ ತನಕ ನಿನ್ನ ಮನಿಯಲ್ಲಿ ಇಟ್ಟುಕೊಂಡಿ ಅಗ್ಗೆ ನಿನ್ನ ಸೂಳೆಯು ನಿನ್ನ ಹತ್ತರ ಇದ್ದಳು ಆಕೆ ಮಾತು ಕೇಳಿಕೊಂಡು ನನ್ನನ್ನು ಹೊಡೆದು ಬಡದು ಮಾಡಿ ಹೊರಗೆ ಹಾಕಿದಿ ಆಗ್ಗೆ ನಾನು ನನ್ನ ತವರಮನಿಗೆ ಬಿಟ್ಟು ಹೋದೆ ಮುಂದೆ [illegible] ಸಾರೆ ನನ್ನ ತಂದೆ ನನ್ನನ್ನು ನಿನ್ನ ಮನಿಗೆ ಕಳಿಸಿಕ್ಕೊಂಡರೂ ಸಹಿತ ನೀನು ನನ್ನನ್ನು ಕರಕೊಳ್ಳಲಿಲ್ಲಾ ನನ್ನ ಹೊಟ್ಟೆ ವ್ಯವಸ್ಥಾನು ಈ ವರಿಗೆ ನೀನು ಮಾಡಲಿಲ್ಲಾ ಅಂದಿನಿಂದಾ ಇಂದಿನ ವರಿಗೆ ನನ್ನ ಹೊಟ್ಟಿದಲಿಂದಾ ಯರಡನೇ ಕಡಿಗೆ ಐದನೂರು ರೂಪಾಯಿ ಸಾಲವಾಗಿರತದೆ ಸಾಲಗಾರರ ತಗಾದಿ ಬಹಳ ಆಗಿರತದೆ ಕಾರಣ ಈ ನೋಟೀಸ ಮುಟ್ಟಿದ ೧೫ ದಿವಸದಲ್ಲಿ ಮೇಲೆ ಬರೆದ ಸಾಲಾ ತೀರಿಸಿ ನನ್ನನ್ನು ಕರಕೊಂಡು ಹೋಗಬೇಕು ಇರ ಇದರಂತೆ ನೀನು ಮಾಡದೆ ಹೋದ್ರೆ ಮೇಲೆ ಬರೆದ ಮುದ್ದತಿನ ವರಿಗೆ ನಿನ್ನ ಹಾದಿ ನೋಡಿ ನಾನು ಎರಡನೇದವನನ್ನು ಉಡ್ಕಿ ಮಾಡಿಕೊಂಡು ಹೋಗತೇನೆ ಆ ಮೇಲೆ ನಿನ್ನ ಹಕ್ಕು ನನ್ನ ಮ್ಯಾಲೆ ಏನೂ ಇಲ್ಲಾ ಈ ನೋಟೀಸಿನ ಖರ್ಚು ನೀನೇ ಕೊಡತಕ್ಕದ್ದು ತಾ. ೩೦-೧೧-೧೫ ಇಸ್ವಿ

ಈ ಯಡಗೈ ಹೆಬ್ಬಟ್ಟಿನ ಗುರತಾ ಯಲ್ಲವ್ವಾ ಕೋಂ ಬಾಳಪ್ಪಾ ಚಲವಾದಿ [illegible]

ಚಂದಾದಾರರಿಗೆ ಸೂಚನೆ.

ಫೇಬ್ರುವರಿ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭ ಹಾಗುವ ನಿಮ್ಮ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯುವನ್ನು ಪ್ರೋತ್ಸಾಹಿಸಬೇಕೆಂಬ ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು [illegible] ಇವರು ಧಾರವಾಡದಲ್ಲಿರುವ [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭) ಧಾರವಾಡ ಸೋಮವಾರ ತಾರೀಖು ೧೫ನೇ ಫೇಬ್ರುವರಿ ೧೯೨೬ (ಸಂಚಿಕೆ ೩೪

ಸರಕಾರದಿಂದ ಪೇಟೆಂಟ ದೊರೆತಿದ

ಮಲ್ಹಾರ ಕಪ್ಪಲಿ.

ತೋಟಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟಲೇ ಅದರ ಕೆಳಭಾಗದಲ್ಲಿಯ ಜಾಳಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಜಗ್ಗಲ್ಪಡುತ್ತಲೇ ಜಾಳಗೆಯ ಪರದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳಲ್ಲಿರುವವು.

ನಂ ೧	೩೫ ಗ್ಯಾಲನ್.	ಬೆಲೆ ೨೦ ರೂ.
ನಂ ೨	೫೫ ,,	,, ೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ಬಿಗೇಪಿನ್ ಟಾಯಿಂಪೀಸ ದರ ರೂಪಾಯಿ ೯ | ರಿಸ್ಟವಾಚ ಬೆಳ್ಳಿಜುಪಿಲ್ಲದ ಲಿವ್ಹರ ರೇಡಿಯಂದರ ರೂಪಾಯಿ ೧೫

ಇವಲ್ಲದೆ ಬೇರೆ ಬೇರೆ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ಸ್ಪ್ರಿಂಗ ಪಟ್ಟಿ, ವ್ಯಾಕ್ಸ ಸಿಗುತ್ತವೆ ಇನ್ನು ಎಂಜಿನ ಮತ್ತು ಬೇರೆಬೇರೆ ಕಂಪನಿಯ ವಾಚಗಳು ಯೋಗ್ಯ ದರದಿಂದ ಸಿಗುತ್ತವೆ. ನಾವು ವೆಸ್ಟಎಂಡ ವಾಚ ಕಂಪನಿಯ ರಜಿಸ್ಟರ್ಡ ಎಜಂಟ್ಸ ಇರುತ್ತೇವೆ. ವ್ಹಿ. ಪಿ. ಮುಖಾಂತರ ತರಿಸಿಕೊಳ್ಳುವವರು ೧/೪ ಹಣ ಅಡ್ವಾನ್ಸ ಕಳಿಸಬೇಕು.

ಅಯ್ಯನಗೌಡರ ಆ್ಯಂಡ ಗುಡಿ.

ವಾಚ ಮರ್ಚಂಟ್ಸ ಆ್ಯಂಡ ಕಮಿಶನ್ ಎಜಂಟ್ಸ, ಸ್ಟಾಮಪೇಪರರೋಡ, ಗದಗ

ಧಾರವಾಡದಿಂದ ಗದಗ ಮಾರ್ಗವಾಗಿ ಬೆಟಗೇರಿಗೆ ಮೋಟಾರ ಸರ್ವೀಸ.

ನಾವು ಧಾರವಾಡದಿಂದ ದಿನಾಲು ಮುಂಜಾನೆ ೭ ಗಂಟೆಯಿಂದ ಮೋಟಾರ ಬಿಟ್ಟು ಗದಗ, ಕಣಕೋಪ್ಪ, ಕಲಘಟಗಿ, ಕಲ್ಲಿ[illegible]ದಿಂದ ಬೆಟಗೇರಿಗೆ ೯ ಗಂಟೆಗೆ ಮುಟ್ಟಿಸುವೆವು. ಅಲ್ಲಿಂದ ೩ಗಂ ಹೊರಟು ಕಚೇರಿಯ ವೇಳೆಗೆ ೧೦॥ ಗೆ ಧಾರವಾಡಕ್ಕೆ ತರುವೆವು. ಹೆಚ್ಚಿಗೆ ಪ್ಯಾಸೆಂಜರರು ಸಿಕ್ಕರೆ ಸಾಯಂಕಾಲದಲ್ಲಿಯೂ ಮೋಟಾರ ಬಿಡುವೆವು. ಧಾರವಾಡದಲ್ಲಿ ಪೋಲೀಸ ಧರ್ಮಶಾಲೆಯ ಹತ್ತರ ನಮ್ಮ ಹೋಟಲದಿಂದ ಮೋಟಾರ ಬಿಡುವೆವು.

ಬೆಟಗೇರಿ ಎಜಂಟರು ಮೆ. ಕಮರುದ್ದೀನ ಜಾಗೀರದಾರ ಮತ್ತು ಮೆ. ಹುಸೇನಸಾಹೇಬ ದೊಡಮನಿ ಇವರಲ್ಲಿ ಟಿಕೇಟುಗಳು ಮುಂದಾಗಿ ದೊರೆಯುವವು.

ಎಮ್. ಕೆ. ನವಲಗುಂದ

ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ೬ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,

ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೧೫-೨-೩೭ನೇ ಇಸ್ವಿ

ಹಿಂದೀ ಹಡಗಪಡೆಯು.

ಹಿಂದುಸ್ಥಾನದ ರಕ್ಷಣೆಗಾಗಿ ಹಿಂದುಸ್ಥಾನ ಸರಕಾರದವರು ಹಿಂದೀ ಹಡಗಪಡೆ ಎಂಬ ಹೆಸರಿನ ಸ್ವತಂತ್ರ ಖಾತೆಯನ್ನು ಮಾಡಿದರು. ಸರಕಾರ ದೃಷ್ಟಿಯಿಂದ ಈ ಖಾತೆಯ ನಿರ್ಮಾಣವು ಅತ್ಯಂತ ಮಹತ್ವದ್ದಾಗಿರುತ್ತದೆ. ಆದರೆ ಪ್ರಜೆಗಳು ಮಾತ್ರ ಎಷ್ಟೂ ಸಂತೋಷಪಟ್ಟಿರುವದಿಲ್ಲ. ಹಿಂದುಸ್ಥಾನವು ಬಹಳ ದೊಡ್ಡ ದೇಶವು. ಜಲ ಮಾರ್ಗದಿಂದ ಬರುವ ವೈರಿಯನ್ನು ಹೊಡೆದೋಡಿಸುವದಕ್ಕೆ ಇಂಗ್ಲಂಡದ ಹಡಗಪಡೆಯು ಪರನ್ನೇಕೆ ಕೊಡಬೇಕು? ಹಿಂದುಸ್ಥಾನವು ಇದರ ವೆಚ್ಚದ ಕೆಲವಂಶವಾದರೂ ಕೊಡಬೇಕೆಂದು ಹತ್ತೆಂಟು ವರ್ಷಗಳಿಂದ ವಿಲಾಯತಿಯಲ್ಲಿ ಚರ್ಚೆ ನಡೆದಿತ್ತು. ಮಹಾಯುದ್ಧದಲ್ಲಿ ಯಮುಡನವು ಪ್ರಬಂಡ ಕಿರಾಟಿಕೆ ಹಾಕಿದ್ದರಿಂದ ಹಿಂದುಸ್ಥಾನದ ದೆಸೆಯಿಂದ ಸ್ವತಂತ್ರವಾದ ಹಡಗಪಡೆಯು ಬೇಕೆಂಬ ಬ್ರಿಟಿಶ ಮಂತ್ರಿಗಳಿಗೆ ಪದೇ ಪದೇ ಅನ್ನಿಸಹತ್ತಿತು. ಇಂಗ್ಲಂಡದ ವ್ಯಾಪಾರವು ಚೀನದಲ್ಲಿ ಬಹಳವಾಗಿರುವದು. ಅಲ್ಲಿಯ ತನ್ನ ಇಂಗ್ಲಿಷ ಹಡಗಗಳ ಸಂರಕ್ಷಣೆ ಮಾಡಬೇಕಾಗುತ್ತದೆ. ಆ ದುರಿಂದಲೇ ಸಿಂಗಾಪೂರದಲ್ಲಿ ಯುದ್ಧದ ಹಡಗಗಳ ಜಲದುರ್ಗವನ್ನು ಕಟ್ಟುವ ಉದ್ಯೋಗ ಕೈಕೊಂಡಿದ್ದಾರೆ. ಇದರ ಕಲುಷಾಂತಾ ಲಂಕೆಯಲ್ಲಿ ಯುವ ಟ್ರಿಂಕೋಮಲಿ ಬಂದರವು ಹಡಗಪಡೆಯ ದೊಡ್ಡ ಠಾಣೆಯಾಗುವದು. ಜಪಾನದ ಭಯವು ಹಿಂದುಸ್ಥಾನ ಮತ್ತು ಬ್ರಿಟಿಶ ವ್ಯಾಪಾರಕ್ಕೆ ಇಂದು ಆಗಬಾರದೆಂದು ಈ ಎರಡು ಸ್ಥಳಗಳಲ್ಲಿ ಜಲದುರ್ಗಗಳನ್ನು ಕಟ್ಟಿದ ನಂತರ, ಹಿಂದುಸ್ಥಾನಕ್ಕಾಗಿಯೇ ಮೂರನೇ ಕೋಟೆ ಕಟ್ಟುವರು. ಹೀಗೆ ಹಿಂದುಸ್ಥಾನದ ದ್ರವ್ಯ, ಅಧಿಕಾರ, ಉಪಯೋಗ ಮತ್ತು ಬಹಾದ್ದೂರಿಯು ಇಂಗ್ಲಿಷ ಜನರದೇ ಆಗುವದು. ಇದು ತಪ್ಪದೆಂದು ಹಿಂದೀ ಜನರು ಅಭಿಮಾನ ಪಡಬೇಕೆಂದು ಈ ಖಾತೆಯನ್ನು ಕೆಲವು ಹಿಂದೀ ಜನರಿಗೆ ಕರ್ನಲ ಮೇಜರರಂಥ ಹುದ್ದೆ ಕೊಡುವ ಪದ್ಧತಿ ಕಲಿಸುವರು. ಇಷ್ಟಿದ್ದರೂ ಹಿಂದೀ ಜನರು ಕಷ್ಟಾರ್ಥಾಗುವದರಿಂದ ಇದೆಲ್ಲ ಹಿಂದೀ ಆಗಲಾರದು. ಹಿಂದುಸ್ಥಾನದ ದಂಡಿನಲ್ಲಿ ಒಟ್ಟು ಸೋಲ್ಜರನಿಲ್ಲದಂತಾಗಬೇಕೆಂದು ಸ್ಕೀನ ಕಮಿಟಿಯ ಮುಂದೆ ಸಾಕ್ಷಿಗಳಾಗಿರುತ್ತವೆ. ಅದೇ ಪ್ರಕಾರ ಕಡಲ ಕೋಟೆಯ ಕಾವಲಗಾರರೂ, ಕೆಲಗಳೂ ದಳವಾಯಿಯಿಂದ ಕಾಲಾಳಿನ ತನಕ ಎಲ್ಲರನ್ನು ಇಂತಿಷ್ಟು ವರ್ಷಗಳಲ್ಲಿ ಹಿಂದೀ ಆಗುವಂತೆ ಮಾಡುವೆವೆಂದು ಲಾರ್ಡ ರೀಡಿಂಗಸಾಹೇಬರು ಆಶ್ವಾಸನ ಕೊಡಬೇಕಾಗಿತ್ತು. ಆದರೆ ಮುಖ್ಯ ಮಾತನ್ನು ಬಿಟ್ಟು ಹಿಂದೀ ಹೆಸರು ಕೊಟ್ಟ ಮಾತ್ರದಿಂದ ಯಾರ ಸಮಾಧಾನವಾಗುವದು? ನಿಶಾನೆಕೂಡ ಇಂಗ್ಲಂಡದ್ದೇ! ಹಿಂದೀ ಜನಾಂಗದ ರಾಷ್ಟ್ರೀಯ ನಿಶಾನೆ ಕೂಡ ಇರುವದಿಲ್ಲ. ಪೂರಾ ಪರಾವಲಂಬನವೇ ಸರಿ. ಆಸ್ಟ್ರೇಲಿಯಾ, ಕೇಪ ಕಾಲನಿ ಮೊದಲಾದ ವಸಾಹತುಗಳು ಸ್ವಂತ ಹಡಗ ಪಡೆಯನ್ನಿಟ್ಟುಕೊಂಡಿರುತ್ತದೆ. ಆ ಮಾದರಿಯ ಜಲದುರ್ಗಗಳನ್ನು ಕಟ್ಟುವದೇ ತಮ್ಮ ಧ್ಯೇಯವೆಂದು ಕೂಡ ಲಾರ್ಡ ರೀಡಿಂಗಸಾಹೇಬರ ಭಾಷಣದಲ್ಲಿ ವ್ಯಕ್ತವಾಗಿರುವದಿಲ್ಲ. ಆದ್ದರಿಂದ ಪ್ರಜರು ಈ ಬಗ್ಗೆ ಯಾವ ತರದ ಸಂತೋಷ ಅಥವಾ ಸಮಾಧಾನವನ್ನು ವ್ಯಕ್ತಪಡಿಸಿರುವದಿಲ್ಲ.

ದನಗಳ ರಕ್ಷಣೆ—

ಪಂಡಿತ ಮೋತಿಲಾಲರು ಅಸೆಂಬ್ಲಿಯಲ್ಲಿ ಮತ್ತು ನಾಶಿಕದ ಮಿ. ಪ್ರಧಾನರು ಮುಂಬಯಿ ಕೌನ್ಸಿಲದಲ್ಲಿ ದನಗಳ ರಕ್ಷಣೋಪಾಯಗಳ ಠರಾವುಗಳನ್ನು ತರತಕ್ಕವರಿದ್ದಾರೆ. ದನಗಳನ್ನು ವ್ಯಾಪಾರಕ್ಕಾಗಿ ಪರದೇಶಕ್ಕೆ ಕಳಿಸಬಾರದೆಂದೂ ದನಗಳ ಮಾಂಸವನ್ನು ನಿರ್ಗತಮಾಡಬಾರದೆಂದೂ ಪಂಡಿತರ ಠರಾವಿನ ಆಶಯವಾಗಿದೆ. ಹಿಂದುಸ್ಥಾನದಿಂದ ಪ್ರತಿ ವರ್ಷ ನಾಲ್ಕು ಲಕ್ಷ ದನಗಳು ವ್ಯಾಪಾರಕ್ಕಾಗಿ ಪರದೇಶಕ್ಕೆ ಹೋಗುತ್ತಿರುವವು. ಮತ್ತು ಮೂವತ್ತು ಲಕ್ಷ ದನಗಳನ್ನು ಮಾಂಸ ವಿಕ್ರಯಕ್ಕಾಗಿ ಇಲ್ಲಿ ಕೊಂದು ನಿರ್ಗತಮಾಡುತ್ತಿದ್ದಾರೆ. ಪ್ರತಿ ವರ್ಷ ೬೪ ಲಕ್ಷ ದನದ ಸಂಹಾರವಾಗುತ್ತಿರುವದರಿಂದ ಬೇಸಾಯಕ್ಕಾಗಿ ದನಗಳ ಕೊರತೆಯಾಗಿ ಅವುಗಳ ಬೆಲೆಯು ಕೃಷಿಕನ ಯೋಗ್ಯತೆ ಮೀರಿ ಬೆಳೆದಿರುತ್ತದೆ. ಆದುದರಿಂದ ಹಿಂದುವ ಮತ್ತು ೯ ವರ್ಷದೊಳಗಿನ ದನಗಳನ್ನು ಕೊಲ್ಲಬಾರದೆಂದು ಶ್ರೀ. ಪ್ರಧಾನರ ಠರಾವು ಆಗಿರುತ್ತದೆ. ಎರಡೂ ಠರಾವುಗಳನ್ನು ಅಮಲಿನಲ್ಲಿ ತರುವದು ಸರಕಾರದ ಕರ್ತವ್ಯವಾಗಿರುತ್ತದೆ. ರಾಯಲ ಕಮೀಶನ ಬಂದು ಬೇಕಾದಂಥ ಹೆಚ್ಚಳದ ಮಾತುಗಳನ್ನು ಹೇಳಲಿ; ಈ ಕೊಲೆಯನ್ನು ನಿಲ್ಲಿಸಿದ ಹೊರತು ಒಕ್ಕಲತನಕ್ಕೆ ಎಂದೂ ಅಭಿವೃದ್ಧಿ ಹೊಂದಲಾರದು.

ಸ್ವರಾಜ್ಯ ಪಕ್ಷೀಯರ ಹೊಸ ಧೋರಣವು.

ಹೋದ ವರ್ಷ ಮುಂಬಯಿ ಕೌನ್ಸಿಲದಲ್ಲಿ ಸ್ವರಾಜ್ಯ ಪಕ್ಷೀಯರು ಪ್ರತಿಕಾರ ಧೋರಣ ಮಾಡಿ, ಸರಕಾರವು ಬೇಕಾದಂತೆ ವರ್ತಿಸಿದರೂ ಬಿಲ್ಲು ಬಿಡದ ಕಲ್ಲಿನಂತೆ ಕೂತರಷ್ಟೇ; ಬರುವ ತಾರೀಖಿನಿಂದ ಪ್ರಾರಂಭವಾಗುವ ಕೌನ್ಸಿಲಿನಲ್ಲಿಯೂ ಮೂಕವೃತ್ತಿಯನ್ನು ಹಿಡಿದರೆ ಸರಕಾರವು ಬೇಕಾದ ಕಾಯಿದೆಗಳನ್ನೂ ಬಾಬುಗಳನ್ನೂ ಸೇರಿಸಿಕೊಂಡು ಕರ ಜಕಾತಿಗಳನ್ನು ಹೆಚ್ಚಿಸಬಹುದು. ಆದುದರಿಂದ ಬಿಲ್ಲು ಬಿಡದ ಗುಂಡಗಲ್ಲಿನಂತೆ ಸುಮ್ಮನೆ ಕೂಡ್ರದೆ, ಸರಕಾರದ ಸ್ವೈರ ವರ್ತನಕ್ಕೆ ಅಂಕುಶದ ಭಯ ತೋರಿಸಬೇಕೆಂದು ಇವರು ನಿಶ್ಚಯಿಸಿದ್ದಾರೆ. ಸ್ವರಾಜ್ಯ ಪಕ್ಷದ ಮತದಾರರು ಇವರಿಗೆ ಇದೇ ಪ್ರಕಾರದ ಅಭಿಪ್ರಾಯ ಹೇಳಿದ್ದಾರೆ.

ಮಂತ್ರಿಯ ಮೇಲೆ
ಬಾಂದಿನ ಮೇಲೆ ಬಾಂಬು ಹಾರಿದವು.

—o—

ಮುಂಗೈ ಕಸವಿನಿಂದ ದೊರೆತ ವರ್ತಮಾನದಲ್ಲಿ ಮುಸಿಲೋನಿಯ ಅನುಜನಾಗಿ ಸ್ಪೇನದ ಸಚಿವ ಶ್ರೀಮ್ನಾ ದ ರಿ. ರಿವ್ಹೇರಿಯಾಸಾಹೇಬನು ಮುಖ್ಯ ಬಂದರವಾದ ಬಾರ್ಸಿಲೋನಾಕ್ಕೆ ಹೋಗಿದ್ದನು. ಸಿಂಡಿಕ್ಯಾಲಿಸ್ಟ ಮತ್ತು ಕಾಟಲೋನಿಯನ ಇವನ ವೈರಿಗಳ ಪಕ್ಷದವರು ಈತನನ್ನು ಕೊಲ್ಲುವದಕ್ಕಾಗಿ ಏಳು ಬಾಂಬುಗಳನ್ನು ಹಾರಿಸಿದರು. ಒಂದು ಈತನಿದ್ದ ಮನೆಯ ಮುಂಬಾಗಿಲದಲ್ಲಿಯೂ ಇನ್ನೊಂದು ಸ್ಟೇಶನದಲ್ಲಿ ಬಂಡಿ ಹತ್ತುವಾಗಲೂ ಹಾರಿದವು. ಉಳಿದವನ್ನು ಸಂಧಿ ಸಾಧಿಸಿ ಹಾರಿಸಿದರು. ಆದರೂ ಮಂತ್ರಿಯು ತುತ್ತು ಪಾರಾದನು.

ಕಡಲಗಳ್ಳತನವು.

—o—

ಫ್ರೆಂಚರ ಬೇಡವೆಂಬ ಹಡಗವು ಹಾಂಗಕಾಂಗದಿಂದ ಮಾಂಗಚುವಾನಯೆಂಬಲ್ಲಿಗೆ ಹೋಗುತ್ತಿತ್ತು. ಏಳು ಜನ ಕಡಲಗಳ್ಳರು ಪ್ರವಾಸಿಕರಂತೆ ಇದರಲ್ಲಿ ಕೂತರು. ಹಡಗವು ನಡುಸಮುದ್ರದಲ್ಲಿ ಬಂದ ಕೂಡಲೆ, ಅವರು ತಮ್ಮ ನಿಜಸ್ವರೂಪ ವ್ಯಕ್ತಮಾಡಿ, ಅಲ್ಲಿದ್ದ ಬಂಗಾರವನ್ನು ಕೈವಶ ಮಾಡಿಕೊಂಡು, ಕಪ್ತಾನನಿಗೆ ಗುಂಡಿನ ಭಯ ತೋರಿಸಿ, ಹಾಯಿಸಬೇಕೆಂಬಲ್ಲಿಗೆ ಹಡಗ ನಡಿಸಲು ಒತ್ತಾಯ ಪಡಿಸಿದರು. ೮೦ ಟನ ವಜನಿನಷ್ಟು ಸಾಮಾನವನ್ನು ದೋಣಿಯಲ್ಲಿಳಿಸಿಕೊಂಡ ಹಡಗವನ್ನು ಸಾಗಬಿಟ್ಟರು.

ಖಾದಿಯ ಬೆಲೆ-

ಅಸಹಕಾರದ ಆಂದೋಲನದ ವೇಳೆಯಲ್ಲಿ ಖಾದಿಯ ಬೆಲೆಯು ವಾರಿಗೆ ೧೧॥ ಆಣೆಪ್ರಕಾರ ಮಾರಿತು. ಅದು ಇಳಿಯುತ್ತಾ ೧೦॥, ೯॥ ಆಣೆಯಾಗಿ ಈಗಂತೂ ೮॥ ಕ್ಕೆ ಧಾರಣೆ ಇಳಿದಿರುತ್ತದೆ. ಈ ದರದಿಂದ ಧಾರವಾಡ ಕಾಂಗ್ರೆಸ ಕಮೀಟಿಯಲ್ಲಿ ಸೊಗಸಾದ ಖಾದಿಯು ಮಾರಲಿಕ್ಕೆ ದೊರೆಯುವದು.

ಇಂದೂರಿನ ಸುದ್ದಿಗಳು.

—೦—

ಮಹಾರಾಜರ ಮೇಲೆ ಬಂದ ಪೇಚಿನ ದೆಸೆಯಿಂದ ಪ್ರಜರಲ್ಲಿ ಚಿಂತೆಯಿದ್ದರೂ ಸ್ವಾಸ್ಥ್ಯವು ಇಲ್ಲ. ಸ್ವಾಮಿಭಕ್ತಿ ಪರಾಯಣವಾದ ದಂಡಿನಿಂದ ಅನುಚಿತ ಕಾರ್ಯವಾದೀತೆಂಬ ಮುಂಗಂಡ ವಿಚಾರದಿಂದ ಸೈನ್ಯದ ಎಲ್ಲ ಶಸ್ತ್ರಗಳನ್ನು ತಕ್ಕೊಂಡು, ಮದ್ದು ಗುಂಡಿನ ಮನೆಗೆ ಪೋಲೀಸರು ಬಹಳ ಭದ್ರವಾದ ಕಾವಲು ಇಟ್ಟಿದ್ದಾರೆ. ಸಂಸ್ಥಾನದಲ್ಲಿ ಸೈನ್ಯ ಸಂಖ್ಯೆಯು ೩೦೨೧ ಇರುತ್ತದೆ.

ಪ್ರಖ್ಯಾತ ವಕೀಲ ಬ್ಯಾರಿಸ್ಟರ ಜಯಕರರು ಆಲೋಚನೆ ಹೇಳಿದಂತೆ ಸಂಸ್ಥಾನಗಳ ದಿವಾನಗಿರಿಯಲ್ಲಿ ನುರಿತು, ರಾಜಕಾರಣ ಪಟುಗಳಾಗಿರುವಂಥ ಕೊಲ್ಹಾಪೂರದಲ್ಲಿ ದಿವಾನರಾಗಿದ್ದ ಸರ ಸಬನೀಸ ಮತ್ತು ಬಡೋದೆಯ ದಿವಾನರಾಗಿದ್ದ ಸರ ಮನುಭಾಯಿಯವರನ್ನು ಆಲೋಚನೆ ಹೇಳಲಿಕ್ಕೆ ಕರಿಸಿಕೊಂಡಿದ್ದಾರೆ.

ಕಮೀಶನವು ದಿಲ್ಲಿ ಅಥವಾ ಮದ್ರಾಸದಲ್ಲಿ ಕೂಡುವದೆಂದು ವಾರ್ತೆಯುಂಟು.

ವಿವಿಧ ವರ್ತಮಾನಗಳು.

—೦—

ಮಹಾತ್ಮರಿಗೆ ಎಲ್. ಎಲ್. ಡಿ. ಪದವಿಯನ್ನು ಕೊಡಬೇಕೆಂದು ಮದ್ರಾಸದ ಯುನಿವರ್ಸಿಟಿಯ ಮುಂದೆ ಸೂಚನೆ ಬಂದಿದೆ.

ನಿನ್ನಿನದಿನ ಅಕೋಲೆಯಲ್ಲಿ ಪ್ರತಿಯೋಗಿ ಸಹಕಾರಿಗಳ ಸಭೆ ಕೂಡಿದೆ. ಬ್ಯಾರಿಸ್ಟರ ಜಯಕರರು ಅಧ್ಯಕ್ಷರಾಗಿದ್ದಾರೆ. ಕೆಲಗೇಟರ ಸ್ಪೀಚು ಮೂರೇ ದಿವಸ !!

ದೇಶಬಂಧು ದಾಸರ ಅಖಿಲ ಭಾರತೀಯ ಸ್ಮಾರಕ ಫಂಡು ಒಂದೂವರೆ ಲಕ್ಷಕ್ಕೆ ಸಮೀಪ ಬಂದಿದೆ.

ಖಾದಿಗೆ ಕಪ್ಪು ಕರಸುವದಿಲ್ಲ. ಅದು ಬಿಳುಪು ಸಾಮಾನುಗಳನ್ನು ಹಿಂದುಸ್ಥಾನ ಸರಕಾರದವರು ಕ್ರಮೇಣ ಬಂದು ಮಾಡು[illegible]ವರು. ಇದೆ ಸಿಂಧಿಯ ವಿಚಾರವೇನು?

ಝಾಶಿ ಕಮಾಲ ಪಾಶ್ಚಾ ಸಾಹೇಬರು ಲಂಡನಕ್ಕೆ ಬರುವರು. ಮೊಸಲದ ರಾಜಕಾರಣವೇ ಇರಬಹುದು.

ಕೌನ್ಸಿಲ ಆಫ ಸ್ಟೇಟದಲ್ಲಿಯೂ ಸ್ವರಾಜ್ಯ ಪಕ್ಷೀಯರು ಬಣ ಕಟ್ಟಿದ್ದಾರೆ. ಡಾಕ್ಟರ ಯು. ರಾಮರಾಯರು ಇದರ ಮುಖಂಡರಾಗಿ ನೇಮಿಸಲ್ಪಟ್ಟಿದ್ದಾರೆ.

ಧಾರವಾಡ—

ಕಲಘಟಗಿ ತಾಲೂಕಿಗೆ ಸೇರಿದ ದೇವರಗುಡಿಹಾಳ, ಕೇವಡಿಹಾಳ ಮತ್ತು ಕಾರೀಹಾಳ ಈ ಮೂರು ಗ್ರಾಮಗಳನ್ನು ಹುಬ್ಬಳ್ಳಿ ತಾಲೂಕಿಗೆ ಸೇರಿಸಿದ್ದಾರೆ.

ಧಾರವಾಡ, ವಿಜಾಪೂರ, ಮತ್ತು ಬೆಳಗಾವಿ ಈ ಮೂರು ಜಿಲ್ಹೆಗಳಲ್ಲಿ ಎಂಟು ಜನ ಎಲ್. ಎಲ್. ಬಿ. ಗಳಿಗೆ ವಕೀಲಿ ಸನದು ಕೊಟ್ಟಿದ್ದಾರೆ. ಇವರಲ್ಲಿ ಐವರು ಲಿಂಗಾಯತರು ಮತ್ತು ಮೂವರು ಬ್ರಾಹ್ಮಣರಾಗಿದ್ದಾರೆ.

ಧಾರವಾಡ ಡಿಸ್ಟ್ರಿಕ್ಟ ಲೋಕಲಬೋರ್ಡಿನಲ್ಲಿ ಸ್ಕೂಲ ಕಮಿಟಿಗಾಗಿ ಸರಕಾರದವರು ನಾಲ್ವರು ಮೆಂಬರರನ್ನು ನೇಮಿಸಬೇಕಾಗಿತ್ತು. ಇವರನ್ನು ನೇಮಿಸುವ ಅಗತ್ಯವಿಲ್ಲೆಂದೂ ಲೋಕಲಬೋರ್ಡಿನಿಂದ ಆರಿಸಲ್ಪಟ್ಟವರೇ ಕೆಲಸ ನೋಡಬೇಕೆಂದೂ ಸರಕಾರದ ಠರಾವು ಬಂದಿದೆ. ಎಪ್ರಿಲ ೧ ನೇ ತಾರೀಖಿನಿಂದ ಶಾಲೆಗಳು ಬೋರ್ಡಿನ ವಶಕ್ಕೆ ಬರುವವು.

ಮಹಾಶಿವರಾತ್ರಿಯಲ್ಲಾದ ಶ್ರೀ ಶಿದ್ಧಾರೂಢರ ರಥದ ಜಾತ್ರೆಗೆ ಬಹಳ ದೊಡ್ಡ ಪರಿಷೆ ಕೂಡಿತ್ತು. ಮುಂಬಯಿ ಪುಣೆ ಮುಂತಾದ ದೂರ ದೂರಿನ ಪಟ್ಟಣಗಳಿಂದ ಭಾವಿಕರು ಬಂದಿದ್ದರು. ನೋಟಕ ಜನರಿಗೆ ಚವರಿ ಬೀಸಿತು.

ಈ ಊರ ಮ್ಯುನಿಸಿಪಾಲಿಟಿಯು ಆ ಸಾವಣೆ ಮುಷ್ಠಿ ಆದಿದ್ರಾವಿಡರು (ಅಸ್ಪೃಶ್ಯರು) ಇವ್ರು ವ ತಿರುಪ್ಪದಿ ಒಬ್ಬ ಉಮೇದವಾರನನ್ನು ನಿಲ್ಲಿಸತಕ್ಕವರಿದ್ದಾರೆ.

ಹುಬ್ಬಳ್ಳಿಯಿಂದ ಕಾರವಾರಕ್ಕೂ ಕಾರವಾರದಿಂದ ಮಂಗಳೂರಿಗೂ ರೇಲ್ವೆ ಸಾಗಬೇಕೆಂದು ವಿ. ಕಂಬಳಿಯವರು ಮುಂಬಯಿ ಕೌನ್ಸಿಲದಲ್ಲಿ ಠರಾವು ತರತಕ್ಕವರಿದ್ದಾರೆ.

-ಕುರುಬರ ಕುಲಕರ್ಣಿಕೆ ಟ್ರೇನಿಂಗ ಕ್ಲಾಸ.

—೦—

ನಾವು ಧಾರವಾಡದಿಂದ ದಿನಾಲು ಮುಂಜಾನೆ [illegible] ಗಂಟೆಯಿಂದ ಮೋಟಾರ ಬಿಟ್ಟು ಗದಗ, [illegible] [illegible] ಬಿಜಾಪುರಕ್ಕೆ [illegible] ಗಂಟೆಗೆ ಮುಟ್ಟಿಸುವೆವು [illegible] [illegible] ಧಾರವಾಡಕ್ಕೆ ತರುವೆವು [illegible] ಸಾಮಾನು [illegible] ಮೋಟಾರ ಬಿಡುವೆವು. ಧಾರವಾಡದಲ್ಲಿ [illegible] ಧರ್ಮ [illegible] ನಮ್ಮ [illegible] ಮೋಟಾರ ಬಿಡುವೆವು.

[illegible] ಏಜಂಟರು ಮಿ. [illegible] ಮತ್ತು ಮಿ. [illegible] ಇವರಲ್ಲಿ ಟಿಕೇಟುಗಳು ಮಾರಲಿಕ್ಕೆ ದೊರೆಯುವವು.

ಎಮ್. ಕೆ. ಸವದಾಗರ
ಧಾರವಾಡ

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯು [illegible] ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೋಡಿಗೆಯು [illegible] ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಮಾಡಲ್ಪಡುವದು. [illegible] ಮತ್ತು ಬೇರೆ ತರದ ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. [illegible]
ವ್ಯವಸ್ಥಾಪಕ ಡಾಯರೆಕ್ಟರ.

ಪುಣೆಯಲ್ಲಿ, ಮುಂಬಯಿ ಇಲಾಖೆಯೊಳಗಿನ ನೇಕಾರ ಸಹಕಾರೀ ಸಂಘಗಳಲ್ಲಿ ತಯಾರಾಗುವ ಮಾಲಿನ ಜಂಗೀ ಪ್ರದರ್ಶನವು.

ಮುಂಬಯಿ ಇಲಾಖೆಯ ಸಹಕಾರಿ ಖಾತೆಯ ಪ್ರಯತ್ನದಿಂದಾಗಿ ತಾ. ೧೪-೨-೩೬ ಇಸ್ವಿ ದಿವಸ ಪುಣೆಯ "ಸೇವಾಸದನ"ದಲ್ಲಿ ಇಲಾಖೆಯೊಳಗಿನ ಎಲ್ಲ ನೇಕಾರ ಸಂಘಗಳಲ್ಲಿ ಕೈಮಗ್ಗದ ಮೇಲೆ ತಯಾರಾಗುತ್ತಿರುವ ಮಾಲಿನದೊಂದು ಪ್ರದರ್ಶನವು ಪ್ರಾರಂಭಿಸಲ್ಪಟ್ಟಿತು. ಈ ಪ್ರದರ್ಶನಕ್ಕಾಗಿ ಧಾರವಾಡ, ಬೆಳಗಾವ, ವಿಜಾಪೂರ, ಸೊಲ್ಲಾಪೂರ, ನಗರ, ಖಾನದೇಶ ಮುಂತಾದ ಜಿಲ್ಲೆಗಳೊಳಗಿನ ನೇಕಾರರ ಸಂಘಗಳಿಂದ ಮಾಲು ಬಂದಿದ್ದವು. ಕರ್ನಾಟಕದೊಳಗಿನ ೧೧ ಸಹಕಾರಿ ಸಂಘಗಳಿಂದ ಅತ್ಯುತ್ತಮವಾದ ಸೀರೆ, ಖಣ, ಧೋತ್ರ, ಅಂಗೀ ಅರಿವೆ, ಮುಂತಾದ ಮಾಲು ಪ್ರದರ್ಶನಕ್ಕಾಗಿ ತಯಾರಿಸಿ ಬಂದಿರುವದು.

ಮೊದಲಿಗೇ ಸರಕಾರದ ತೆಗೆದ ಹಣ ತಾ. ೧೫-೨-೩೬ನೇ ದಿವಸವೇ ಎಲ್ಲ ಸಂಘಗಳ ಪ್ರತಿನಿಧಿಗಳು, ಮಧ್ಯಭಾಗ, ದಕ್ಷಿಣಭಾಗದ ಅಸಿಸ್ಟಂಟ್ ರಜಿಸ್ಟ್ರಾರ ಸಾಹೇಬರೂ, ಇಲಾಖಾ ರಜಿಸ್ಟ್ರಾರ ಸಾಹೇಬರೂ ಇತರ ಅಧಿಕಾರಿಗಳೂ ಹಾಜರಾಗಿ ಎಲ್ಲ ವ್ಯವಸ್ಥೆಯನ್ನು ದಕ್ಷತೆಯಿಂದ ನೋಡುತ್ತಿದ್ದರು.

ಈ ಪ್ರದರ್ಶನಕ್ಕಾಗಿ ಪುಣೆಯ ಸೇವಾಸದನದ ವಿಶಾಲವಾದ ಮುಂಭಾಗದಲ್ಲಿ ಮಂಟಪವನ್ನು ಹಾಕಿ ಅದರಲ್ಲಿ ಚಿಕ್ಕ ಚಿಕ್ಕ ಅಂಗಡಿಗಳನ್ನು ನಾಲ್ಕು ಸಾಲಾಗಿ ರಚಿಸಿದ್ದರು. ಈ ಅಂಗಡಿಗಳಲ್ಲಿ ಪ್ರತಿಯೊಂದು ಸಂಘದವರೇ ತಮ್ಮ ಮಾಲು ಪ್ರೇಕ್ಷಕರ ಚಿತ್ತಾಕರ್ಷಣವಾಗುವಂತೆ ವ್ಯವಸ್ಥಿತವಾಗಿ ಮಂಡಿಸಿದ್ದರು.

ತಾ. ೧೪ನೇ ದಿವಸ ಸಂಜೆಯ ೪ ಘಂಟೆಗೆ ಸರಿಯಾಗಿ "ಸೇವಾಸದನ"ದ ಭವ್ಯ ಪಟಾಂಗಣದಲ್ಲಿ ಸಭೆಯು ಕರೆಯಲ್ಪಟ್ಟಿತು. ಸಭೆಗಾಗಿ ಬಂದ ಜನರಲ್ಲಿ ಅರ್ಧ ಭಾಗಕ್ಕಿಂತ ಹೆಚ್ಚಾಗಿ ಸ್ತ್ರೀ ಸಮುದಾಯವೇ ಕಂಡುಬರುತ್ತಿತ್ತು! "ಜಾರ್ಜೆಟ್" ಜನರ ಹುಚ್ಚುತನದ "ಸ್ವದೇಶಿ" "ಖಾದಿ" ಮುಂತಾದ ಪ್ರಕಾರದ ಅಷ್ಟು ಹಾಟೀಯು ಯಾವ ಜನರೂ ತೋರುತ್ತಿಲ್ಲ !!

ಸಭೆಯ ಪ್ರಾರಂಭಕ್ಕೆ ಇಲಾಖಾ ರಜಿಸ್ಟ್ರಾರ ಮಿ. ಮದನ ಸಾಹೇಬರು ಅತಿಥಿಗಳ ಸ್ವಾಗತ ಮಾಡಿ ಅಲ್ಲದೆ ನೇಕಾರ ಜನರ ಹೀನ ಸ್ಥಿತಿಯನ್ನು ತಮ್ಮ ಅಮೋಘ ವಕ್ತೃತ್ವ ಶೈಲಿಯಿಂದ ವಿಶದವಾಗಿ ಬಣ್ಣಿಸಿದರು. ಪರದೇಶಿ ವಿಲಾಯತಿ ಸ್ವದೇಶಿ ಗಿರಣಿಗಳ ಸ್ಪರ್ಧೆಯಲ್ಲಿಯೂ ಕೂಡ ಈ ಉದ್ಯೋಗವೆಂದೇ ಆಗಲಿ; ಇನ್ನು ನೇಕಾರರ ಧಂದೆಯು ಜೀವದಿಂದ ಉಳಿದದ್ದು ಕೇವಲ ನೇಕಾರರ ಆನುವಂಶಿಕ ಅಭಿಮಾನವೇ ಕಾರಣವೆಂದು ಅವರನ್ನು ಸ್ತುತಿಸಿದ್ದಲ್ಲದೆ, ಇನ್ನು ಮುಂದೆ ಈ ಉದ್ಯೋಗವು ಊರ್ಜಿತ ಸ್ಥಿತಿ ಹೊಂದಬೇಕಾದರೆ ಸಹಕಾರಿ ಸಂಘಗಳ ವಿಸ್ತಾರವಾಗಬೇಕು ಮತ್ತು ನೇಕಾರರು ಸ್ವತಃ ನೂಲು ನೂಲಲು ಕಲಿಯಬೇಕು ಎಂದು ಕಳಕಳಿಯಿಂದ ಹೇಳಿ ಇಂದಿನ ಸಭೆಗೆ ರಾಜಶ್ರೀ ದೇವಧರರು ಅಧ್ಯಕ್ಷರಾಗಬೇಕೆಂದು ಸೂಚಿಸಿದರು. ಇದನ್ನು ಶ್ರೀಯುತ ಬ್ಯಾಂಕಿನ ಖಾನಾ ಚಟೆ ಎಂಬುವರು ಅನುಮೋದಿಸಲು, ಶ್ರೀ. ದೇವಧರ ಸಾಹೇಬರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು.

ಶ್ರೀ. ದೇವಧರ ಸಾಹೇಬರು ತಮ್ಮ ಭಾಷಣದಲ್ಲಿ ಸಹಕಾರೀ ಸಂಘಗಳಿಂದಾಗತಕ್ಕ ಲಾಭಗಳನ್ನು ವಿಶದವಾಗಿ ವಿವೇಚಿಸಿ ಸಂಘದ ಮಂಡಳದ ನಡವಳಿಕೆಯ ಬಗ್ಗೆ ಉಪಯುಕ್ತವಾದ ಕೆಲವು ಸೂಚನೆಗಳನ್ನು ಮಾಡಿದರು. ನೇಕಾರ ಉದ್ಯೋಗವು ಜೀವದಿಂದುಳಿಯಬೇಕಾದರೆ ನಾವೆಲ್ಲರೂ ಕೈಮಗ್ಗದ ಮೇಲೆ ನೆಯ್ದ ಅರಿವೆಗಳನ್ನೇ ಉಪಯೋಗಿಸಬೇಕೆಂದು ಅತ್ಯಂತ ಕಳಕಳಿಯಿಂದ ಆವೇಶಪೂರ್ವಕವಾಗಿ ಮಾತಾಡಿದರು! ಆ ಮೇಲೆ ಶಿಷ್ಟಾಚಾರದಂತೆ ಪ್ರದರ್ಶನ ತೆರೆದು ಬಂದು, ಅದರಲ್ಲಿ ಮಂಡಿಸಿದ ಸೀರೆ ಬಹು ಸುಂದರವಾಗಿಯೂ ಹೆಚ್ಚಿನ ನೂಲಿಗಿಂತ ಸುಬಕ ಚಿತ್ರವಿಚಿತ್ರವಾಗಿಯೂ ಇರುವದನ್ನು ಹೇಳಿ ಎಲ್ಲ ನಾಗರಿಕರು ಪ್ರದರ್ಶನದೊಳಗಿನ ಮಾಲು ಕೊಂಡು ಸಹಾಯ ಮಾಡಬೇಕೆಂದು ಸೂಚಿಸಿದರು. ನಂತರ ಶ್ರೀಯುತ ಅರಟೆಯವರು ಅಧ್ಯಕ್ಷರ ಹಾಗೂ ಸಭಿಕರ ಆಭಾರ ಮನ್ನಿಸಲು ಪೂರ್ವಾಲೆ ಗಂಧದ ಹಾರ ಮಾಲೆಗಳನ್ನು ಸಮರ್ಪಿಸಿ ಸಭೆ ವಿಸರ್ಜನವಾಯಿತು.

ನಂತರ ಸಭಿಕರೆಂದರೆ ಸ್ತ್ರೀಪುರುಷ ಸಮುದಾಯವು ಪ್ರದರ್ಶನದಲ್ಲಿ ಮಂಡಿಸಿದ ವಸ್ತುಗಳನ್ನು ಅವಲೋಕಿಸಿ ತಮಗೆ ಇಷ್ಟವಿದ್ದ ವಸ್ತುಗಳನ್ನು ಕೊಳ್ಳುತ್ತಿತ್ತು. ಈ ಪ್ರಕಾರ ರಾತ್ರಿ ೮ ಘಂಟೆಯ ವರೆಗೆ ಕೆಲಸ ಸಾಗಿ ಆ ದಿವಸದ ಕಾರ್ಯವು ಮುಗಿಸಲ್ಪಟ್ಟಿತು. ಪ್ರದರ್ಶನವು ಈ ತಿಂಗಳ ೨೧ನೇ ತಾರೀಖಿನ ವರೆಗೆ ಸಾಗತಕ್ಕದ್ದಿದ್ದು ದಿನಾಲು ಮುಂಜಾವು ಸಂಜೆಗೆ ಅಂಗಡಿಗಳನ್ನು ತಟ್ಟಿ ಮಾಲು ಮಾರಾಟ ನಡೆಸಲ್ಪಡುವದು.

ಒಟ್ಟಿನ ಮೇಲೆ ಪ್ರದರ್ಶನವು ಚಿಕ್ಕದಾಗಿದ್ದರೂ ಆಕರ್ಷಕವಾಗಿಯೂ ಸೊಗಸಾಗಿಯೂ ಇರುವದು ಆದರಲ್ಲಿ ಕರ್ನಾಟಕದೊಳಗಿನ ಸುಂದರವಾದ ನಯಕಟ್ಟಾದ ಧಡೂತಿ ಮಾಲು ಇಲ್ಲಿಯ ನಾಗರಿಕರ ಆದರಕ್ಕೆ ಪಾತ್ರವಾದಂತೆ ತೋರುತ್ತದೆ.

ಇಷ್ಟೆಲ್ಲ ಆಡಂಬರ ಬೆಳೆದಿದ್ದರೂ ಮೂಲ ಉದ್ದೇಶ ನೇಕಾರರ ಉದ್ಯೋಗಾಭಿವೃದ್ಧಿಯಾಗಿ ಅವರ ಹೊಟ್ಟೆ ತುಂಬುವಂತಹ ವಿಚಾರಗಳು ಬಂದೂ ಇಲ್ಲ! ಆದ್ದರಿಂದ ತುಂಬಾ ವಿಷಾದಿಸಬೇಕಾಗಿದೆ. ಅಧ್ಯಕ್ಷರ ಮಾತಿನಲ್ಲಿ ಹಲವು ಬಗೆಯ ತುಷ್ಟಿ, ಕಳಕಳಿಯು ಕೇಳಬಂದರೂ ಪ್ರತ್ಯಕ್ಷ ಕೃತಿಯ ಹೆಸರಿನಿಂದ ಬಂದೀಗಾಯಿತು ಶೂನ್ಯ ಹಾಗೆ ನಿಂತಿತ! ದೇವಧರ ಸಾಹೇಬರೂ ಮ|| ರಜಿಸ್ಟ್ರಾರ ಸಾಹೇಬರೂ ತಮ್ಮ ಮನೆಗಳಲ್ಲಿ ಪ್ರತಿಯೊಬ್ಬರು ಕೈಮಗ್ಗದ (ಗಿರಣಿಯದಲ್ಲ) ಬಟ್ಟೆಗಳನ್ನೇ ಉಪಯೋಗಿಸಬೇಕೆಂದು ಆಗ್ರಹದಿಂದ ಉಪದೇಶಿಸಿದ್ದರೆ ಸ್ವತಃ ನಾವೇ ಮೊದಲ್ಗೊಂಡು ಅವರ ಹೆಣ್ಣುಮಕ್ಕಳವರೆಗೆ ಎಲ್ಲರೂ ಅಂತರಾಷ್ಟ್ರ ವಿದೇಶೀ ವಸ್ತ್ರಗಳನ್ನು ಧರಿಸುವವರು. ಅಂಥವರ ಮಾತಿನ ಪರಿಣಾಮ ಸಮಾಜದ ಮೇಲೆ ಎಷ್ಟರಮಟ್ಟಿಗಾಗುವದೆಂಬುದನ್ನು ಬೇರೆ ಹೇಳುವ ಕಾರಣ ಕಾಣುವದಿಲ್ಲ. ಮಹಾತ್ಮಾ ಗಾಂಧಿಯವರಂಥವರ ಅಮಿತ ಶುದ್ಧ ತ್ಯಾಗ ಜೀವನದ ಪ್ರಭಾವದಿಂದಲೂ ಸಾಧ್ಯವಾಗದ ಮತ್ತು ಕಷ್ಟಸಾಧ್ಯವಾಗದ ಮಹತ್ವದ ಕಾರ್ಯವು ಇಂಥ ಹಾಸ್ಯಾಸ್ಪದ ಮಾತುಗಳಿಂದ ಎಂದೂ ಸಾಧ್ಯವಾಗಲಾರದು! ಆದ್ದರಿಂದ ದೇವಧರ ಸಾಹೇಬರಂಥ ರಾಜಭಕ್ತ ಮುಂದಾಳುಗಳು ತಮ್ಮ ಅಭ್ಯುದಯದ (ಖಾದಿ) ಮನಸ್ಥಿತಿ ಸರಕಾರಿ ನೌಕರ ಸಮಾಜದಲ್ಲಿಯೂ ಕೈಮಗ್ಗದ ಬಟ್ಟೆಗಳನ್ನೇ ಉಪಯೋಗಿಸಬೇಕೆಂಬ ಒಂದು ಸಕ್ತಿಯ ಹುಕುಮು ಮಾಡಿಸಿದರೆ ಸಾಕು; ಇದರಿಂದ ನಮ್ಮ ನೇಕಾರರ ಅರ್ಧ ಅಧಿಕ ಹಾನಿ ಕ್ರಿಯೆ ದೂರಾಗುವದೆಂದು ಎದೆತಟ್ಟಿ ಹೇಳಬಹುದು! ಇಂಥ ಸತ್ಕೃತ್ಯವನ್ನು ಮಾಡುವ ಸುಬುದ್ಧಿಯು ನಮ್ಮ ದೇವಧರ ಸಾಹೇಬರಂಥ ರಾಜಶ್ರೀಗಳಿಗೆ ದೇವರು ಬೇಗನೆ ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ.

ಪುಣೆ } ತಮ್ಮ ವಿಧೇಯ
ತಾ|| ೧೬-೨-೧೯೩೬ } ಕನ್ನಡಿಗ

ಸೇನಾಧಿಪತಿಯ ಹೆಂಡತಿಯ ಕೊಲೆ.

ಬಡೋಣಿಯಲ್ಲಿ ಇಂಗ್ಲಿಷ ಸೈನ್ಯದ ಜನರಲ್ ಆದ ಹಸ್ಕೇಥ ಸಾಹೇಬರ ಹೆಂಡತಿಯು ಪ್ರಾತಃಕಾಲದಲ್ಲಿ ಹವೆ ತಕ್ಕೊಳ್ಳಲಿಕ್ಕೆ ಹೋದಾಗ ಯಾರೋ ಇವಳನ್ನು ಬಾವಿಯಲ್ಲಿ ಹಾಕಿ ಕೊಂದಿದ್ದಾರೆ. ಇವಳ ಮೈಮೇಲಿನ ಕೆಲವು ಒಡವೆಗಳು ಇದ್ದದ್ದರಿಂದ ದುರಾತ್ಮರು ಇವನ್ನು ಅಪಹರಿಸುವದಕ್ಕಾಗಿ ಈ ನೀಚ ಕೃತ್ಯ ಮಾಡಿದ್ದಾರೆಂದು ಸಂಶಯ ಬಂದಿದೆ.

ಒಂದೇ ದಿವಸದ ಸಭೆ-

ವರ್ಹಾಡಕ್ಕೆ ಸೇರಿದ ಅಕೋಲೆಯಲ್ಲಿ ಬ್ಯಾರಿಸ್ಟರ ಜಯಕರರ ಅಧ್ಯಕ್ಷತೆಯಲ್ಲಿ ಪ್ರತಿಯೋಗಿ ಸಹಕಾರಿಗಳ ಪರಿಷತ್ತು ಜರುಗಿತು. ವರ್ಹಾಡ, ನಾಗಪೂರ ಮತ್ತು ಮಹಾರಾಷ್ಟ್ರದ ಹೊರಗಿನವರಾರೂ ಸಭೆಗೆ ಬರಲಿಲ್ಲ. ಚುನಾವಣೆಯಲ್ಲಿ ತಮ್ಮ ಪಕ್ಷದ ಉಮೇದವಾರರನ್ನು ನೇಮಿಸಬೇಕೆಂಬ ಠರಾವು ಮಾಡಿದರು.

ಪ್ರತಿಯೋಗಿಗಳ ಸಂದೇಶ—

ಪ್ರತಿಯೋಗಿ ಸಹಕಾರದ ಪಕ್ಷವು ಗತಿಸಿದ ೨೦ನೆಯ ತಾರೀಖಿನಲ್ಲಿ ಸ್ಥಾಪಿತವಾದಂಥ ಡೆಮೋಕ್ರೆಟಿಕ ಪಕ್ಷದೊಳಗೆ ಸೇರಿದೆ. ಇದರಲ್ಲಿ ಕಾಂಗ್ರೆಸದ ಮೆಂಬರರಾದಂಥವರು ಸೇರಬಾರದು. ಅಂತೇ ಬ್ಯಾರಿಸ್ಟರ ಜಿನ್ನಾ ಸಾಹೇಬರನ್ನು ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಡೆಮೋಕ್ರೆಟಿಕ ಪಕ್ಷದ ಧ್ಯೇಯದಲ್ಲಿ ಹೊಸ ಪರಿಸ್ಥಿತಿಗೆ ಅನುಸರಿಸುವಾಗಿ ಒಂದು ಹೊಸ ಸಂದೇಶವನ್ನು ಮಾರ್ಚ ತಿಂಗಳ ೫ ನೆಯ ತಾರೀಖಿನ ಒಳಗೆ ಪ್ರಸಿದ್ಧ ಮಾಡುವಂತೆ ಮೆಸರ್ಸ ಅಣೆ, ಕೇಳಕರ, ಬಿಡೆ, ಡಾಕ್ಟರ ಮುಂಜೆ, ಬ್ಯಾರಿಸ್ಟರ ಬ್ಯಾಪ್ಟಿಸ್ಟಾ ಮತ್ತು ಶ್ರೀ. ಎಸ. ವ್ಹಿ. ಕೇಳಕರ ಇವರುಗಳ ಕಮಿಟಿ ನೇಮಿಸಲ್ಪಟ್ಟಿಂತೆ ಅಕೋಲೆಯ ಸಭೆಯಲ್ಲಿ ಠರಾವಾಗಿರುತ್ತದೆ.

ಮಿ. ಜಾಧವರಾವಯವರ ಉಮೇದವಾರಿಯು-

ಮಿಸ್ಟರ ಜಾಧವರಾವ ಸಾತಾರಾ ಜಿಲ್ಲೆಯಿಂದ ಆರಿಸಲ್ಪಟ್ಟಿದ್ದಾರೆ. ಈ ಸಾರೆ ಮುಂಬಯಿ ಕಾಯದೇಮಂಡಲದಲ್ಲಿ ಮರಾಠಾ ಮುಖಂಡರ ಸಂಘದಲ್ಲಿ ಉಮೇದವಾರರಾಗಿ ನಿಲ್ಲಬೇಕೆಂದಿದ್ದಾರೆ. ಆ ಜಿಲ್ಲೆಯವರನ್ನು ಆರಿಸದೆ, ತಮ್ಮನ್ನೇ ಆರಿಸಬೇಕೆಂದು ಬಯಸಿ ಪ್ರತಿಯೋಗಿ ಪಕ್ಷವು-ಮತದಾರರಿಗೆ ಸೂಚನೆ ಮಾಡಿರುತ್ತದೆ.

ಕಠಿನ ಶಿಕ್ಷೆ-

ತ್ರಾವಣಕೋರ ಸಂಸ್ಥಾನದಲ್ಲಿ ಪ್ರಕಟವಾಗುವ ಜನ್ಮಭೂಮಿ ಎಂಬ ಮಲಿಯಾಳಿ ವರ್ತಮಾನಪತ್ರದಲ್ಲಿ ಕ್ರಿಶ್ಚನರ ವಿರುದ್ಧ ಲೇಖ ಬರೆದ ಬಗ್ಗೆ, ಅದರ ಸಂಪಾದಕರಿಗೆ ಒಂದು ವರ್ಷದ ಕಠಿಣ ಮಜೂರಿ ಶಿಕ್ಷೆ ಮತ್ತು ೫೦೦ ರೂಪಾಯಿ ದಂಡ ಮಾಡಿದರು. ಕೋರ್ಟಿನ ಪೋಲೀಸರು ಸಂಪಾದಕರಿಗೆ ಕೈ ಬೇಡಿ ಹಾಕಿ, ರಟ್ಟೆಗೆ ಹಗ್ಗ ಕಟ್ಟಿ ಕರೆದೊಯ್ದರು. ಸಂಪಾದಕರು ಮುಂಚೆಗೆ ಕ್ಷಮೆ ಬೇಡಿಕೊಂಡಿದ್ದರು. ಆದರೂ ಕಠಿನ ಶಿಕ್ಷೆ ವಿಧಿಸಿದರು. ಹೈಕೋರ್ಟಿಗೆ ಅಪೀಲು ಮಾಡಲು ಬಿಟ್ಟರು ಅವರನ್ನು ಮುಚ್ಚಳಿಕೆಯ ಮೇಲೆ ಬಿಡಲಿಲ್ಲ. ಇದೇ ಪ್ರಕಾರ ಒಬ್ಬ ಕ್ರಿಶ್ಚನ್ನ ಪತ್ರಕಾರರ ಮೇಲೆ ಖಟ್ಲೆ ಮಾಡಲ್ಪಟ್ಟಿದೆ.

ಸರಕಾರದ ಬಿಲ್ಲು ಸೋಲಿತು-

ಬ್ರಹ್ಮೀ ಸರಕಾರಕ್ಕೆ ಅಪ್ರಿಯರಾದಂಥ ಜನರನ್ನು ಹದ್ದುಪಾರ ಮಾಡುವ ಕಾಯದೆಯು ಬ್ರಹ್ಮದೇಶದ ಕಾಯದೆ ಕೌನ್ಸಿಲದಲ್ಲಿ ಪಾಸಾಗಿ ಮಂಜೂರಿಗಾಗಿ ಅಸೆಂಬ್ಲಿಗೆ ಬಂತು. [illegible]ರು ಈ ಕಾಯದೆಗೆ ಮಂಜೂರಿ ಕೊಡಬಾರದು; ಅಥವಾ ಇದನ್ನು ರದ್ದು ಮಾಡಬೇಕೆಂಬ ಠರಾವನ್ನು ಸ್ವಾಮಿ ಅಯ್ಯಂಗಾರರು ತಂದರು. ೬೯ ಅನುಕೂಲ ಮತ್ತು ೫೩ ಪ್ರತಿಕೂಲ ಮತಗಳು ಬಿದ್ದು ಠರಾವು ಪಾಸಾಯಿತು. ಸರಕಾರಿ ಕಾಮದಾರರಾಗದಂಥ ಯುರೋಪಿಯನ್ನ ಮೆಂಬರರು ಸಹ ಈ ಠರಾವಿಗೆ ಅನುಕೂಲವಾಗಿ ಮತ ಕೊಟ್ಟರೆಂಬುದು ವಿಶೇಷವಾಗಿ ಹೇಳುವಂಥ ಸಂಗತಿಯು.

ಮೆರವಣಿಗೆಯಲ್ಲಿ ದಂಗೆ-

ದಿಲ್ಲಿಯ ಹತ್ತರ ರೇವಾರಿ ಎಂಬಲ್ಲಿ ಹಿಂದೂ ಜನರ ಮದುವೆಯ ಮೆರವಣಿಗೆಯು ಹೋಗುತ್ತಿದ್ದಾಗ ಮುಸಲಮಾನರು ದಂಗೆ ಮಾಡಿ, ಅನೇಕರನ್ನು ಗಾಯ ಪಡಿಸಿದರು. ಅನಂತರ ಅಂಗಡಿಗಳಲ್ಲಿ ಲೂಟಿ ಮಾಡಿ ಅವಕ್ಕೆ ಬೆಂಕಿ ಹಚ್ಚಿದರು. ಮುಸಲಮಾನರ ಈ ದುಷ್ಕೃತ್ಯಕ್ಕಾಗಿ ಹಿಂದೂ ಜನರು ಹರತಾಳ ಮಾಡಿ, ಉದ್ದಿಮೆ ವ್ಯವಹಾರವನ್ನು ನಿಲ್ಲಿಸಿದ್ದಾರೆಂದು ತಾರೀಖಿನ ವರ್ತಮಾನ ಪ್ರಸಿದ್ಧವಾಗಿರುತ್ತದೆ.

ಆಕಾಶಯಾನದ ಅವಶ್ಯಕತೆ-

ಹಿಂದುಸ್ಥಾನ ಸರಕಾರದವರು ಹಿಂದುಸ್ಥಾನದ ಹೆಸರಿನಿಂದ ಹಡಗಪಡೆಯನ್ನು ಕಟ್ಟುವ ವಿಚಾರವು ಹಿಂದುಸ್ಥಾನದ ಯೋಗ್ಯತೆಗೆ ಮೀರಿದ್ದು, ಅದು ಶ್ರೀಮಂತ ದೇಶಗಳ ಕೆಲಸವು. ವಿಲಾಯತಿಯಲ್ಲಿ ಹಡಗಪಡೆಗಿಂತ ಆಕಾಶಯಾನಗಳ ಮಹತ್ವ ಹೆಚ್ಚಿದೆ. ಆದುದರಿಂದ ವಿಮಾನಗಳ ಶಿಕ್ಷಣವನ್ನು ಕೊಡತಕ್ಕದ್ದು ಅವಶ್ಯವಾದ ಕೆಲಸವಾಗಿರುತ್ತದೆಂದು ಸರ ಡೇವಿಡ ಸಸೂನರು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ. ಸರದೇಸಾಯರ ಠರಾವು-

ವಿಜಾಪೂರದ ಶ್ರೀ. ಸರದೇಸಾಯಿಯವರು ಮುಂಬಯಿ ಕೌನ್ಸಿಲದಲ್ಲಿ ಅನೇಕ ಠರಾವುಗಳನ್ನು ತರುವರು. ಅವುಗಳಲ್ಲಿ

೧ ಧಾರವಾಡದಲ್ಲಿ ಕರ್ನಾಟಕ ಯುನಿವರ್ಸಿಟಿ ಸ್ಥಾಪಿಸಬೇಕು.

೨ ಸ್ತ್ರೀಯರಿಗೆ ಕೌನ್ಸಿಲ ಚುನಾವಣೆಯಲ್ಲಿ ಉಮೇದವಾರರಾಗಿ ನಿಲ್ಲಲು ಅಧಿಕಾರವಿರಬೇಕು.

೩ ಕೌನ್ಸಿಲ ಮೆಂಬರರಿಗೆ ಶಸ್ತ್ರದ ಕಟ್ಟಳೆಯ ನಿರ್ಬಂಧವಿಲ್ಲದೆ, ಅವರಿಗೆ ಶಕ್ತಿ ಬಂದೂಕುಗಳನ್ನಿಡುವ ಸ್ವಾತಂತ್ರ್ಯವಿರಬೇಕು.

ಎಂಬವು ಮುಖ್ಯವಾದ್ದವೆ. ಕಾರವಾರದ ಶ್ರೀ. ಕರ್ಕಿಯವರು ಕಮಿಶನರರ ಹುದ್ದೆಗಳನ್ನು ತೆಗೆದು ಹಾಕುವ ಠರಾವು ತರುವರು.

ಸರ ಕೆ. ವ್ಹಿ. ರೆಡ್ಡಿಯವರು ಇಂಡಿಯಾ ಕೌನ್ಸಿಲದ ಮೆಂಬರರಾಗುವರು; ಸರ [illegible] ಸಿಲ್ಲಿಯವರು ಒಕ್ಕಲತನದ ರಾಯಲ ಕಮೀಶನದ ಮೆಂಬರರಾಗುವರು. ಮತ್ತು ವಿಜಯರಾಘವಾಚಾರ್ಯರು ಉದ್ಯೋಗ ಖಾತೆಯ ಡಾಯರೆಕ್ಟರರಾಗುವರೆಂದು ಮದ್ರಾಸಿನಲ್ಲಿ ವರ್ತಮಾನವುಂಟು.

ಮುಂಬಯಿ ಯುನಿವರ್ಸಿಟಿಯ ಚುನಾವಣೆಯಲ್ಲಿ ಡಾಕ್ಟರ ಪರಾಂಜಪೆಯವರಿಗೆ ೧೨೫೪ ಮತ್ತು ಡಾಕ್ಟರ ದೇಶಮುಖರಿಗೆ ೧೦೬೮ ಮತಗಳು ಬಿದ್ದು ಡಾಕ್ಟರ ಪರಾಂಜಪೆಯವರು ಆರಿಸಲ್ಪಟ್ಟರು. ಸ್ವರಾಜ್ಯ ಪಕ್ಷದ ಅಪಜಯಕ್ಕೆ ಪ್ರತಿಯೋಗಿ ಸಹಕಾರಿಗಳೇ ಕಾರಣರಾದರು.

ಜಾಹೀರ ನೋಟೀಸು

—೦—

ಈ ವರ್ಷ ಯಮನೂರ ಜಾತ್ರೆಯಲ್ಲಿ ನವಲಗುಂದ ತಾಲೂಕಿನ ಶೇತಕಿ ಉತ್ಪನ್ನ ಮತ್ತು ದನಗಳ ಮತ್ತು ಒಕ್ಕಲತನದ ಸಾಹಿತ್ಯದ ಪ್ರದರ್ಶನವು ಬರುವ ಮಾರ್ಚ ತಿಂಗಳಲ್ಲಿ ತಾರೀಖು ೪-೫-೬ ಈ ಮೂರು ದಿವಸ ಜರಗತಕ್ಕದ್ದಿದೆ. ಮತ್ತು ಸದರ ಜಾತ್ರೆಯಲ್ಲಿ ದನಗಳ ಮಾರಾಟವು ಜರಗತಕ್ಕದ್ದಿದೆ. ಮತ್ತು ಉತ್ತಮ ತರದ ಜಾನವರುಗಳಿಗೆ ಪ್ರದರ್ಶನ ಕಮಿಟಿಯಿಂದ ಯೋಗ್ಯವಾದ ಇನಾಮು ಸಹ ಕೊಡಲ್ಪಡುತ್ತದೆ. ದನಗಳ ಮಾರಾಟ ಮಾಡುವವರೂ ಪ್ರದರ್ಶನದಲ್ಲಿ ಇನಾಮು ಪಡಕೊಳ್ಳಲಿಕ್ಕೆ ಇಚ್ಛಿಸುವವರೂ ಈ ಸಂಧಿಯನ್ನು ಕಳಕೊಳ್ಳಬಾರದು. ಹವೆಯು ಉತ್ಕೃಷ್ಟವಿದ್ದು ನೀರಿನ ಪುಷ್ಕಳತೆಯು ಬೇಕಾದಷ್ಟು ಇರುತ್ತದೆ.

ನವಲಗುಂದ ತಾ. ೧೫-೨-೨೭

ರಾಮಭಂಡ ಜೋಶಿ	ಪರ್ವತಗವಡಾ ಪಾಟೀಲ
ನವಲಗುಂದ	ಕುಪ್ಪಗಡುಡ್ಡಿ
ವ್ಹಾಯಿಸ ಚೇರಮನ್	ಸ್ವಾಗತ ಕ. ಚೇರಮನ

ಟಿ. ಎಸ್. ಮೋಟಾರ ಸರ್ವಿಸ

ಹುಬ್ಬಳ್ಳಿ.

ಶಿವರಾತ್ರಿ ಸಮಯದಲ್ಲಿ ಗೋಕರ್ಣಕ್ಕೆ ಹೋಗುವ ಪ್ರಯಾಣಿಕರ

ಸೌಕರ್ಯಕ್ಕಾಗಿ

ತಾ|| ೧—೨—೨೭ ರಿಂದ ರೆಗ್ಯುಲರ ಸರ್ವಿಸ ಇಟ್ಟಿದೆ.

—: ಕಾಲಕ್ರಮಗಳು :—

೧. ಹುಬ್ಬಳ್ಳಿ ಬಿಡುವದು	ಗೋಕರ್ಣ ಸೇರುವದು
ಬೆಳಿಗ್ಗೆ ೭ ಘಂಟೆ.	ಸಾಯಂಕಾಲ ೫ ಘಂಟೆ
ಸಾಯಂಕಾಲ ೫ ಘಂಟೆ	ಬೆಳಿಗ್ಗೆ ೫ ಘಂಟೆ
೨. [illegible] ಬಿಡುವದು	ಗೋಕರ್ಣ ಸೇರುವದು
ಬೆಳಿಗ್ಗೆ ೭ ಘಂಟೆ	ಸಾಯಂಕಾಲ ೫ ಘಂಟೆ

[illegible] } ಎಸ್. ಮಂಜಪ್ಪಾ,
[illegible] } [illegible]

ಸಮಾಧಾನದಾಯಕ ಔಷಧವು.

ಅಯ್ಯೋ! [illegible] ಹೊಂದು ಏಕೆ ಕುಳಿತಿರುವಿ? ಕಲೆಸೊಪ್ಪೇ! [illegible] ಆಗದಾದದಾದೂ ಏನು!

[illegible] ಸೋರು ಸ್ವಿಟಿ.

[illegible] ಒಂದೇ ಕ್ಷಣದಲ್ಲಿ [illegible] ಮತ್ತು ಕೆಮ್ಮು [illegible]

[illegible] ಇದೆ.

[illegible] ಡಾಕ್ಟರರ [illegible] ಪ್ರಕಾರ ಔಷಧವನ್ನು ತಯಾರ [illegible] ಲಾಗುವದು.

[illegible]— [illegible] ಸ್ಟೋರ್ಸ. [illegible] ಕೆಮಿಸ್ಟ [illegible]

[illegible] ಹುಬ್ಬಳ್ಳಿ



ವ್ರಣಸಂಹಾರ

ಅಥವಾ

ಘಾಯದ ಮೇಲಿನ ಮಲಮು

ಈ ಮಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗುತ್ತದೆ. [illegible] ಮತ್ತು [illegible], ಗಜಕರ್ಣ [illegible], ಭಗಂದರ್ಪ [illegible] ಮೇಲೂ [illegible] ಸಂಗ್ರಹಿಸಬೇಕೆಂದು [illegible] ಒಂದು [illegible] ಆಣೆ. [illegible] ಅಂಚೆಯವೆಚ್ಚ ಬೇರೆ

[illegible] } ಎಸ. ಎಸ. [illegible]

ನೋಟೀಸು.

ಪ್ರತಿವಾರ ವೆಂಕಾ ತಂದೆ [illegible] ದಂಡಗಿದಾಸರ ಸಾ. ಆಲಗುಂದಿ ತಾ. ಕುಷ್ಟಗಿ ಜಿಲ್ಹಾ ರಾಯಚೂರ ಇಲಾಖಾ ನಿಜಾಮ ಇವನಿಗೆ

ಕೆಳಗೆ ಹೆಬ್ಬೆಟ್ಟಿನ ಗುರತು ಮಾಡುವವಳ ಕಡೆಯಿಂದಾ ನೋಟೀಸು ಕೊಡುವದೇನಂದರೆ ಬರತದಲ್ಲ

ನೀನು ನನ್ನ ಲಗ್ನದ ಗಂಡಾ[illegible] ಇರತೀದಿ ನಾನು [illegible] ನನ್ನ [illegible] ಪ್ರಸಂಗ [illegible] [illegible] ಆಕೆಯು [illegible] ನನ್ನ [illegible] ನನ್ನ [illegible] [illegible] ಯಾವ [illegible] [illegible] ನನ್ನನ್ನು [illegible] ನಾನು [illegible] ನನ್ನ [illegible] ನಾನು [illegible] ನಿನಗೆ [illegible] ಗರ್ಭಿಣಿ [illegible] ನನ್ನ [illegible] ನನ್ನ [illegible] ಸಂರಕ್ಷಣೆ ಮಾಡಲಾರದೆ [illegible] ಗರ್ಭಿಣಿ [illegible] ಹೊಟ್ಟೆ [illegible] ನನ್ನ ಹೊಟ್ಟೆ ಉಪಜೀವನದ ಬಗ್ಗೆ [illegible] ರೂಪಾಯಿ (೧೦೦) [illegible] ಮತ್ತು [illegible] ಕೊಟ್ಟು ನನ್ನ [illegible] ನನ್ನ [illegible] ನೀನು ನನ್ನ [illegible] ಮತ್ತು ನನ್ನ [illegible] ಈ ನೋಟೀಸಿನಿಂದಾ ನಿನಗೆ [illegible] ಈ ನೋಟೀಸು ಮುಟ್ಟಿದ (೧೫) ದಿವಸದಲ್ಲಿ ನನ್ನ [illegible] ರೂಪಾಯಿ (೧೦೦) [illegible] ಕೊಟ್ಟು ನನ್ನ ಜೀವಕ್ಕೆ ಧಕ್ಕೆ ತಾಗದಂತೆ [illegible] ಕೊಟ್ಟು [illegible] ಇಲ್ಲದಿದ್ದರೆ ಇದೇ [illegible] ನಾನು ನನ್ನ ಹೊಟ್ಟೆ ಉಪಜೀವನದ ಬಗ್ಗೆ [illegible] ಬಗ್ಗೆ [illegible] ಮಾಡಿಕೊಳ್ಳುವ ಪ್ರಸಂಗ ಬರತದೆ. [illegible] ನನ್ನ [illegible] ನನ್ನ [illegible] ಗಂಡನ [illegible] ಯೋಸೂ [illegible] ಅಧಿಕಾರ [illegible] ಇನ್ನು ಮುಂದೆ [illegible] ನಿನಗೆ [illegible] ಇದ್ದ [illegible] ಇರುತ್ತದೆ [illegible] ತಾ. ೧೨ ಮಾಹೆ ಫೇಬ್ರುವರಿ ಸನ್ ೧೯೨೭ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರತು [illegible] ಕೋಮ ವೆಂಕಾ ದಂಡಗಿದಾಸರ ಸಾ|| ಹೆಬ್ಬಳ್ಳಿ ತಾ. ಬದಾಮಿ [illegible] ಇದೆ.

ಈ ಪತ್ರವನ್ನು [illegible] ಪ್ರಸಿದ್ಧ ಮಾ[illegible]

R. N. B 1443

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭ | ಧಾರವಾಡ ರವಿವಾರ ತಾರೀಖು ೨೧ ನೇ ಫೆಬ್ರುವರಿ [illegible] | (ಸಂಚಿಕೆ [illegible]

ಸರಕಾರದಿಂದ ಪೇಟೆಂಟ ದೊರಕಿದ

ಮಲ್ಹಾರ ಕಪ್ಪಲಿ.

ತೋಟಿಗರಿಗೆ ಅತಿಶಯ ಉಪಯೋಗವಾಗುತ್ತಿರುತ್ತದೆ.

[illegible]

ಎರಡು ಆಕಾರಗಳಲ್ಲಿರುವವು.

ನಂ ೧	[illegible] ಗ್ಯಾಲನ್.	ಬೆಲೆ [illegible] ರು.
ನಂ ೨	[illegible] ,,	,, [illegible] ರು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

ಧಾರವಾಡದಿಂದ ಗದಗ ಮಾರ್ಗವಾಗಿ [illegible] ಮೋಟಾರ ಸರ್ವೀಸ.

ನಮ್ಮ ಧಾರವಾಡದಿಂದ [illegible] ಮೋಟಾರ [illegible] ಗದಗ [illegible] ಧಾರವಾಡಕ್ಕೆ [illegible] ಧಾರವಾಡದಲ್ಲಿ [illegible]

[illegible]

ಎಮ್. ಕೆ. [illegible]
ಧಾರವಾಡ

[illegible]

[illegible]

[illegible]

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯು ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಪ್ರಸ್ಥಾಪಿತ ಸಂಸ್ಥೆ.

[illegible]

[illegible]

ವಿಜಯ.

ಧಾರವಾಡ ತಾ- ೨೧-೨-೨೬ ನೇ ಇಸ್ವಿ

ಕರ್ನಾಟಕದ ದುರ್ದೈವವು.

ಹಿಂದುಸ್ಥಾನದಲ್ಲಿರುವ ೫೭ ದೇಶಗಳಲ್ಲಿ ಕರ್ನಾಟಕದಷ್ಟು ದುರ್ಭಾಗ್ಯ ದೇಶವು ಇನ್ನೊಂದು ಇರಲಿಕ್ಕಿಲ್ಲ. ಈ ದೇಶವು ಐದು ಭಾಗವಾಗಿ ಹಂಚಿ ಹೋಗಿದೆ. ಇಬ್ಬರು ಸಂಸ್ಥಾನಿಕರು, ಒಬ್ಬ ರೆಸಿಡೆಂಟರು ಮತ್ತು ಇಬ್ಬರು ಗವರ್ನರರು ಆಳುತ್ತಿದ್ದಾರೆ. ಸಂಸ್ಥಾನಿಕರಲ್ಲೊಬ್ಬರು ಪರಭಾಷಿ ಮತ್ತು ಪರಮತೀಯರಾಗಿ ಅವರಿಗೆ ಕನ್ನಡ ಅಥವಾ ಬೇರೆ ದೇಶ ಭಾಷೆಗಳ ಪ್ರೇಮ [illegible] ಅಭಿಮಾನವಿರುವದಿಲ್ಲ. ಈ ರೀತಿಯಾಗಿ ಐದು ಭಾಗವಾಗಿ ಹೋಗಿ, ಆಯಾ ಭಾಗಗಳ ರಾಜ್ಯಕಾರಭಾರವು ಬೇರೆ ಬೇರೆಯಾಗಿರುವದರಿಂದ, ಕನ್ನಡಿಗರೆಂಬವರಿಗೆ ಪರಸ್ಪರ ಸಹಾಯ ಮತ್ತು ಸಹಾನುಭೂತಿಯ ಸಂಬಂಧವೆಷ್ಟೂ ಉಳಿದಿರುವದಿಲ್ಲ. ಈ ಸಂಬಂಧ ಮತ್ತು ಭಾಷಾಭಿಮಾನವು ಜಾಗ್ರತವಾಗಿ, ಕರ್ನಾಟಕದ ಏಳ್ಗೆಯಾಗಬೇಕಾದರೆ ಕರ್ನಾಟಕವೆಂಬುದು ಒಂದು ಮಂಡಲವಾಗಬೇಕೆಂದು ಪ್ರಜೆಗೆ ಮಾತ್ರವಲ್ಲ; ಬ್ರಿಟಿಶ ಸರಕಾರಕ್ಕೆ ಸಹ ಅನಿಸಿತು. ಮಾಂಟೆಗ್ಯು-ಚೆಲ್ಮ್ಸಫೋರ್ಡ ಸುಧಾರಣೆ ಬರುವ ಮುಂಚೆಯಾಗಿ ೧೯೧೭ ನೇ ಇಸವಿಯಲ್ಲಿ ಭಾಷೆಯ ಪ್ರಕಾರ ಪ್ರಾಂತ ರಚನೆಯಾಗಬೇಕೆಂಬ ತತ್ವವನ್ನು ಸರಕಾರದವರು ಒಪ್ಪಿದ್ದಾರೆ. ಇದರ ಸಂಬಂಧವಾದ ಅರ್ವಾಚೀನ ಸುಧಾರಣೆಯಲ್ಲಿ ಇದೊಂದು ಮುಖ್ಯ ವಿಷಯವಾಗಿರುತ್ತದೆ. ಆ ಪ್ರಕಾರ ಸರಕಾರದವರು ಓರಿಯಾ ದೇಶವನ್ನು ಒಂದು ಮಾಡಿದರು. ಆಂಧ್ರರು ಸ್ವತಂತ್ರ ಇಲಾಖೆ ಮಾಡಿಕೊಳ್ಳುವ ಉದ್ಯೋಗ ಪ್ರಾರಂಭಿಸುವರು. ಓರಿಯಾ ಮತ್ತು ಆಂಧ್ರಕ್ಕಿಂತ ವಿಪನ್ನಸ್ಥಿತಿಯಾದ ಕರ್ನಾಟಕವನ್ನು ಒಂದು ಮಾಡುವದು ಸರಕಾರದ ಕರ್ತವ್ಯವು. ಸರಕಾರವು ತನ್ನ ಕರ್ತವ್ಯ ಮರೆತರೆ, ಪ್ರಜೆಯು ಸರಕಾರವನ್ನು ಎಚ್ಚರಿಸ ಹೋದರೆ- ಸರಕಾರವು ಅಗ್ದಿ ತಿದ್ದ ಉತ್ತರ ಕೊಟ್ಟು ಪ್ರಜೆಯನ್ನು ನಿರಾಶಪಡಿಸುವುದು ಆಶ್ಚರ್ಯದ ಸಂಗತಿಯು.

ಕರ್ನಾಟಕದ ಏಕೀಕರಣವಾಗಬೇಕೆಂದು ಸಾ. ೧೯೨೦ರ ಕಾಂಗ್ರೆಸದ ವೇಳೆಯಿಂದ ಚಳವಳಿ ನಡೆದಿರುತ್ತದೆ. ಮಹಾತ್ಮಾ ಗಾಂಧಿಯವರು ಕರ್ನಾಟಕಕ್ಕೆ ಸ್ವತಂತ್ರ ಸರ್ಕಲ ಮಾಡಿಕೊಟ್ಟಿದ್ದಾರೆ. ಈ ಅಧಿಕಾರ ಸ್ವಾತಂತ್ರ್ಯದಿಂದಲೇ ಬೆಳಗಾವಿಯಲ್ಲಿ ಕಾಂಗ್ರೆಸ ಸಭೆಯನ್ನು ಕರೆಯಿಸುವ ಹಕ್ಕು ದೊರೆಯಿತು. ಬೆಳಗಾವಿಯಲ್ಲಿ ಕಾಂಗ್ರೆಸ ಕೂಡಿದಾಗ್ಗೆ ಕರ್ನಾಟಕ ಏಕೀಕರಣದ ಸಂಘಸ್ಥಾಪನೆಯಾಯಿತು. ಅನಂತರ ಕರ್ನಾಟಕ ಮಂಡಲದ ತುಂಬ ಸನಸನಾದ ಚಳವಳಿ ನಡೆದಿತು. ಬಳ್ಳಾರಿ ಜಿಲ್ಲೆಗೆ ಸೇರಿದ ಕನ್ನಡ ಭಾಗವನ್ನು ಆಂಧ್ರದಲ್ಲಿ ಕೂಡಿಸಕೂಡದೆಂದು ಕನ್ನಡಿಗರದೆಂದು ಡೆಪ್ಯುಟೇಶನವು ಮದ್ರಾಸದ ಗವರ್ನರ ಸಾಹೇಬರ ಕಡೆಗೆ ಹೋಯಿತು. ಮುಂಬಯಿ ಇಲಾಖೆಯ ಕಾಯದೆ ಕೌನ್ಸಿಲದಲ್ಲಿ ಈ ಬಗ್ಗೆ ಠರಾವು ತರಲು, ಇದು ಪ್ರಾಂತಿಕ ಸರಕಾರದ ವಿಷಯವಲ್ಲ. ಹಿಂದುಸ್ಥಾನ ಸರಕಾರದ ಕೆಲಸವೆಂದು ಉತ್ತರ ಕೊಟ್ಟು, ಠರಾವಿಗೆ ಸಂದು ಕೊಡಲಿಲ್ಲ. ಕರ್ನಾಟಕಕ್ಕಾಗಿ ಒಂದು ಯುನಿವರ್ಸಿಟಿಯನ್ನು ಸ್ಥಾಪಿಸಬೇಕೆಂದು ಮುಂಬಯಿ ಕೌನ್ಸಿಲದಲ್ಲಿ ಠರಾವು ಬರತಕ್ಕದ್ದಿದೆ. ಮೈಸೂರವನ್ನು ಸೇರಿಸಿಕೊಂಡು ಅಖಿಲ ಕರ್ನಾಟಕ ವಿಶ್ವವಿದ್ಯಾಲಯ ಮಾಡಬೇಕೆಂಬ ವಿಚಾರವು ನಡೆದಿದೆ. ಕರ್ನಾಟಕವೆಲ್ಲ ಒಂದಾಗಬೇಕೆಂಬ ಹಲವು ವಿಧದಿಂದಲೂ ಪ್ರಯತ್ನಗಳು ನಡೆದಿರುವಾಗ, ಹಿಂದುಸ್ಥಾನ ಸರಕಾರದ ಗೃಹಮಂತ್ರಿಯಾದ ಮಿ. ಕ್ರೇರಾರಸಾಹೇಬರು ಕೌನ್ಸಿಲ ಆಫ ಸ್ಟೇಟದಲ್ಲಿ "ಇದಕ್ಕೆ ಮೊದಲು ನಿಜವಾದ ಮತ್ತು ಬಲವಾದ ಲೋಕಮತ ಬೇಕು. ಮತ್ತು ಮೊದಲದಲ್ಲಿ ಇಲಾಖೆಯ ಕೌನ್ಸಿಲಗಳಲ್ಲಿ ಈ ಬಗ್ಗೆ ಠರಾವು ಆಗಬೇಕು" ಎಂಬದಾಗಿ ಹೇಳಿ ಠರಾವನ್ನು ನಾಮಂಜೂರ ಮಾಡಿಸಿಬಿಟ್ಟರು. ಮುಂಬಯಿ ಇಲಾಖೆಯಲ್ಲಿ ಠರಾವು ಬಂದಾಗ ಇದು ಹಿಂದುಸ್ಥಾನ ಸರಕಾರದ ಕೆಲಸವೆಂದರು. ಈ ವಿಷಯವನ್ನು ಡಾ. ರಾಮರಾಯರು ಸಾಹೇಬರ ಧ್ಯಾನಕ್ಕೆ ತಂದುಕೊಟ್ಟರೂ, ಸಾಹೇಬರು ತಮ್ಮ ಮಾತನ್ನು ಎಷ್ಟು ಹಿಂದಕ್ಕೆ ತಕ್ಕೊಳ್ಳದಿದ್ದದ್ದು ಇದು ನ್ಯಾಯವಲ್ಲವೆ ?

ಡಾ. ಯಮ್. ರಾಮರಾಯರು ಕಳೆದ ಬುಧವಾರ ದಿವಸ ಈ ಬಗ್ಗೆ ಖಾಸ ಅಧಿಕಾರಿಗಳ ಬಹುಮತವಿರುವಂಥ ಕಮೀಟಿ ನೇಮಿಸಬೇಕೆಂದು ಠರಾವನ್ನು ಕೌನ್ಸಿಲ ಆಫ ಸ್ಟೇಟದಲ್ಲಿ ತಂದರು. ಠರಾವಿನ ಮೇಲೆ ಚರ್ಚೆ ನಡೆದಾಗ ಮಾತಿನ ಮೋಡಿಗಿಂತ ಹೆಚ್ಚು [illegible]. ಡಾಕ್ಟರ ರಾಮರಾಯರು ಭಾಷಣ ಮಾಡಿದ ಕೂಡಲೆ, ಸರ ಉಮರ ಹಯಾತಖಾನ ಸಾಹೇಬರು ಠರಾವನ್ನು ವಿರೋಧಿಸಿದರು. ಸರಕಾರ ಪಕ್ಷದ [illegible] "ಕನ್ನಡಿಗರಲ್ಲಿ ನಿಜವಾದ ಐಕ್ಯವಿಲ್ಲ. ಲೋಕಮತದ [illegible] ಇಲ್ಲ" ಎಂಬದಾಗಿ ಅಪ್ರಸ್ತುತ ಮತ್ತು ಲೋಕ ವಿಲಕ್ಷಣವಾದ ಭಾಷಣಗಳನ್ನು ಮಾಡಿ, ಸುದ್ದಿನ [illegible] ತೋರಿಸಿದರು. ಮುಂಬಯಿ ಇಲಾಖೆಯವರಾದ [illegible] ಕಾಟಸನ್ನರೆಂಬವರೂ ಮಿ. ಕ್ರೇರಾರಸಾಹೇಬರಂತೆಯೇ ಪ್ರತಿಧ್ವನಿ ತೆಗೆದು ಕನ್ನಡಿಗರಲ್ಲಿ ಬಲವಾದ ಲೋಕಪ್ರಿಯವಾದಂಥ ಬೇಡಿಕೆಯೇ ಇಲ್ಲೆಂದರು. ಇದರಿಂದ ಸಾಹೇಬರು ಎಂದಾದರೂ ಕನ್ನಡ ನಾಡನ್ನು ನೋಡಿರುವರೋ ಎಂಬ ಸಂಶಯಬರುತ್ತದೆ. ಹೀಗಾಗಿ ಡಾಕ್ಟರ ರಾಮರಾಯರೊಬ್ಬರೇ ಮೂಲ ಠರಾವಿನ ಪುರಸ್ಕರ್ತರಾದ್ದರಿಂದ. ಹೋಟು ತಕ್ಕೊಳ್ಳುವ ಕ್ರಮ ಸಹ ಮಾಡುವ ಪ್ರಸಂಗ ಬರದೆ, ಠರಾವು ನಾಮಂಜೂರಾಯಿತು.

ಡಾಕ್ಟರ ರಾಮರಾಯರು ಠರಾವು ತಂದ ವೇಳೆಯು ಕನ್ನಡಿಗರಿಗೆ ರಾಹುಕಾಲದ್ದಾಗಿತ್ತೆಂದು ಹೇಳಬಹುದು. ಕೌನ್ಸಿಲ ಆಫ ಸ್ಟೇಟದಲ್ಲಿ ಗಣ್ಯ ಜನರು ಸ್ವರಾಜ್ಯ ಪಕ್ಷೀಯರಾಗಿದ್ದಾರೆ. ಠರಾವು ಬಂದಾಗ ಅವರಾರೂ ಸಭೆಯಲ್ಲಿಲ್ಲದ್ದರಿಂದ ಠರಾವು ನಾಮಂಜೂರಾಯಿತು. ಕರ್ನಾಟಕದ ದುರ್ದೈವವೇ ಸರಿ. ಇರಲಿ; ಸರ ಕ್ರೇರಾರಸಾಹೇಬರ ಹೇಳಿಕೆಯ ಪ್ರಕಾರ ಈ ಠರಾವನ್ನು ಮುಂಬಯಿ ಮತ್ತು ಮದ್ರಾಸದ ಕೌನ್ಸಿಲದಲ್ಲಿ ತಂದು, ಪಾಸ ಮಾಡಿಕೊಂಡು, ಅಸೆಂಬ್ಲಿ ಮತ್ತು ಕೌನ್ಸಿಲ ಆಫ ಸ್ಟೇಟಕ್ಕೆ ಹೋಗಬೇಕು. ಆದರೆ ಅವಸರ ಮಾಡದೆ, ಹೊಸ ಕೌನ್ಸಿಲದ ಕೆಲಸ ತಡೆಯಬೇಕೆಂದು ಸೂಚಿಸುತ್ತೇವೆ.

ಹೊರಗೆ ಸಹಕಾರದ ಆಮಂತ್ರಣ!
ಒಳಗೆ ಅಸಹಕಾರದ ಆಲೋಚನೆ!!

ಲಾರ್ಡ ರೀಡಿಂಗಸಾಹೇಬರು ಸ್ವರಾಜ್ಯ ಪಕ್ಷೀಯರಿಗೆ "ನಮ್ಮ ಕೂಡ ಸಹಕಾರ ಮಾಡಿರಿ; ನಿಮ್ಮ ಇಷ್ಟಾರ್ಥವನ್ನು ಪೂರ್ಣಮಾಡುವೆವೆಂಬ." ಮಾತು ಮಾತಿಗೆ ಹೇಳುತ್ತಾ ಇದ್ದಾರೆ. ಆದರೆ ಸಮಯ ಬಂದಾಗ- ತಾವೇ ಅಸಹಕಾರ ಮಾಡತೊಡಗುವರು. ಬಂಗಾಲದಲ್ಲಿ ಗ್ರಾಮ ಪಂಚಾಯತಿಯ ಬಿಲ್ಲಿನ ವಿಚಾರ ನಡೆದಾಗ "ತಳವಾರ, ಓಲೆಕಾರ ಮೊದಲಾದ ಗ್ರಾಮನೌಕರರ ನೇಮಣೂಕಿ, ಅವರ ಮೇಲಿನ ಅಧಿಕಾರ, ಬರತರ್ಫ ಮೊದಲಾದ ಎಲ್ಲ ಅಧಿಕಾರಗಳು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಿಗೆ ಆಧೀನವಾಗಿರಬೇಕೆಂದು" ಸರಕಾರದ ಕಲಮು ಇತ್ತು. ತಮ್ಮ ಕೈಕೆಳಗೆ ಕೆಲಸ ಮಾಡುವಂಥವರ ಮೇಲಿನ ಪ್ರತ್ಯಕ್ಷ ಹುಕುಮತ್ತಿನ ಸಂಬಂಧ ಸೂತ್ರಗಳೆಲ್ಲ ಜಿಲ್ಹಾಧಿಕಾರಿಯ ಕೈಸೇರಿ, ತಾವು ಸೂತ್ರ

ಗೊಂದಲವಾಗುವದು ವಿಹಿತವೇ ಎಂದು ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷೀಯರು ಬಗೆದು, ಠರಾವನ್ನು ಅದಷ್ಟು ತೀವ್ರ ಶಬ್ದಗಳಿಂದ ವಿರೋಧಿಸಿ ಇದೊಂದು ಲಾರ್ಡ ರೀಡಿಂಗಸಾಹೇಬರ ಸಹಕಾರ ಸೂತ್ರದ ಮಾದರಿ ಎಂದು ಹೃದಯ ಭೇದಕ ಭಾಷಣ ಮಾಡಿದರು. ಸರಕಾರದ ಠರಾವು ಪ್ರಚಂಡ ಬಹುಮತದಿಂದ ಪಾಸಾಸಾಗಿ, ಸ್ವರಾಜ್ಯ ಪಕ್ಷಕ್ಕೆ ಜಯ [illegible]ತು.

ಧಣಿಯಂಕರ ಶಿಕ್ಷೆ—

ನಾಗಪೂರ ಕೌನ್ಸಿಲದ ಮೆಂಬರರಾಗಿದ್ದ ಶ್ರೀ [illegible] ಮದನ ಗೋಪಾಲ ಪಾಂಡೆಯವರು ಕಟ್ನಿ ಮ್ಯುನಿಸಿಪಾಲಿಟಿಯ ಅಧ್ಯಕ್ಷ ಮತ್ತು ತಾಲೂಕ ಲೋಕಲಬೋರ್ಡಿನ ಮೆಂಬರರಾಗಿದ್ದಾರೆ. ತಾ. ಬೋರ್ಡಿನ ಮೂರು ಸಾವಿರ ರೂಪಾಯಿಗಳ ಅಪರಾತಫರ ಮಾಡಿದರೆಂಬ ಆರೋಪದಿಂದ ಇವರ ಮೇಲೆ ಖಟ್ಲೆ ಬಂತು ಅಸಿಸ್ಟಂಟಜಜ್ಜರು ಇವರಿಗೆ ನಾಲ್ಕು ವರ್ಷದ ಸಕ್ರಮ ಶಿಕ್ಷೆ ಮತ್ತು ಮೂರು ಸಾವಿರ ರೂಪಾಯಿ ದಂಡ ಮಾಡಿದರು. ಸೆಶನ ಜಜ್ಜರು ಅಪೀಲು ತಿಕ್ಕಿ ಹಾಕಿದರು. ನಂತರ ಜ್ಯುಡಿಶಿಯಲ ಕಮೀಶನರರ ಕೋರ್ಟಿಗೆ ಅಪೀಲು ಮಾಡಲು. ನ್ಯಾಯಮೂರ್ತಿಗಳು ಇವರನ್ನು ಹತ್ತು ಸಾವಿರದ ಜಾಮೀನದ ಮೇಲೆ ಬಿಡುಗಡೆ ಮಾಡಿದ್ದಾರೆ.

ಸ್ವರಾಜ್ಯ ಪಕ್ಷೀಯರ ಮೇಲೆ ಕೋಪ-

ಬಿಜಾಪುರದ ಹತ್ತರದ [illegible] ನಡಿಗಾವದಲ್ಲಿ [illegible] ಚುನಾವಣೆಯಾಗುತ್ತಿದ್ದಿರುತ್ತದೆ. ಶ್ರೀ ಕಾಲೇಶ್ವರರಾವ ಮೊದಲಿಗರು ಒಬ್ಬ ಸ್ವರಾಜ್ಯ ಪಕ್ಷೀಯರು ಉಮೇದವಾರರಾಗಿದ್ದಾರೆ. ಅಧ್ಯಕ್ಷರು [illegible] ಬಂದ, [illegible] [illegible] ಮುದ್ರಿಸಿದ ಅರ್ಜಿಗಳಿಗೆ [illegible] ಸುಮ್ಮ [illegible], ಅಧ್ಯಕ್ಷರು ಇವರ ಅರ್ಜಿಗಳನ್ನು ನಾಮಂಜೂರ ಮಾಡಿದರು. ಅಸ್ತ್ರ ದೋಷವು ಮುದ್ರಕರದಾಗಿ [illegible] ಅಧಿಕಾರಿಗಳು ಅರ್ಜಿಗಳನ್ನು ತಿದ್ದುವಿಕ್ಕೆ ಹೇಳಿದರೂ, ಅಧ್ಯಕ್ಷರು ಮನ್ನಿಸಲಿಲ್ಲ. ಶ್ರೀ ಕಾಲೇಶ್ವರರಾವ ಮೊದಲಾದವರು ದಿವಾಣಿ ಕೋರ್ಟಿನಲ್ಲಿ ದಾವೆ ಮಾಡಿ, ಚುನಾವಣೆಯನ್ನು ರದಪಡಿಸಬೇಕೆಂದಿದ್ದಾರೆ.

ಪೋಲೀಸರ ಸಂಸ್ಥೆ ಸಂಘಟನೆ-

ಕೋಚೀನ ಸಂಸ್ಥಾನದ ಪೋಲೀಸ ಖಾತೆಯಲ್ಲಿ ಮೆಲ್ಲಾರ ಪೋಲೀಸ ಠಾಣೆಯಲ್ಲಿ ಕಲಿತು ಬಂದವರಿಗೆ ಒಪ್ಪಿಯಾದ ಹುದ್ದೆಯ ಕೆಲಸಗಳನ್ನು ಕೊಡುತ್ತಿರುವದರಿಂದ ಕೆಳದರ್ಜೆಯ ಪಕ್ಷಗಳು ಮುಳುಗಲಾರಂಭಿಸಿವೆ. ಇನ್ಸಪೆಕ್ಟರ ಜನರಲರಾದ ಮೆ. ಶೇಖ ಅಬ್ದುಲ [illegible] ಸಾಹೇಬರು ಸಿಸ್ಟಿನ ನೆಪದಿಂದ ಕೆಳ ಶ್ರೇಣಿಯ ಕೆಲಸಗಾರರಿಗೆ ಕೊಡುವ ತಾಪ ದೂರಾಗಬೇಕೆಂದು ಎಷ್ಟು ವಿನಂತಿ ಅರ್ಜಿಗಳನ್ನು ಮಾಡಿಕೊಂಡರೂ ಅವೆಲ್ಲ ನಿಷ್ಫಲವಾದವು. ಅದ್ದರಿಂದ ಶ್ರೇಷ್ಠ ಮತ್ತು ಕನಿಷ್ಠ ವರ್ಗದ ಪೋಲೀಸರು ತಂತಮ್ಮಿಂದ ತಮ್ಮ ಬೇಡಿಕೆ ಕೋರಿಕೆಗಳನ್ನು ಪೂರ್ಣ ಮಾಡಿಕೊಳ್ಳಬೇಕೆಂದಿದ್ದಾರೆ.

ಎರಡು ನಾಲಿಗೆಯ ಸ್ವರೂಪ ಪ್ರದರ್ಶನ-

ಮದ್ಯಪಾನ ನಿಷೇಧವು ತಮ್ಮ ಧ್ಯೇಯವೆಂದು ಸಿಲೋನಿನ ಸರಕಾರದವರು ಜಗತ್ತಿಗೆ ಜಾಹೀರ ಮಾಡಿದ್ದಾರೆ. ಆದರೆ ಕೃತಿಯು ತೀರ ವಿರುದ್ಧವಾಗುತ್ತದೆ. ಕಳೆದ ವಾರದಲ್ಲಿ ಮುಂಬಯಿಯಲ್ಲಿ ಗೇಣೀ ಮತ್ತು ವಿಲಾಯತಿಯ ಸರೆಯ ಅಂಗಡಿಗಳ ಲಿಲಾವಾಯಿತು. ಗಳಿಕೆಯಲ್ಲಿ ಸರಕಾರದ ಒಂದು ಕಾಸು ಕೂಡ ಕಡಿಮೆಯಾಗಲಿಲ್ಲ. [illegible]ವನ್ನು ೨೦-೩೫ ಸಾವಿರದ ಸಂಖ್ಯೆಯಿಂದ [illegible] ಬೆಳೆಸಿದ್ದಲ್ಲದೆ, ಸುಮ್ಮ ಸುಮ್ಮನೆ ಸವಾಲನ್ನು ಏರಿಸುವದಕ್ಕಾಗಿ ನಾಲ್ವರು ಮುಲ್ಲಾನಿಗಳನ್ನು ತಂದಿದ್ದರು. ಕಲೆಕ್ಟರರ ಕೃತ್ಯ ನೋಡಿ, ಕಲಾಲರು ಎರಡಾವರ್ತಿ ಲಿಲಾವಿಗೆ ಕರೆದು ಹೊಡೆದು ಹಾಕಿದ್ದರು. ಮುಲ್ಲಾನಿಗಳನ್ನು ಹೊರಗೆ ಹಾಕಿದ ಬಳಿಕ ಲಿಲಾವಿನ ಕೆಲಸ ಸಾಗಿತು. ಮತ್ತು ಹೋದ ವರ್ಷಕ್ಕಿಂತ ನಾಲ್ಕಾರು ಸಾವಿರ ರೂಪಾಯಿಗಳು ಹೆಚ್ಚಿಗೆ ಬಂದವು. ಮದ್ಯಪಾನ ನಿಷೇಧದ ಉತ್ಕೃಷ್ಟ ಮಾದರಿಯು.

[illegible]ನ ಹೆಸ್ಟಿಂಗ್ಸನ ಅವತಾರ-

ಮುಂಬಯಿಯ ಗವ್ಹರ್ನರರಾಗಿದ್ದ ಮೆ. ಲಾಯಿಡ ಜಾರ್ಜಸಾಹೇಬರು ಈಗ ಇಜಿಪ್ತದ ಹಾಯಕಮಿಶನರರಾಗಿ ಆರ್ಡರ್‌ರಾಗಿದ್ದಾರೆ. ಇವರು ಈ ಇಲಾಖೆಯ ಮೊದಲನದಲ್ಲಿ ಮುಂಬಯಿಯಲ್ಲಿ ಬ್ಯಾಕಬೇದ ದಂಡೆಯನ್ನು ಹಬ್ಬಿಸುವದಕ್ಕಾಗಿ ಹದಿನಾರು ಕೋಟಿ ರೂಪಾಯಿಗಳನ್ನು ತಿಂದು ಬಂದಂತೆ ಸಮುದ್ರದಲ್ಲಿ ಹಾಕಿದರು. ಈಗಿನ ಸರಕಾರದವರು ಪ್ರತಿವರ್ಷ ೨೦ ಲಕ್ಷ ರೂಪಾಯಿಗಳನ್ನು ತೆರಿಗೆಗಳ ಶಿಕ್ಷೆ ಬರೆಯಬೇಕೆಂದಿದ್ದಾರೆ. ವಾರನ ಹೆಸ್ಟಿಂಗ್ಸಸಾಹೇಬನು ಕಂಪನಿ ಸರಕಾರದ ದುಷ್ಟ ತಾಳಿ ಮಾಡಿದ ಅಪರಾಧಕ್ಕಾಗಿ ಪಾರ್ಲಮೆಂಟಿನ [illegible]ರಿಗೆ ಗುರಿಮಾಡಲ್ಪಟ್ಟನು. ಈ ದೇ ಪ್ರಕಾರ ಲ್ಯಾಯಿಡ ಲಾಯಿಡಸಾಹೇಬರನ್ನೂ ನ್ಯಾಯಾಸನದ ಮುಂದೆ ಎಳೆಯಬೇಕೆಂದು ಕೌನ್ಸಿಲ ಮೆಂಬರರಾದ ಮೆ. ನರಿಮನ್ನಸಾಹೇಬರೆಂದರುತ್ತಾರೆ.

ಠರಾವು ಗುದಿಗೆ ತಂದಿತು.

ಈ ಮೊದಲು ಪ್ರಸಿದ್ಧವಾದ ಮೇಕಿಗೆ ಸರ ಸೆಟನಾಸಾಹೇಬರು ಕೌನ್ಸಿಲ ಅಫ ಸ್ಟೇಟದಲ್ಲಿ ಸ್ವರಾಜ್ಯ ಕೊಡುವ ವಿಷಯವಾಗಿ ರಾಯಲ ಕಮಿಶನ ನೇಮಿಸಬೇಕೆಂಬ ಠರಾವು ತಂದರು. ಸ್ವರಾಜ್ಯ ಪಕ್ಷೀಯರು ಕಾಯದೆಭಂಗದ ಮತ್ತು ಅಸಹಕಾರದ ಭಯ ತೋರಿಸುವದನ್ನು ಬಿಟ್ಟು, ಸಹಕಾರ ಮಾಡಿ, ಸರಕಾರದ ಪ್ರೀತಿ ಸಂಪಾದನೆ ಮಾಡಿದರೇ- ಮುಂದಿನ ವಿಚಾರವೆಂಗು ಸರ ಮುದಿಮನ್ನರು ಉತ್ತರ ಕೊಟ್ಟ ಕೂಡಲೆ- ಬಹುಮತವು ಸರಕಾರದ ನಿಟ್ಟಿನಲ್ಲಿ ಒಲಿದು, ಠರಾವು ನಾಮಂಜೂರಾಯಿತು.

ನೇಪಾಳದ ಮಹಾರಾಜರಾದ ಸಮಶೇರ ಜಂಗಬಹಾದ್ದೂರರವರು ಹಿಂದೂ ಮಹಾಸಭೆಯ ಅಧ್ಯಕ್ಷರಾಗಲೊಪ್ಪಿದ್ದಾರೆ.

ಪ್ರಕಟನೆ-

ಮಿ. ಎಸ್. ಎಸ್ ವೈದ್ಯ ಇವರು-

ಉತ್ತಮ ಗಾಯನ, ಪೇಟಿ, ಹ ನಾಟಕ ಕಲಿಸುವರು. ಅವಶ್ಯವಿದ್ದವರು ಸಮಕ್ಷಮ ಭೆಟ್ಟಿಯಾಗಬೇಕು.

ಪತ್ತೆ— ವಿಜಯ ಆಫೀಸ,
ಧಾರವಾಡ.

ಜಾಹೀರ ನೋಟೀಸು

—೦—

ಈ ವರ್ಷ ಯಮನೂರ ಜಾತ್ರೆಯಲ್ಲಿ ನವಲಗುಂದ ತಾಲೂಕದ ಶೇತಕಿ ಕಾನಫರನ್ಸ ಮತ್ತು ದನಗಳ ವ ವ್ಯವಸಾಯದ ಸಾಹಿತ್ಯದ ಪ್ರದರ್ಶನವು ಬರುವ ಮಾರ್ಚ ತಿಂಗಳಲ್ಲಿ ತಾರೀಖು ೪-೫-೬ ಈ ಮೂರು ದಿವಸ ಆಗಲಿಕ್ಕಿದ್ದದೆ. ಮತ್ತು ಸದರ ಜಾತ್ರೆಯಲ್ಲಿ ದನಗಳ ಮಾರಾಟವು ಆಗತಕ್ಕದ್ದದೆ ಮತ್ತು ಉತ್ತಮ ತರದ ಜಾನುವಾರುಗಳಿಗೆ ಪ್ರದರ್ಶನ ಕಮಿಟಿಯಿಂದ ಯೋಗ್ಯವಾದ ಇನಾಮು ಸಹ ಕೊಡಲ್ಪಡುತ್ತದೆ. ದನಗಳ ಮಾರಾಟ ಮಾಡುವವರೂ ಪ್ರದರ್ಶನದಲ್ಲಿ ಇನಾಮು ಪಡಕೊಳ್ಳಲಿಕ್ಕೆ ಇಚ್ಛಿಸುವವರೂ ಈ ಸಂಧಿಯನ್ನು ಕಳಕೊಳ್ಳಬಾರದು ಹವೆಯು ಉತ್ಕೃಷ್ಟವಿದ್ದು ನೀರಿನ ಪೂರವಠೆಯು ಬೇಕಾದಷ್ಟು ಇರುತ್ತದೆ.

ನವಲಗುಂದ ತಾ. ೧೫-೨-೨೬

ರಾಮಭೊವು ಸೋಳಿ — ಪರ್ವತಗವಡಾ ಪಾಟೀಲ
ನವಲಗುಂದ — ಹುಪ್ಪಂದರಕಟ್ಟಿ
ವ್ಹಾಯಿಸ ಚೇರಮನ್ — ಸ್ವಾಗತ ಚೇರಮನ

ಟಿ. ಎಸ್. ಮೋಟಾರ ಸರ್ವಿಸ

ಹುಬ್ಬಳ್ಳಿ.

ಶಿವರಾತ್ರಿ ಸಮಯದಲ್ಲಿ ಗೋಕರ್ಣಕ್ಕೆ ಹೋಗುವ ಪ್ರಯಾಣಿಕರ ಸೌಕರ್ಯಕ್ಕಾಗಿ.

ತಾ|| ೧—೨—೨೬ ರಿಂದ ರೆಗ್ಯುಲರ ಸರ್ವಿಸ ಇಟ್ಟಿದೆ.

—: ಕಾಲಕ್ರಮಗಳು :—

೧.	ಹುಬ್ಬಳ್ಳಿ ಬಿಡುವದು	ಗೋಕರ್ಣ ಸೇರುವದು
	ಬೆಳಗ್ಗೆ ೭ ಘಂಟೆ.	ಸಾಯಂಕಾಲ ೫ ಘಂಟೆ
	ಸಾಯಂಕಾಲ ೫ ಘಂಟೆ	ಬೆಳಗ್ಗೆ ೫ ಘಂಟೆ
೨	ಸಾಗರ ಬಿಡುವದು	ಗೋಕರ್ಣ ಸೇರುವದು
	ಬೆಳಗ್ಗೆ ೭ ಘಂಟೆ	ಸಾಯಂಕಾಲ ೫ ಘಂಟೆ

ಶಿಮೋಗಾ ೩೦-೧-೧೯೨೬ }

ಎಮ. ಮಂಜಪ್ಪಾ, ಪ್ರೊಪ್ರಾಯಿಟರ.

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲೇಕೆ? ಇಲ್ಲಿ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ? ಹಲ್ಲುಶೂಲಿಯೋ? ಮೈಯ್ಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು?

ಅಜ್ಜನು— ಕಂದಾ— ಹೌದು ಮೈಯ್ಯಲ್ಲಾ ನೋಯುತ್ತದೆ.

ಕಂದ— ಹಾಗಾದರೆ ಮೊಮೆಂಟ ಕ್ಯುಯರ ತಕ್ಕೊಳ್ಳಿ. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಡ್ರುವಿ ಕಿಮ್ಮತ್ತು ಶೀರ ತುಸು. ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ವಿಳಾಸ—ಕನಕಾದಿತ್ಯ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ಸ್ಟೇಶನರೋಡ ಹುಬ್ಬಳ್ಳಿ.

ವ್ರಣಸಂಹಾರ

ಅಥವಾ

ಘಾಯದ ಮೇಲಿನ ಮುಲಾಮು

ಈ ಮುಲಾಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣಖಜ್ಜಿ, ಗರ್ಮಿ ಯಚಟ್ಟಿ, ಭಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಬೇಕೆಂದು ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ. ಪರಸ್ಥಳದವರಿಗೆ ಅಂಚೇವೆಚ್ಚ ಬೇರೆ.

ಹುಬ್ಬಳ್ಳಿ ಏಜಂಟರು— ದಿ ಕನಕಾದಿತ್ಯ ಮೆಡಿಕಲಸ್ಟೋರ್ಸ— ಸ್ಟೇಶನ ರೋಡ ಹುಬ್ಬಳ್ಳಿ. ಠೋಕ ಮತ್ತು ಕಿರುಕೋಳದಿಂದ ದೊರೆಯುವದು. }

ಎಸ. ಎಫ. ಪೆಂಟರ ಖಡೇಬಜಾರ ಬೆಳಗಾವಿ

ನೋಟೀಸು

ಯಲ್ಲಾ ತಂದಿ ಚನ್ನಪ್ಪಾ ಗೂಪಣ್ಣನವರ ಗೌಡರ ಸಾಕೀನ ಗುಂಡೆನಹಟ್ಟಿ ತಾಲೂಕ ಖಾನಾಪೂರ ಇವನಿಗೆ-

ಕೆಳಗೆ ಹೆಬ್ಬಟ್ಟಿನ ಗುರ್ತಾ ಮಾಡುವ ಗಂಗವ್ವಾ ಕೋಂ ಯಲ್ಲಾ ಗೂಪಣ್ಣನವರ ಸಾಕೀನ ಗುಂಡೆನಹಟ್ಟಿ ಹಾಲಿವಸ್ತಿ ಲಿಂಗನಮಠ ಈಕೆಯು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ನನ್ನ ಉಡಕಿಯ ಗಂಡನಾಗದೀಕು ಉಡಿಕೆಮಾಡಿದನಂತರ ಸರಾಸರಿ ಒಂದು ವರ್ಷ ಪ್ರಪಂಚ ಮಾಡಿದಿ ಮುಂದೆ ನನ್ನ ಕೂಡ ಕಡದಾಡಿ, ಬರೋಬರಿ ರೀತಿಯಿಂದ ನಡೆಯದೆ, ಮೈಮೇಲಿನ ದಾಗೀನೆಗಳನ್ನು ಕಸಕೊಂಡು ಮನೀಬಿಟ್ಟು ಹೊರಗೆ ಹಾಕಿದಿ ಮತ್ತು ಆನಂತರ ಬೇರೆಯವಳನ್ನು ಉಡಿಕೆ ಮಾಡಿಕೊಂಡಿ ಈ ದರವಾಜ್ಯಾನ ನನ್ನ ದಾಗೀನೆ ನನಗೆ ಕೊಟ್ಟು, ಸುರಳಿತ ಪ್ರಪಂಚ ಮಾಡಬೇಕೆಂದು ನಿನಗೆ ಅನೇಕ ಸಾರೆ ದೈವದವರಿಂದಾ ಹೇಳಿಸಿದೆ ಮತ್ತು ನೀನು ಕರಕೊಂಡು ಹೋದೀ ಎಂದು ನಾನು ಸಾವುಕಾರರಲ್ಲಿ ಸಾಲಾ ಮಾಡಿ, ಉಪಜೀವನ ನಡೆಸಿದೆ. ನನಗೆ ಹಾಕಿ ಸರಾಸರಿ ಎರಡು ವರ್ಷವಾಯಿತು ಸಾಲದ ರಕಮು ೨೦೦ ರೂಪಾಯಿ ಆಗಿದೆ ಸಾಲಗಾರರ ತಗಾದಿ ಆಗಿರುತ್ತದೆ ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ಸಾಲಗಾರರ ಸಾಲಾ ತೀರಿಸಿ, ನನ್ನ ಸ್ತ್ರೀಧನದ ದಾಗೀನೆಗಳನ್ನು ಕೊಟ್ಟು, ಪಂಚರ ಜಾಮೀನು ಕೊಟ್ಟು ಕರಕೊಂಡು ಹೋಗಿ ಸುರಳಿತ ಪ್ರಪಂಚ ಮಾಡಿಕೊಂಡಿರಬೇಕು ಇದ್ದ ತಪ್ಪಿದರೆ ನಿನ್ನ ಮೇಲೆ ದಾಗೀನೆ, ಸಾಲ, ಪೋಟಿ ಖರ್ಚಿನ ಫೋಟಗಿ ಬೋಜಾ ನಿನ್ನ ಮೇಲಿರುವದು ಈ ನೋಟೀಸಿನ ಖರ್ಚ ನಿನ್ನ ಮೇಲಿರುತ್ತದೆ. ತಿಳಿಯುವದು ತಾರೀಖು ೨೦ ಫೆಬ್ರುವರಿ ೧೯೨೬ ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಗಂಗವ್ವಾ ಕೋಂ ಯಲ್ಲಾ ಗೂಪಣ್ಣನವರ ಇದೆ ಕೈದು ಇರುತ್ತದೆ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವತ್ತೀ ಇಟ್ಟುಕೊಳ್ಳುವ ಬಡ್ಡಿಯು ದಂವ್ವ ನೂರಕ್ಕೆ ತಿಂಗಳಿಗೆ ಹನ್ನೆರಡು ಪೈಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ಈ ಪತ್ರವನ್ನು [illegible] ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

R. N. B 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭) ಧಾರವಾಡ ಸೋಮವಾರ ತಾರೀಖು [illegible]ನೇ ಫೇಬ್ರುವರಿ [illegible] (ಸಂಚಿಕೆ [illegible]

ಸರಕಾರದಿಂದ ಪೆಟೆಂಟ ದೊರೆತ

ಮಲ್ಹಾರ ಕಪ್ಪಲಿ.

ತೋಟಿಗರಿಗೆ ಅತಿಶಯ ಉಪಯೋಗವಾಗಿರುತ್ತದೆ.

ಇದು [illegible] ತಗಡಿನಿಂದ ಮಾಡಲ್ಪಟ್ಟಿರುವದು. ಆದ್ದರಿಯು ನೀರನ್ನು ಮುಟ್ಟಲೇ ಅದರ [illegible] ಭಾಗದಲ್ಲಿಯ [illegible] ನೀರು ಒಳ ಸೇರುವದು. ಕಪ್ಪಲಿಯು ಜಗ್ಗಲ್ಪಡುತ್ತಲೇ [illegible] ಬಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳದ್ದಿರುವವು.

ನಂ ೧	[illegible] ಗ್ಯಾಲನ್.	ಬೆಲೆ [illegible] ರೂ.
ನಂ ೨	[illegible] ,,	,, [illegible] ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಧಾರವಾಡದಿಂದ ಗದಗ ಮಾರ್ಗವಾಗಿ ಹುಬ್ಬಳ್ಳಿಗೆ ಮೋಟಾರ ಸರ್ವೀಸ.

[illegible] ಧಾರವಾಡದಿಂದ ದಿನಾಲು ಮುಂಜಾನೆ [illegible] ಗಂಟೆಗೆ ಮೋಟಾರ ಬಿಟ್ಟು ಗದಗ, [illegible] ಕಲ್ಲಿನಿಂದ [illegible] ಗಂಟೆಗೆ ಮುಟ್ಟಿಸುವೆವು. ಅಲ್ಲಿಂದ [illegible] ಕೂಡಲೆ ಹೊರಟು [illegible] ವೇಳೆಗೆ [illegible] ಧಾರವಾಡಕ್ಕೆ ತರುವೆವು. ಹುಬ್ಬಳ್ಳಿಗೆ [illegible] ಸಂಜೆಯ [illegible] ಸಾಯಂಕಾಲದಲ್ಲಿ [illegible] ಬಿಡುತ್ತೇವೆ. ಧಾರವಾಡದಲ್ಲಿ ಮಾರ್ಕೆಟ ಧರ್ಮಶಾಲೆಯ ಹತ್ತರ ನಮ್ಮ ಹಾಟೆಲಿನಿಂದ ಮೋಟಾರ ಬಿಡುವೆವು.

[illegible] ಎಜಂಟರು ಮಿ. [illegible] ಮಿ. [illegible] ಇವರಲ್ಲಿ ಟಿಕೀಟುಗಳು ಮಾರಾಟಕ್ಕೆ ದೊರೆಯುವವು.

ಎಮ್. ಕೆ. ಸವದಾಗರ
ಧಾರವಾಡ

ಬಿಗೇನೆನ್ ಟಾಯಿಂಪೀಸ
ದರ ರೂಪಾಯಿ [illegible]

ರಿಸ್ಟವಾಚ ಬೆಳ್ಳಿ [illegible] ಸಿಲ್ವರ
ರೇಡಿಯಂದ ರೂಪಾಯಿ [illegible]

ನಮ್ಮಲ್ಲಿ ಬೇಕಾದ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ [illegible] ಸಿಗುತ್ತವೆ [illegible] ಎಂದ ಮತ್ತು, ಬೇಕಾದ ಕಂಪನಿಯ ವಾಚಗಳು ಯೋಗ್ಯ ದರದಿಂದ ಸಿಗುತ್ತವೆ. ನಾವು [illegible] ಎಜಂಟ್ಸ ಇರುತ್ತೇವೆ. [illegible] ಮುಖಾಂತರ ತರಿಸಿಕೊಳ್ಳುವವರು [illegible] ಹಣ ಅಡ್ವಾನ್ಸ ಕಳಿಸಬೇಕು.

ಅಯ್ಯನಗೌಡರ ಆ್ಯಂಡ ಗುಡಿ.
ವಾಚ ಮಚ [illegible] ಕಮಿಶನ್ ಎಜಂಟ್ಸ, [illegible] ಗದಗ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ
ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ [illegible] ಸೊಸಾಯಟಿಯ ಕಡೆ ಪ್ರಕಾರ [illegible] ಮಾಡಲ್ಪಟ್ಟದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಪಂದಗೆದ [illegible] ಮೇಲುಂಟು. ಚೆಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible] ಮಾಡುವದು. [illegible] ಮತ್ತು [illegible] ಡಿಪಾಜಿಟಗಳಿಗೆ [illegible] ಬಡ್ಡಿ ಕೊಡುವದು.

ವಿಶೇಷ ಸಂಗತಿಗಳನ್ನು [illegible] ಮ್ಯಾನೇಜರ ಇವರಿಂದ ತಿಳಕೊಳ್ಳಬೇಕು.

ಮಾಧವರಾವ ವಿ. [illegible]
ಮ್ಯಾನೇಜಿಂಗ [illegible]

ವಿಜಯ.

ಧಾರವಾಡ ತಾ- ೨೨-೨-೨೬ ನೇ ಇಸ್ವಿ

ಬಂಗಾಲದ ಕೌನ್ಸಿಲದಲ್ಲಿಯ ಕೋಲಾಹಲ.

ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷೀಯರು ಕೌನ್ಸಿಲದಿಂದ ಹೊರಬಿದ್ದು ಬಂದರು

ಬಂಗಾಲದ ಕಾಯದೆ ಕೌನ್ಸಿಲ್ ಸಭೆಯಲ್ಲಿ ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷೀಯರ ಗುಟ್ಟು ಒಂದು ಇರುತ್ತದೆಂಬುದು ಸಂತೋಷದ ಸಂಗತಿಯು. ಇವರು ಸರಕಾರದ ಸ್ವಾರ್ಥೈಕ ದೃಷ್ಟಿಯಿಂದ ಬರುವ ಠರಾವುಗಳನ್ನು ತುಂಡು ತುಂಡು ಮಾಡುವರು. ಮತ್ತು ನ್ಯಾಯತತ್ವಗಳಿಗೆ ವಿರುದ್ಧವಾಗಿ ಆಚರಿಸುವ ಅಧಿಕಾರಿಯ ದಾಕ್ಷಿಣ್ಯವಿಲ್ಲದೆ, ಬಾಯಿಮುಚ್ಚಿಸಿ ಉತ್ತರ ಕೊಡುವರು.

ಕಳೆದ ಬುಧವಾರದ ದಿವಸ ಬಂಗಾಲ ಇಲಾಖೆಯ ಚುನಾವಣೆಯು ಜನಸಂಖ್ಯೆಯ ಪ್ರಮಾಣದಿಂದ ಆಗಬೇಕೆಂದು ಸ್ವರಾಜ್ಯ ಪಕ್ಷದ ಓರ್ವ ಮುಸಲಮಾನ ಗೃಹಸ್ಥರು ಠರಾವು ತಂದರು. ಯುರೋಪಿಯನ್ನ, ಯುರೋಪಿಯನ, ಕ್ರಿಶ್ಚನ್ ಮೊದಲಾದ "ಅಲ್ಪ ಸಂಖ್ಯಾತರ ಮತ್ತು ಇತರರ ಸಂಘಗಳ ಯೋಗ್ಯ ಹಿತ ಸಂಬಂಧಗಳನ್ನು ಕಾಯ್ದುಕೊಂಡು" ಎಂಬುದನ್ನು ಸೇರಿಸಬೇಕೆಂದು ಸರ ಅಬ್ದುಲ ರಹಿಮಾನರು ಉಪಸೂಚನೆ ತಂದರು. ಉಪಸೂಚನೆಯನ್ನು ಒಂದು ವಾರ ಮುಂಚಿತವಾಗಿ ಕಳಿಸಬೇಕಾಗುತ್ತದೆ. ನಿಂತಕಾಲಮೇಲೆ ಅಂಗೀಕರಿಸಲ್ಪಡಬಾರದೆಂದು ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷೀಯರು ಆಕ್ಷೇಪಿಸಿದರು. "ನಮಗೆ ಸಾರಾಸಾರ ವಿಚಾರದ ಅಧಿಕಾರವುಂಟು ಆ ಪ್ರಕಾರ ಈ ಸೂಚನೆಯನ್ನು ಅಂಗೀಕರಿಸುತ್ತೇನೆಂದು" ಅಧ್ಯಕ್ಷರಾದ ಕುಮಾರ ಶಿವಶಂಕರೇಶ್ವರರಾಯರು ಉತ್ತರ ಕೊಟ್ಟರು. ಈ ಉತ್ತರವೇ ಕೋಲಾಹಲಕ್ಕೆ ಕಾರಣವಾಯಿತು.

ಮೌಲ್ವಿ ಜವಧರ- ಉಪಸೂಚನೆಯನ್ನು ಅಂಗೀಕರಿಸುವದು ಸ್ವೇಚ್ಛಾಚಾರವಾಗುತ್ತದೆ.

ಅಧ್ಯಕ್ಷರು- ಮೌಲ್ವಿಸಾಹೇಬರೇ- ತಾವೀಗ ಇನ್ನೊಮ್ಮೆ ಅಧ್ಯಕ್ಷರ ನಿರ್ಣಯದ ಅಗೌರವ ಮಾಡಬೇಕೆಂದು ಮೌಲ್ವಿಯವರಿಗೆ ಹೇಳುತ್ತೇನೆ. ಮೌಲ್ವಿಯವರೇ ಏನಿದು! ಅನ್ನತಿ.

ಮೌಲ್ವಿ- ಇದು ಅಧ್ಯಕ್ಷರ ಹಿರಂಕುಶ ಅಧಿಕಾರವೆಂದೆನು.

ಅಧ್ಯಕ್ಷ- ಈ ಮಾತನ್ನು ಹಿಂದಕ್ಕೆ ತಕ್ಕೊಳ್ಳಬೇಕೆಂದು ಮೌಲ್ವಿಯವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಇದು ಅಧ್ಯಕ್ಷರ ನಡೆನುಡಿಗೆ ಭಯಂಕರವಾದ ದೋಷಾರೋಪವಾಗುತ್ತದೆ. ಮೌಲ್ವಿಯವರ ವರ್ತನವು ಭಂಡತನದ್ದಾಗಿರುತ್ತದೆ. ಅದ್ದರಿಂದ ಇವತ್ತಿನ ಮಟ್ಟಿಗೆ ಇವರನ್ನು ಸಸ್ಪೆಂಡ ಮಾಡಿದ್ದೇನೆ. ಕೌನ್ಸಿಲದ ಹೊರಗೆ ಹೋಗಬೇಕು.

ಮೌಲ್ವಿ- ಮಹಾಸ್ವಾಮಿ- ಬಹಳೇ ಉಪಕಾರವಾಯಿತು. ನಿಮ್ಮ ಮನಸ್ಸಿಗೆ ಬಂದಂತೆ ಮಾಡಿರಿ. ಕೂಡಲೆ ಸಭೆಯಲ್ಲಿ ಶೇಮ! ಶೇಮ!! ಎಂಬ ಉದ್ಗಾರವಾಯಿತು.

ಅಧ್ಯಕ್ಷ- ಡಾಕ್ಟರ ಕುಮಾರ ಶಂಕರ ರಾಯರು ಶೇಮು ಅಂದದ್ದು ಭಂಡತನವೆಂದು ನನ್ನ ಮತವಾಗಿದೆ. ಕಾರಣ ಇಂದಿನ ಮಟ್ಟಿಗೆ ಇವರನ್ನೂ ಸಸ್ಪೆಂಡ ಮಾಡುತ್ತೇನೆ. ಸಭೆ ಬಿಟ್ಟು ಎದ್ದು ಹೋಗತಕ್ಕದ್ದು.

ಶ್ರೀ ಸೇನಗುಪ್ತ- ಶೇಮು, ಶೇಮು ಎಂದು ಕೂಗಿದುದಕ್ಕೆ ಮೆಂಬರರನ್ನು ಹೊರಗೆ ಹಾಕುವ ಅಧ್ಯಕ್ಷರ ವರ್ತನವು ಕೇವಲ ಹುಡುಗಾಟಿಕೆಯದಾಗುತ್ತದೆ. ಶೇಮು ಎನ್ನುವದು ನ್ಯಾಯವಾದದ್ದಾಗಿದೆ. ಪಾರ್ಲಮೆಂಟ ಸಭೆಯಲ್ಲಿಯೂ ಶೇಮವೆಂದು ಕೂಗುವದುಂಟು.

ಅಧ್ಯಕ್ಷ- ನನಗೆ ಹುಡುಗಾಟಿಕೆ ಎಂದೆಂದ ಶಬ್ದಗಳನ್ನು ಹಿಂದಕ್ಕೆ ತಕ್ಕೊಳ್ಳಬೇಕೆಂದು ಸೂಚಿಸುತ್ತೇನೆ.

ಶ್ರೀ ಸಬದಾರ- ಅಧ್ಯಕ್ಷರ ವರ್ತನವು ಹುಡುಗಾಟಿಕೆಯಲ್ಲದೆ ಬೇರೊಂದಿರುವದಿಲ್ಲ.

ಸೇನ- ಆಡಿದ ನುಡಿಯನ್ನು ಮರಳಿ ತಕ್ಕೊಳ್ಳುವದಿಲ್ಲ.

ಶ್ರೀ ಎ. ಸಿ. ಬ್ಯಾನರಜಿ ಅಧ್ಯಕ್ಷರ ವರ್ತನವು ಹುಡುಗತನ ಮಾತ್ರವಲ್ಲದೆ, ಅಧಿಕಾರಸ್ಥಾನಕ್ಕೆ ಅಯೋಗ್ಯವಾದದ್ದಿರುತ್ತದೆ.

ಅಧ್ಯಕ್ಷ- ಬ್ಯಾನರಜಿಯವರೇ ನಿಮ್ಮ ಶಬ್ದಗಳನ್ನು ಹಿಂದಕ್ಕೆ ತಕ್ಕೊಳ್ಳಿರಿ

ಬ್ಯಾನರಜಿ- ಒಂದು ಅಕ್ಷರ ಕೂಡ ಇಲ್ಲ. ಹೊರಟೆ, ನೋಡಿರಿ.

ದಾಸಗುಪ್ತ- ಅಧ್ಯಕ್ಷರ ವರ್ತನವು ಬಹುತೇಕವಾಗಿ ಹುಚ್ಚುಸಂತಿರುತ್ತದೆ.

ಅಧ್ಯಕ್ಷರು ಹೇಳಿದಂತೆ ಇವರಿಗೂ ತಮ್ಮ ಶಬ್ದವನ್ನು ಹಿಂದಕ್ಕೆ ತಕ್ಕೊಳ್ಳಲಿಕ್ಕೆ ಹೇಳಿದರು. ಆದರೆ ಇವರೂ ಬಹುಮಾನದಿಂದ ಸಭೆ ಬಿಟ್ಟು ಎದ್ದುಹೋದರು. ಬಳಿಕ ಅಧ್ಯಕ್ಷರು ಶ್ರೀ ದಾಸಗುಪ್ತರಿಗೂ ಮಾತು ಮರಳಿ ತಕ್ಕೊಳ್ಳಲಿಕ್ಕೆ ವಿನಂತಿ ಮಾಡಿಕೊಂಡರು. ಆದರೆ ಇವರು ಮಾತ್ರವಲ್ಲ; ಎರಡೂ ಪಕ್ಷದ ಎಲ್ಲ ಮೆಂಬರರು ಕೌನ್ಸಿಲ ಬಿಟ್ಟು ಎದ್ದು ಹೋದರು

ಉಭಯ ಪಕ್ಷಗಳ ನಡುವೆ ರಾಜಿಯ ಸಂಧಾನ ನಡೆದಿದೆಂದು ಅನಂತರ ಬಂದ ಸುದ್ದಿಯಾಗಿದೆ.

ನೇಕಾರ ಸಹಕಾರೀ ವಸ್ತು ಪ್ರದರ್ಶನ, ಪುಣೆ

(ಲೇಖ ೨)

ಕಳೆದ ಪತ್ರವನ್ನು ತುಸು ಅವಸರದಿಂದ ಬರೆದುದರಿಂದ ಮಹತ್ವದ ವಿಷಯಗಳನ್ನು ವಿವರಿಸಲಾಗಲಿಲ್ಲ. ಆದ್ದರಿಂದ ಈ ಪತ್ರದಲ್ಲಿ ಎಲ್ಲ ವಿಷಯಗಳ ಮೇಲೆ ಸಾಮಾನ್ಯ ಸಮಾಲೋಚನೆ- ಮಾಡಬೇಕೆಂದು ಆಲೋಚಿಸಿರುತ್ತೇನೆ. ಮುಂಬೈ ಇಲಾಖೆಯೊಳಗಿನ ಎಲ್ಲ ನೇಕಾರ ಸಹಕಾರಿ ಸಂಘಗಳ ಸಾಂಪತ್ತಿಕ ಅವನತ ಸ್ಥಿತಿಯನ್ನು ಹೋಗಲಾಡಿಸಿ ಅವುಗಳನ್ನು ಉನ್ನತ ಸ್ಥಿತಿಗೆ ತರುವ ಸಮುದ್ದೇಶದಿಂದಲೇ ಈ ಪ್ರದರ್ಶನವು ಏರ್ಪಡಿಸಲ್ಪಟ್ಟಿರುವದು, ಆದರೆ ಉದ್ದೇಶ ಪರಿಪೋಷಕವಾಗುವಂತಹ ಮಹತ್ವದ ಒಂದೂ ಕಾರ್ಯವು ಸಾಧಿಸಲಿಲ್ಲೆಂದರೆ ತಪ್ಪಾಗಲಾರದು. ಯಾಕೆಂದರೆ- ಪ್ರದರ್ಶನ ಮಂಡಿಸುವ ಮುಖ್ಯ ಉದ್ದೇಶವು ಸಂಘಗಳಿಂದ ತಯಾರಿಸಲ್ಪಟ್ಟ ಮಾಲು ಕೊಳ್ಳಲಿಕ್ಕೆ ಯೋಗ್ಯ ಗ್ರಾಹಕರನ್ನು ಸಂಪಾದಿಸುವದಾಗಿದೆ. ಇದಾದರೂ ರೋಖವಾಗಿ ಕೊಳ್ಳುವ ವ್ಯಾಪಾರೀ ಗೃಹಸ್ಥರನ್ನೇ ತಮ್ಮ ಗ್ರಾಹಕರನ್ನಾಗಿ ಮಾಡಿಕೊಂಡು ಅವರಿಗೆ ಬೇಕಾದ ಮಾಲು ಸಂಘಗಳು ಪೂರೈಸಿಕೊಡುವದಾಗಿದೆ. ಈ ದೃಷ್ಟಿಯಿಂದ ಪ್ರದರ್ಶನ ಮಂಡಳವು ಏನೊಂದೂ ಪ್ರಯತ್ನ ಮಾಡಿಲ್ಲ. ಕೇವಲ ಬಡ ಗಿರಾಕಿಗಳಿಂದ ದಿನಾಲು ೩-೪ ನೂರು ರೂಪಾಯಿಗಳ ವ್ಯಾಪಾರವಾಗುವದು. ಅದೂ ೩೨-೪೦ ಸಾವಿರ ರೂಪಾಯಿ ಬೆಲೆ ಬಾಳುವ ಮಾಲು ಮುಂದಿಟ್ಟುಕೊಂಡು ಕೂತಾಗ್ಯೇ ಸರಿ. ಇದೇನೂ ಮಹತ್ವದ್ದಲ್ಲ. ಒಂದಾನೊಂದು ಫ್ಯಾನ್ಸಿ ಬಾಜಾರಿನಲ್ಲಿ ಕೂಡ ಈ ತರದ ವ್ಯಾಪಾರ ಆಗಬಹುದು. ಇದರಿಂದ ಬಡ ನೇಕಾರರ ಹೊಟ್ಟೆ ಬಟ್ಟೆಗಳ ಮಹತ್ವದ ಪ್ರಶ್ನವು ಬಿಡಲಾರದು. ಪ್ರದರ್ಶನದ ಮುಖ್ಯೋದ್ದೇಶಕ್ಕೆ ಪರಿಪೋಷಕವಾಗುವಂತೆ ಪ್ರಯತ್ನ ಮಾಡುವದು ಪ್ರದರ್ಶನ ಕಮಿಟಿಯ ಮುಖ್ಯ ಕರ್ತವ್ಯವಾಗಿದೆ. ಈ ದೃಷ್ಟಿಯಿಂದ ದೊಡ್ಡ ದೊಡ್ಡ ವ್ಯಾಪಾರಸ್ಥರನ್ನು ಕರೆಯಿಸಿ ಅವರಿಗೆ ಬೇಕಾಗುವಂಥ ಮಾಲು ಪೂರೈಸಿ ಕೊಡುವ ವಿಚಾರವು ಮಾಡಬೇಕೆಂದು ಪ್ರದರ್ಶನ ಕಮಿಟಿಯವರಿಗೆ ನಮ್ಮ ಆಗ್ರಹ

ದ ಬಿನ್ನಹವಿರುವದು. ಇದರ ಹೊರತಾಗಿ ಇ ನ್ನೊಂದು

ಮಹತ್ವದ ಸಂಗತಿ-

ಎಂದರೆ-, ಸಹಕಾರಿ ಸಂಘಗಳ ಮೆಂಬರರ ಹಾಗು ಸರಕಾರೀ ನೌಕರರು ಕೈ ಮಗ್ಗದ ಬಟ್ಟೆ ಗಳನ್ನೇ ಉಪಯೋಗಿಸಲಿಕ್ಕೆ ಬೇಕೆಂದು ಗೌವ್ಹರ್ನ ಮೆಂಟಿನವರು ಒತ್ತಾಯದ ಕಟ್ಟಪ್ಪಣೆಯನ್ನು ಮಾ ಡಿಸುವದು! ಸಾಂಪ್ರತ ನಮ್ಮ ದೇಶದಲ್ಲಿ ಹಳ್ಳಿ ಹಳ್ಳಿಗಳಲ್ಲಿ ಕೂಲಿ ಒಕ್ಕಲಿಗರು ಹಾಗು ಮಧ್ಯ ಮ ತರಗತಿಯ ಜನರು ಬಹು ಭಾಗವಾಗಿ ಕೈ ಮ ಗ್ಗದ ಬಟ್ಟೆಗಳನ್ನೇ ಉಪಯೋಗಿಸುತ್ತಿರುವರು. ಮೆ. ಮುದನಸುಪೇಟರು ತಮ್ಮ ಭಾಷಣದಲ್ಲಿ ಹೇ ಳಿದಂತೆ ಒಂದು ನಾಲ್ಕಂಶದಷ್ಟು ನೇಕಾರರ ಉ ದ್ಯೋಗವು ಸದ್ಯ ಉಳಿದಿದ್ದರೂ ಅದು ಕೇವಲ ಹಳ್ಳಿಗಾಡದ ಸಾಮಾನ್ಯ ಜನರಿಂದ ಮತ್ತು ಹೆಂಗ ಸರಿಂದಲೇ. ಮುಳುಗಿದ ಮೂರು ನಾಲ್ಕಾಂಶ ಭಾಗವು ಮೇಲ್ತರಗತಿಯ ಸುಶಿಕ್ಷಿತ ಶ್ರೀಮಂತ ರಿಂದ ಪಾಪಕ್ಕಂಜದ ದೇಶಭಕ್ತರಿಂದ!! ಅದರ ಲ್ಲಿ ಸರಕಾರದ ಸೇವೆ ಮಾಡಿ ಆಳಿದವರು, ಹ ಗಿ ತೂಗಿ ವೇತನ ಪಡೆಯುತ್ತಿರುವ ಬಿಳೀ ಕೈ ಜನರಿಂದ ಮುಳಿಯಾಗಲಿ ಅಗದಿಂದಲಿ ಬೆಳೆ ಬರ ಲಿ; ಮುಳೆಗಲಿ ಪ್ರತಿ ತಿಂಗಳಿಗೆ ಕಪ್ಪದ ಬರುತ್ತಿ ರುವ ದ್ರವ್ಯದ ಬೆಂಬಲದಿಂದ ಇವರು ಬಡ ನೇಕಾರರ ಸ್ಥಿತಿಗತಿಗಳನ್ನು ಅರಿಯದೆ ವಿದೇಶಿ ಬ ಟ್ಟೆಗಳನ್ನು ಕೊಂಡು ಆತ್ಮೀಯರಾದ ತಮ್ಮ ಬಡ ನೇಕಾರರ ಹೊಟ್ಟೆಯ ಮೇಲೆ ತಿಳಿದೂ ತಿಳಿದೂ ಕಾಲು ಕೊಡುತ್ತಿರುವರು. ಈ ಸ್ಥಿತಿಯು ಇತ್ತಿ ತ್ತಲಾಗಿ ನಮ್ಮ ಸ್ವದೇಶೀ ನೌಕರಶಾಹಿಯಲ್ಲಿ ಜ ಸ್ತಾಗಿ ನೆಲೆಗೊಂಡಿರುವದು. ಇದನ್ನು ಹೋಗ ಲಾಡಿಸಬೇಕಾದರೆ ಸರಕಾರದಿಂದಲೇ ಕಟ್ಟಪ್ಪಣೆ ಯಾಗಬೇಕಲ್ಲದೆ ಅನ್ಯೋಪಾಯವಿಲ್ಲ. ಮಹಾ ತ್ಮಾಜಿಯವರ ಸತ್ಯಾಗ್ರಹ, ಆದರ ಸಂಪೂರ್ಣ ಅಂತಃಕರಣದ ಬುದ್ಧೀ ಮಾತು ಈ ವರೆಗೆ ತಿಳಿ ದಾತ್ರನೂ ನಡವಳಿಕೆಯಲ್ಲಿ ತರದ ಸ್ವದೇಶೀ ನೌ ಕರಶಾಹಿಯು ಸಂತೋಷದಿಂದ ಅಥವಾ ನೇಕಾರ ರ ಹೀನ ದೀನ ಸ್ಥಿತಿಯನ್ನು ಕಂಡು ತಾನಾಗಿಯೇ ಈ ವ್ರತವನ್ನು ಸ್ವೀಕರಿಸಲಾರದು. ಅಂತೇ ನಾ ವು ಕಾಯಿದೆಯಿಂದಲೇ ಹೀಗೆ ಒತ್ತಾಯ ಪಡಿಸಬೇ ಕೆಂದು ಸೂಚಿಸುತ್ತೇವೆ. ಇಂಥ ಸೂಚನೆಗಳನ್ನು ಒಳಕೆಯಲ್ಲಿ ತರಪಡಿಸುವದು ಸಾಂಪ್ರತಕಾಲದಲ್ಲಿ ಕೇವಧರ ಸಾಹೇಬರಂಥ ರಾಜಾತ್ರಯ, ದೇಶಭಕ್ತ ರಿಗೆ ಸ್ವಲ್ಪ ಮಟ್ಟಿಗಾದರೂ ಸಾಧ್ಯವಿದ್ದಂತೆ ತೋ ರುತ್ತದೆ. ಪ್ರದರ್ಶನವು ಮುಗಿಯುವಷ್ಟರಲ್ಲಿ ಇ ನ್ನೊಂದು ಸಾರೆ ಸಭೆ ಕರೆಯುವರೆಂದು ಕೇಳುತ್ತೇ

ವೆ. ಆದ್ದರಿಂದ ಈ ವಿಷಯದ ಚರ್ಚೆಯಾಗಿ ಈ ಉದ್ದೇಶದ ಒಂದು ಠರಾವು ಪಾಸ ಮಾಡಿ ಸರಕಾರ ಕ್ಕೆ ಕಳಿಸಬೇಕೆಂದು ಪ್ರಾರ್ಥಿಸುತ್ತೇವೆ.

ಅತಿಥಿ ಸತ್ಕಾರ-

ಕೈ. ವಾಸಿ ನ್ಯಾಯಮೂರ್ತಿ ರಾನಡೆ, ಗೋ ಖಲೆ, ಲೋಕಮಾನ್ಯ ಟಿಳಕರ ತಾಲೀಮಿನಲ್ಲಿ ತ ಯಾರಾದ ಪುಣೆಯ ನಾಗರೀಕರು ಅತಿಥಿ ಸತ್ಕಾ ರದಲ್ಲಿ ಬಹು ನುರಿತವರೆಂದು ಆಗಾಗ್ಗೆ ವರ್ತಮಾ ನಪತ್ರದಲ್ಲಿ ಓದಿ ಓದಿ ಗತಿಸಿ ಹೋದ ಮಹಾತ್ಮ- ರ ಸದ್ಗುಣದ ಬಗ್ಗೆ ಸಾಮಾನ್ಯತಃ ಆದರ ಹುಟ್ಟು ತ್ತದೆ. ಇದಕ್ಕೆ ಬೆಸಗೆಂದು ಎಚ್ಚರದಷ್ಟು ಬಂದ ಕನ್ನಡಿಗರಿಗೆ ಅದ ಸಂಭಾವನೆಯು ಅಪೂರ್ವವಾ ಗಿದೆ? ದಕ್ಷಿಣಭಾಗ ಹಾಗೂ ಮಧ್ಯಭಾಗದಿಂದ್ರ ಬಂದ ಎಲ್ಲ ಸಂಘಗಳ ೩೦-೪೦ ಜನ ಪ್ರತಿನಿಧಿ [illegible] ಸೆಂಟ್ರಲ್ ಕೋ-ಅ- ಬ್ಯಾಂಕಿನ [illegible] "ಕೌನ್ಸಿಲ್ ಸ್ವರಾಜ್ಯ ಸಂಘ" [illegible] ದ ಎರಡು ಪಕ್ಷ ಅಧಿಕಾರಿಗಳ [illegible] ಕೆಂದು ದೂಷಿಸುವರು! [illegible] ಜಾತಿಯ ಪ್ರತಿನಿಧಿ [illegible] (ಬಿನ್ನಹವಳಿ) ಬಿಟ್ಟಿಗಳನ್ನು [illegible] ಊಟ ಮಾಡಲಿಕ್ಕೆ ಕರೆದಾರೆ? [illegible] ಇದಲ್ಲದೆ ಗಳಿಕೆ ಫ್ರೆಬ್ರುವರಿ [illegible] ಇಸ್ವಿ ದಿವಸ ಕೇವಾಸದಲ್ಲಿ ಕೂಡಿ [illegible] ಸಂಘಗಳ ಪ್ರತಿನಿಧಿಗಳನ್ನು [illegible] ಪಟ್ಟಿಗೆ ಬಾರಿಸುವವರ ಹಿಂದಿನ ಇಂ [illegible] ಗಿಯಲ್ಲಿ ಕುರಿಗಳಂತೆ ಕೂಡ್ರಿಸಿ ಮಾಡಿ [illegible] ಅತ್ಯಂತ ಅಪೂರ್ವವಾಗಿದೆ ಅತಿಥಿ [illegible] ಲ್ಲಿ ಪ್ರಾಚೀನ ಸಂಸ್ಕೃತಿ ಇಂಗೂ ಪರುವ [illegible] ರನ್ನು ತಮ್ಮ ಸಾಧಿಸುತ್ತಿರುವ ಕರ್ನಾಟಕ [illegible] ಈ ಅಧುನಿಕ ಶಾಸ್ತ್ರವನ್ನು ಅವಶ್ಯವಾಗಿ ಕ [illegible] ಬೇಕಾಗಿದೆ. ಬೆಳಗಾವಿ ಕಾಂಗ್ರೆಸ್ಸಿನಲ್ಲಿ [illegible] ಪುರೆ ಹೊಂದು ಹೇಳಿದ ಕೆಲಸಗಾರರು ಈ ಅ [illegible] ರವನ್ನು ಕಣ್ಣಾರೆ ಕಂಡಿದ್ದರೆ ತಮ್ಮ [illegible] ಕಾಲವುಗಳನ್ನು ಈ ವಿಷಯ [illegible] ಮಾಡುತ್ತಿದ್ದರೋ ಬೇಡರೇ ಬಲ್ಲ! [illegible] ಅರಿವು ಮಾಡಿದ ಪಾಪಕ್ಕಿಂತ ಅರಿತು ಮಾ ಡಿದ [illegible] ಗತ್ತಿನಲ್ಲಿ ಸ್ಥಾನ ಇಲ್ಲ! ಆದರೆ [illegible] ಕಾರ ಜನರಿಗೆ ಬಡ ನೈಕಾರರಿಗೆ ಹಾ ಗೂ ಅವರ ಪ್ರತಿನಿಧಿಗಳಿಗೆ ಮಾಡಿದ ಸಂಭಾವನೆ ಯು ನಮ್ಮ ಸ್ವದೇಶೀ ನೌಕರಶಾಹಿಯ ಶೀಲ ಕ್ಕೆ ಒಪ್ಪುವಂತಹದೇ ಇರುತ್ತದೆ. ಹುಟ್ಟಿಸಿದ ದೇವನೇ ಹೊಟ್ಟೆಯ ಮೇಲೆ ಮೃತ್ಯುಲೋಕದ ಮಾನ ವರಿಗಾದರೂ ಅನ್ನವನೇನು? ಬಟ್ಟೆಗೆ "ದೇವರು ದು ರ್ಬಲ ಘಾತಕ" ಇನೇ ನಿಜ

ತಮ್ಮ ವಿಧೇಯ,

ಕನ್ನಡಿಗ

ವಕೀಲರ ದಲಾಲರಿಗೆ ಶಿಕ್ಷೆ-

ಪಕ್ಷಕಾರ ಮತ್ತು ವಕೀಲರ ನಡುವೆ ಮಧ್ಯ ಸ್ಥಿ ಮಾಡುವಂಥವರ ಸುಳಿದಾಟವು ಎತ್ತ ನೋಡಿದ ತ್ತ ಬಹಳವಾಗಿದೆ. ಇಂಥವರಿಂದ ಪಕ್ಷಕಾರರ ಹಾನಿಯಾಗುತ್ತಿರುವದು. ಈ ಸುಳಿದಾಟ ನಿಲ್ಲಿಸು ವದಕ್ಕಾಗಿ ಅಸೆಂಬ್ಲಿಯಲ್ಲಿ ಒಂದು ಕಾಯಿದೆ ಪಾಸಾ ಯಿತು. ಮಧ್ಯಸ್ಥಗಾರನ ಮೇಲೆ ಆರೋಪ ಹೊ ತ್ತರೆ ಆತನಿಗೆ ಮೂರು ತಿಂಗಳ ಶಿಕ್ಷೆ ವಿಧಿಸಬೇ ಕೆಂದು ಕಾಯಿದೆಯಲ್ಲಿ ಹೇಳಿದ್ದಾರೆ.

ಮೂರು ತಾಸುಗಳಲ್ಲಿ ಮುಂಬಯಿ-

ಬರುವ ಚಳಿಗಾಲದ ಪ್ರಾರಂಭದಲ್ಲಿ ಲಂಡನ ದಿಂದ ವಿಮಾನ ಬಿಟ್ಟು ನೂರೇ ತಾಸುಗಳಲ್ಲಿ ಮುಂ ಬಯಿಗೆ ಬರುವರು. ಪ್ರಯಾಣಿಕರನ್ನು ಟಪಾಲನ್ನೂ ತರುವರು. ವಿಮಾನವು ಇಜಿಪ್ತದ ಮೇಲೆ ಹಾಯು ವದು.

ಪ್ರಕಟನೆ-

ಬಿ. ಎಸ್. ಎಸ್ ವೈದ್ಯ ಇವರು-

ಉತ್ತಮ ಗಾಯನ, ಪೇಟಿ, ವ ನಾಟಕ ಕ ಲಾ ಕಲಿಸುವರು. ಅವಶ್ಯವಿದ್ದವರು ನಮ್ಮನ್ನು ಭೆಟ್ಟಿಯಾಗಬೇಕು.

ಪತ್ತೆ:— ವಿಜಯ ಆಫೀಸ,
ಧಾರವಾಡ.

ಜಾಹೀರ ನೋಟೀಸು

—೦—

ಈ ವರ್ಷ ಯಮನೂರ ಜಾತ್ರೆಯಲ್ಲಿ ನ ವಲಗುಂದ ತಾಲೂಕದ ಶೇತಕಿ ಕಾಮಧೇನು ಮ ತ್ತು ದನಗಳ ವ ವಸ್ಕೂಲಿಕನದ ಸಾಹಿತ್ಯದ ಪ್ರದ ರ್ಶನವು ಬರುವ ಮಾರ್ಚ ತಿಂಗಳಲ್ಲಿ ತಾರೀಖು ೪-೫-೬ ಈ ಮೂರು ದಿವಸ ಆಗತಕ್ಕದ್ದದೆ. ಮ ತ್ತು ಸದರ ಜಾತ್ರೆಯಲ್ಲಿ ದನಗಳ ಮಾರಾಟವು ಆಗತಕ್ಕದ್ದದೆ. ಮತ್ತು ಉತ್ತಮ ತರದ ಜಾನ ವರುಗಳಿಗೆ ಪ್ರದರ್ಶನ ಕಮಿಟಿಯಿಂದ ಯೋಗ್ಯ ವಾದ ಇನಾಮು ಸಹ ಕೊಡಲ್ಪಡುತ್ತದೆ. ದನಗಳ ಮಾರಾಟ ಮಾಡುವವರೂ ಪ್ರದರ್ಶನದಲ್ಲಿ ಇನಾಮು ಪಡಕೊಳ್ಳಲಿಕ್ಕೆ ಇಚ್ಛಿಸುವವರೂ ಈ ಸಂಧಿಯನ್ನು ಕಳಕೊಳ್ಳಬಾರದು. ದನವು ಉಚ್ಛ್ರಯಿಸ್ಟಿರು ನೀರಿನ ಪುರವಠೆಯು ಬೇಕಾದಷ್ಟು ಇರುತ್ತದೆ.

ನವಲಗುಂದ ತಾ. ೧೫-೨-೨೬

ರಾಮಭಾವು ಜೋಶಿ — ಪರ್ವತಗವಡಾ ಪಾಟೀಲ
ನವಲಗುಂದ — ಶಿಪ್ಪದಿಕುರಹಟ್ಟಿ
ವ್ಹಾ. ಚಿ. ಚೇರಮನ್ — ಸ್ವಾಗತ ಕ. ಚೇರಮನ

ಟಿ. ಎಸ್. ಮೋಟಾರ ಸರ್ವೀಸ

ಹುಬ್ಬಳ್ಳಿ.

ಶಿವರಾತ್ರಿ ಸಮಯದಲ್ಲಿ ಗೋಕರ್ಣಕ್ಕೆ ಹೋಗುವ ಪ್ರಯಾಣಿಕರ ಸೌಕರ್ಯಕ್ಕಾಗಿ

ತಾ|| ೧-೨-೨೭ ರಿಂದ ರೆಗ್ಯುಲರ ಸರ್ವೀಸ ಇಟ್ಟಿದೆ.

—: ಕಾಲಕ್ರಮಗಳು :—

೧. ಹುಬ್ಬಳ್ಳಿ ಬಿಡುವದು	ಗೋಕರ್ಣ ಸೇರುವದು
ಬೆಳಿಗ್ಗೆ ೭ ಘಂಟೆ.	ಸಾಯಂಕಾಲ ೫ ಘಂಟೆ
ಸಾಯಂಕಾಲ ೫ ಘಂಟೆ	ಬೆಳಿಗ್ಗೆ ೫ ಘಂಟೆ
೨ ಸಾಗರ ಬಿಡುವದು	ಗೋಕರ್ಣ ಸೇರುವದು
ಬೆಳಿಗ್ಗೆ ೭ ಘಂಟೆ	ಸಾಯಂಕಾಲ ೫ ಘಂಟೆ

ಶಿವಮೊಗ್ಗಾ ೩೦-೧-೧೯೨೭ } ಎಮ್. ಮಂಜಪ್ಪಾ, ಪ್ರೊಪ್ರಾಯಿಟರ.

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲೇಕೆ? ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ! ತಲೆನೋವೋ? ಹಲ್ಲುಶೂಲಿಯೋ? ಮಯ್ಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು?

ಅಜ್ಜನು— ಕಂದಾ— ಹಾದು ಮಯ್ಯೆಲ್ಲಾ ನೋಯುತ್ತದೆ.

ಕಂದ— ಹಾಗಾದರೆ ಮೋಮೆಂಟ ಕ್ಯೂಯರ ತಕ್ಕೊಳ್ಳು. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಡ್ರುವಿ ಕಿಮ್ಮತ್ತು ತೀರ ಕುಸು. ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ವಿಳಾಸ—ಗಣಾದಿತ್ಯ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ಸ್ಟೇಶನರೋಡ ಹುಬ್ಬಳ್ಳಿ

ವ್ರಣಸಂಹಾರ

ಅಥವಾ

ಘಾಯದ ಮೇಲಿನ ಮುಲಮು

ಈ ಮುಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣಬಜ್ಜ, ಗರ್ಮಿ ಯುಪತ್ತು, ಭಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಿರಬೇಕೆಂದು ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಅರೇ ಆಣೆ. ಪರಸ್ಥಳದವರಿಗೆ ಅಂಚೇವೆಚ್ಚ ಬೇರೆ

ಹುಬ್ಬಳ್ಳಿಯ ಏಜಂಟರು— ದಿ ಗಣಾದಿತ್ಯ ಮೆಡಿಕಲ ಸ್ಟೋರ್ಸ- ಸ್ಟೇಶನ ರೋಡ ಹುಬ್ಬಳ್ಳಿ. ಹೋಲ ಮತ್ತು ರಿಟೇಲದಿಂದ ದೊರೆಯುವದು. } ಎಸ್. ಎಫ್. ಪಂಟರ ಬುಧೇಬಝಾರ ಬೆಳಗಾವಿ

ನೋಟೀಸು

ಯಲ್ಲಾ ತಂದಿ ಚನ್ನಪ್ಪಾ ಗೊಪಣ್ಣನವರ ಗೌಡರ ಸಾಕೀನ ಗುಂಡೆನಹಟ್ಟಿ ತಾಲೂಕ ಖಾನಾಪೂರ ಇವನಿಗೆ-

ಕೆಳಗೆ ಹೆಬ್ಬಟ್ಟಿನ ಗುರ್ತ ಮಾಡುವ ಗಂಗವ್ವಾ ಕೋಂ ಯಲ್ಲಾ ಗೊಪಣ್ಣನವರ ಸಾಕೀನ ಗುಂಡೆನಹಟ್ಟಿ ಹಾಲಿವಸ್ತಿ ಲಿಂಗನಮಠ ಇವಳು-ನಿನಗೆ ಈ ನೋಟೀಸಿನಿಂದ ತಿಳಿಸುವದೇನೆಂದರೆ-

ನೀನು ನನ್ನ ಊಹತಿಯ ಗಂಡನಾಗಬೇಕು ಉಡಿಕೆಮಾಡಿದನಂತರ ಸರಾಸರಿ ಒಂದು ವರ್ಷ ಪ್ರಪಂಚ ಮಾಡಿದಿ ಮುಂದೆ ನನ್ನ ಕೂಡ ಕಠದಾಗಿ, ಬಲೋ ರೀತಿಯಿಂದ ನಡೆಯದೆ, ಮೈಮೇಲಿನ ದಾಗೀನಗಳನ್ನು ಕಸಕೊಂಡು ಮನೀಬಿಟ್ಟು ಹೊರಗೆ ಹಾಕಿದಿ ಮತ್ತು ಆನಂತರ ಬೇರೆಯವಳನ್ನು ಉಡಿಕೆ ಮಾಡಿಕೊಂಡಿ ಈ ದರಮ್ಯಾನ ನನ್ನ ದಾಗೀನ ನನಗೆ ಕೊಟ್ಟು, ಸುರಳಿತ ಪ್ರಪಂಚ ಮಾಡಬೇಕೆಂದು ನಿನಗೆ ಅನೇಕ ಸಾರೆ ದೈವದವರಿಂದಾ ಹೇಳಿಸಿದೆ ಮತ್ತು ನೀನು ಕರಕೊಂಡು ಹೋದೀ ಎಂದು ಸಾವುಕಾರರಲ್ಲಿ ಸಾಲಾ ಮಾಡಿ, ಉಪಜೀವನ ನಡಿದಿದೆ- ಹೊರಗೆ ಹಾಕಿ ಸರಾಸರಿ ಎರಡು ವರ್ಷವಾಯಿತು ಸಾಲದ ರಕಮು ೨೦೦ ರೂಪಾಯಿ ಆಗಿದೆ ಸಾಲಗಾರರ ತಗಾದೆ ಆಗಿರುತ್ತದೆ ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ಸಾಲಗಾರರ ಸಾಲಾ ತೀರಿಸಿ, ನನ್ನ ಸ್ತ್ರೀಧನದ ದಾಗೀನಗಳನ್ನು ಕೊಟ್ಟು, ಪಂಚರ ಜಾಮೀನು ಕೊಟ್ಟು ಕರಕೊಂಡು ಹೋಗಿ ಸುರಳಿತ ಪ್ರಪಂಚ ಮಾಡಿಕೊಂಡಿರಬೇಕು ಹೀಗೆ ಇದಕ್ಕೆ ತಪ್ಪಿದರೆ ನಿನ್ನ ಮೇಲೆ ದಾಗೀನ, ಸಾಲ, ಪೋಟ್ಟ ಖರ್ಚಿನ ಫೋಟಗಿ ಹೋದಾ ನಿನ್ನ ಮೇಲಿರುವದು ಈ ನೋಟೀಸಿನ ಖರ್ಚ ನಿನ್ನ ಮೇಲಿರುತ್ತದೆ. ತಿಳಿಯುವದು ತಾರೀಖು ೨೦ ಫೆಬ್ರುವರಿ ೧೯೨೭ ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುರ್ತ ಗಂಗವ್ವಾ ಕೋಂ ಯಲ್ಲಾ ಗೊಪಣ್ಣನವರ ಇದರ ಕೈಯಿಂದ ಇರುತ್ತದೆ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ತಿಂಗಳ ಮುದ್ದತ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ವತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ಈ ಪತ್ರವನ್ನು ಅಣ್ಣಾಜಿರಾವ ವಿಠ್ಠಲರಾಯ ಹೊಸಕೆರೆ ಇವರು ಧಾರವಾಡದಲ್ಲಿರುವ ತಮ್ಮ ವರ್ತಮಾನ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

R. N. B 1443

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:– ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭] ಧಾರವಾಡ ಸೋಮವಾರ ತಾರೀಖು ೨೨ನೇ ಫೇಬ್ರುವರಿ ೧೯೨೭ (ಸಂಚಿಕೆ ೪೪

ಸರಕಾರದಿಂದ ಪೇಟೆಂಟ ದೊರೆಕಿದ

ಮಲ್ಹಾರ ಕಪ್ಪಲಿ.

ತೋಟಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟಿದ ಕೂಡಲೇ ಅದರ ಕೆಳಭಾಗದಲ್ಲಿಯ ಜಾಳಿಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಜಗ್ಗಲ್ಪಡುತ್ತಲೇ ಜಾಳಿಗೆಯು ಮುಚ್ಚಲ್ಪಟ್ಟು ಒಂದು ಹನಿ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳಲ್ಲಿರುವವು.

ನಂ ೧	೩೫ ಗ್ಯಾಲನ್.	ಬೆಲೆ ೨೦ ರೂ.
ನಂ ೨	೫೫ ,,	,, ೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಬಿಗೆನೆನ್ ಟಾಯಿಂಪೀಸ ದರ ರೂಪಾಯಿ ೯

ರಿಸ್ಟವಾಚ ಬೆಳ್ಳಿ ಜುಪಿಲ್ಲ ಲಿವ್ಹರ ರೇಡಿಯಂ ದರ ರೂಪಾಯಿ ೧೫

ನಮ್ಮಲ್ಲಿ ಬೇಕಾದ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ಸ್ಪ್ರಿಂಗ ಪೆಟಿ ವಗೈರೆ ಸಿಗುತ್ತವೆ. ದುರಸ್ತ ಎಂದ ಮತ್ತು, ಬೇಕಾದ ಕಂಪನಿಯ ವಾಚಗಳು ಯೋಗ್ಯ ದರದಿಂದ ಸಿಗುತ್ತವೆ. ನಾವು ವೆಸ್ಟಎಂಡ ವಾಚ ಕಂಪನಿಯ ರಜಿಸ್ಟರ್ಡ ಎಜಂಟ್ಸ ಇರುತ್ತೇವೆ. ವ್ಹಿ. ಪಿ. ಮುಖಾಂತರ ತರಿಸಿಕೊಳ್ಳುವವರು ೧/೪ ಹಣ ಅಡ್ವಾನ್ಸ ಕಳಿಸಬೇಕು.

ಅಯ್ಯನಗೌಡರ ಆ್ಯಂಡ ಗುಡಿ.

ವಾಚ ಮರ್ಚಂಟ್ಸ ಆ್ಯಂಡ ಕಮಿಶನ್ ಏಜಂಟ್ಸ, ನಾಮಜೋಶಿ ರೋಡ್, ಗದಗ

ಧಾರವಾಡದಿಂದ ಗದಗ ಮಾರ್ಗವಾಗಿ ಬೆಟಗೇರಿಗೆ ಮೋಟಾರ ಸರ್ವೀಸ.

ಸಾಂಪ್ರತ ಧಾರವಾಡದಿಂದ ದಿನಾಲು ಮುಂಜಾನೆ ೭ ಗಂಟೆಯಾದ ಮೋಟಾರ ಬಿಟ್ಟು ಗದಗ, ತಡಕೋಡ, ಕೊಟಬಾಗಿ ಕಲ್ಲಾಪುರದಿಂದ ಬೆಟಗೇರಿಗೆ ೯ ಗಂಟೆಗೆ ಮುಟ್ಟಿಸುವೆವು. ಅಲ್ಲಿಂದ ತಿರುಗಿ ಕೂಡಲೆ ಹೊರಟು ಕಚೇರಿಯ ವೇಳೆಗೆ ೧೦॥ ಗೆ ಧಾರವಾಡಕ್ಕೆ ತರುವೆವು. ಹೆಚ್ಚಿಗೆ ಪ್ರಾಸಂಜರು ಸಿಕ್ಕರೆ ಸಾಯಂಕಾಲದಲ್ಲಿ ಸಹ ಮೋಟಾರ ಬಿಡುವೆವು. ಧಾರವಾಡದಲ್ಲಿ ಮಾರ್ಕೆಟ ಧರ್ಮಶಾಲೆಯ ಹತ್ತರ ನಮ್ಮ ಜಾಗೆಯಿಂದ ಮೋಟಾರ ಬಿಡುವೆವು.

ಬೆಟಗೇರಿ ಎಜಂಟರು ಮಿ. ಶಮಶುದ್ದೀನ ಬಾಗೇವಾಡಿ ಮತ್ತು ಮಿ. ಹುಸೇನಸಾಹೇಬ ದೊಡಮನಿ ಇವರಲ್ಲಿ ಟಿಕೇಟುಗಳು ಮಾರಾಟಕ್ಕೆ ದೊರೆಯುವವು.

ಎಮ್. ಕೆ. ಸವದಾಗರ

ಧಾರವಾಡ

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಂದಿಗೆಯ ಅಧಿಕೃತ ಮೇಲಾಯಿ. ಚಿಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಯುವದು. ಕರೆಂಟ್ಹು ಮತ್ತು ಸೇವಿಂಗ ಡಿಪಾಜಿಟಗಳಿಗೆ ಚೆನ್ನಾಗಿ ಬಡ್ಡಿ ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ದೇಶಪಾಂಡೆ

ಮ್ಯಾನೇಜಿಂಗ ಡೈರೆಕ್ಟರ.

R. N. B 1443

ವಿಜಯ

ಸಾಪ್ತಾಹಿಕ — ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭) ಧಾರವಾಡ ಮಂಗಳವಾರ ತಾರೀಖು ೨೩ನೇ ಫೇಬ್ರುವರಿ ೧೯೨೬ (ಸಂಚಿಕೆ ೮

ವಿಜಯ.

ಧಾರವಾಡ ತಾ- ೨೨-೨-೨೬ ನೇ ಇಸ್ವಿ

ಬಂಗಾಲದ ಕೌನ್ಸಿಲದಲ್ಲಾದ ಕೋಲಾಹಲ.

ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷೀಯರು ಕೌನ್ಸಿಲದಿಂದ ಹೊರಬಿದ್ದು ಬಂದರು

ಬಂಗಾಲದ ಕಾಯದೆ ಕೌನ್ಸಿಲ ಸಭೆಯಲ್ಲಿ ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷೀಯರ ಗುಟ್ಟು ಒಳ್ಳೆ ಇರುತ್ತದೆಂಬದು ಸಂತೋಷದ ಸಂಗತಿಯು. ಇವರು ಸರಕಾರದ ಸ್ವಾರ್ಥೈಕ ದೃಷ್ಟಿಯಿಂದ ಬರುವ ಠರಾವುಗಳನ್ನು ಹರಿದು ಚಿಂದಿ ಮಾಡುವರು. ಮತ್ತು ನ್ಯಾಯತತ್ವಗಳಿಗೆ ವಿರುದ್ಧವಾಗಿ ಆಚರಿಸುವ ಅಧಿಕಾರಿಯ ದಾಕ್ಷಿಣ್ಯವಿಡದೆ, ಖಂಡತುಂಡಿನ ಉತ್ತರ ಕೊಡುವರು.

ಕಳೆದ ಬುಧವಾರದ ದಿವಸ ಬಂಗಾಲ ಇಲಾಖೆಯ ಚುನಾವಣೆಯು ಜನಸಂಖ್ಯೆಯ ಪ್ರಮಾಣದಿಂದ ಆಗಬೇಕೆಂದು ಸ್ವರಾಜ್ಯ ಪಕ್ಷದ ಓರ್ವ ಮುಸಲಮಾನ ಗೃಹಸ್ಥರು ಠರಾವು ತಂದರು. ಯುರೋಪಿಯನ್ನ, ಯುರೋಪಿಯನ, ಕ್ರಿಶ್ಚನ್ನ ಮೊದಲಾದ "ಅಲ್ಪ ಸಂಖ್ಯಾಕರ ಮತ್ತು ವರ್ತಕ ಸಂಘಗಳ ಯೋಗ್ಯ ಹಿತ ಸಂಬಂಧಗಳನ್ನು ಕಾಯ್ದುಕೊಂಡು" ಎಂಬದನ್ನು ಸೇರಿಸಬೇಕೆಂದು ಸರ ಅಬ್ದುಲ ರಹಿಮಾನರು ಉಪಸೂಚನೆ ತಂದರು. ಉಪಸೂಚನೆಯನ್ನು ಒಂದು ವಾರ ಮುಂಚಿತವಾಗಿ ಕಳಿಸಬೇಕಾಗುತ್ತದೆ. ನಿಂತಕಾಲಮೇಲೆ ಅಂಗೀಕರಿಸಲಿಕ್ಕೆ ಬರುವದಿಲ್ಲೆಂದು ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷೀಯರು ಅಕ್ಷೇಪಗೊಂಡರು. "ನಮಗೆ ಸಾರಾಸಾರ ವಿಚಾರದ ಅಧಿಕಾರವುಂಟು ಆ ಪ್ರಕಾರ ಈ ಸೂಚನೆಯನ್ನು ಅಂಗೀಕರಿಸುತ್ತೇನೆಂದು" ಅಧ್ಯಕ್ಷರಾದ ಕುಮಾರ ಶಿವಶಂಕರೇಶ್ವರರಾಯರು ಉತ್ತರ ಕೊಟ್ಟರು. ಈ ಉತ್ತರವೇ ಕೋಲಾಹಲಕ್ಕೆ ಕಾರಣ ಮೂಲವಾಯಿತು.

ಮೌಲ್ವಿ ಚವಧರಿ- ಉಪಸೂಚನೆಯನ್ನು ಅಂಗೀಕರಿಸುವದು ಸ್ವೇಚ್ಛಾಚಾರವಾಗುತ್ತದೆ.

ಅಧ್ಯಕ್ಷರು- ಮೌಲ್ವಿಸಾಹೇಬರೇ- ಹೀಗೆ ಇನ್ನೊಮ್ಮೆ ಅನ್ನರಿ ನೋಡುವಾ- ಈಗ ಅಂದದ್ದರ ಪುನರುಚ್ಚಾರಣೆ ಮಾಡಬೇಕೆಂದು ಮೌಲ್ವಿಯವರಿಗೆ ಹೇಳುತ್ತೇನೆ. ಮೌಲ್ವಿಯವರೇ ಏನೆಂದಿರಿ? ಅನ್ನರಿ

ಮೌಲ್ವಿ- ಇದು ಅಧ್ಯಕ್ಷರ ನಿರಂಕುಶ ಅಧಿಕಾರವೆಂದೆನು.

ಅಧ್ಯಕ್ಷ- ಈ ಮಾತನ್ನು ಹಿಂದಕ್ಕೆ ತಕ್ಕೊಳ್ಳಬೇಕೆಂದು ಮೌಲ್ವಿಯವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಇದು ಅಧ್ಯಕ್ಷರ ನಡೆನುಡಿಗೆ ಭಯಂಕರವಾದ ದೋಷಾರೋಪವಾಗುತ್ತದೆ. ಮೌಲ್ವಿಯವರ ವರ್ತನವು ಧಿಂಡತನದ್ದಾಗಿರುತ್ತದೆ. ಅದ್ದರಿಂದ ಈ ಸತ್ರದ ಮುಟ್ಟಿಗೆ ಇವರನ್ನು ಸಸ್ಪೆಂಡ ಮಾಡಿದ್ದೇನೆ. ಕೌನ್ಸಿಲದ ಹೊರಗೆ ಹೋಗಬೇಕು.

ಮೌಲ್ವಿ- ಮಹಾಸ್ವಾಮಿ- ಬಹಳೇ ಉಪಕಾರವಾಯಿತು. ನಿಮ್ಮ ಮನಸ್ಸಿಗೆ ಬಂದಂತೆ ಮಾಡಿರಿ. (ಕೂಡಲೆ ಸಭೆಯಲ್ಲಿ ಶೇಮ! ಶೇಮ!! ಎಂಬ ಶಬ್ದೋಚ್ಚಾರವಾಯಿತು.

ಅಧ್ಯಕ್ಷ- ದಾಕ್ತರ ಕುಮಾರ ಶಂಕರ ರಾಯವರು ಶೇಮ ಅಂಬದ್ದು ಧಿಂಡತನವೆಂದು ನನ್ನ ಅಭಿಪ್ರಾಯವಾಗಿದೆ, ಕಾರಣ ಇಂದಿನ ಮುಟ್ಟಿಗೆ ಇವರನ್ನೂ ಸಸ್ಪೆಂಡ ಮಾಡಿದ್ದೇನೆ. ಸಭೆ ಬಿಟ್ಟು ಎದ್ದು ಹೋಗತಕ್ಕದ್ದು.

ಶ್ರೀ ಸೇನಗುಪ್ತ- ಶೇಮ, ಶೇಮ ಎಂದು ಕೂಗಿದುದಕ್ಕೆ ಮೆಂಬರರನ್ನು ಹೊರಗೆ ಹಾಕುವ ಅಧ್ಯಕ್ಷರ ವರ್ತನವು ಕೇವಲ ಹುಡುಗಾಟಿಕೆಯದಾಗುತ್ತದೆ. ಶೇಮ ಎನ್ನುವದು ನ್ಯಾಯವಾದದ್ದಾಗಿದೆ ಪಾರ್ಲಮೆಂಟ ಸಭೆಯಲ್ಲಿಯೂ ಶೇಮವೆಂದು ಕೂಗುವದುಂಟು.

ಅಧ್ಯಕ್ಷ- ನನಗೆ ಹುಡುಗಾಟಿಕೆ ಎಂದೆಂದ ಶಬ್ದಗಳನ್ನು ಹಿಂದಕ್ಕೆ ತಕ್ಕೊಳ್ಳಬೇಕೆಂದು ಸೂಚಿಸುತ್ತೇನೆ.

ಶ್ರೀ ಹಲದಾರ- ಅಧ್ಯಕ್ಷರ ವರ್ತನವು ಹುಡುಗಾಟಿಕೆಯಲ್ಲದೆ ಬೇರೆಯಿಂದಿರುವದಿಲ್ಲ.

ಸೇನ- ಆಡಿದ ನುಡಿಯನ್ನು ಮರಳಿ ತಕ್ಕೊಳ್ಳುವದಿಲ್ಲ.

ಶ್ರೀ ಎ. ಸಿ. ಬ್ಯಾನರಜಿ- ಅಧ್ಯಕ್ಷರ ವರ್ತನವು ಹುಡುಗತನ ಮಾತ್ರವಲ್ಲದೆ, ಅಧಿಕಾರಸ್ಥಾನಕ್ಕೆ ಅಯೋಗ್ಯವಾದದ್ದಿರುತ್ತದೆ.

ಅಧ್ಯಕ್ಷ- ಬ್ಯಾನರಜಿಯವರೇ ನಿಮ್ಮ ಶಬ್ದಗಳನ್ನು ಹಿಂದಕ್ಕೆ ತಕ್ಕೊಳ್ಳಿರಿ.

ಬ್ಯಾನರಜಿ- ಒಂದು ಅಕ್ಷರ ಕೂಡ ಇಲ್ಲ, ಹೊರಟೆ, ನೋಡಿರಿ.

ದಾಸಗುಪ್ತ- ಅಧ್ಯಕ್ಷರ ವರ್ತನವು ಬಹುತೇಕವಾಗಿ ಹುಚ್ಚನಂತಿರುತ್ತದೆ.

ಅಧ್ಯಕ್ಷರು ಮೇಲಿನಂತೆ ಇವರಿಗೂ ಶಬ್ದವನ್ನು ಹಿಂದಕ್ಕೆ ತಕ್ಕೊಳ್ಳಲಿಕ್ಕೆ ಹೇಳಿದರು. ಆದರೆ ಇವರೂ ಬಂಟತನದಿಂದ ಸಭೆ ಬಿಟ್ಟು ಎದ್ದುಹೋದರು. ಬಳಿಕ ಅಧ್ಯಕ್ಷರು ಶ್ರೀ ದಾಸಗುಪ್ತರಿಗೂ ಮಾತು ಮರಳಿ ತಕ್ಕೊಳ್ಳಲಿಕ್ಕೆ ವಿನಂತಿ ಮಾಡಿಕೊಂಡರು. ಆದರೆ ಇವರು ಮಾತ್ರವಲ್ಲ; ಎರಡೂ ಪಕ್ಷದ ಎಲ್ಲ ಮೆಂಬರರು ಕೌನ್ಸಿಲ ಬಿಟ್ಟು ಎದ್ದು ಹೋದರು.

ಉಭಯ ಪಕ್ಷಗಳ ನಡುವೆ ರಾಜಿಯು ಸಂಧಾನ ನಡೆದಿದೆಂದು ಅನಂತರ ಬಂದ ಸುದ್ದಿಯಾಗಿದೆ.

ಶ್ರೀ. ಹೋಳಕರರ ವಿಚಾರಣೆಯು ಕಮೀಶನದ ಅಂತರಂಗ ಬಹಿರಂಗವು.

—o—

ಬಾವಲಾ ಪ್ರಕರಣದಲ್ಲಿ ಹಿಂದುಸ್ಥಾನ ಸರಕಾರದವರು ಶ್ರೀ. ಹೋಳಕರರ ವಿಚಾರಣೆ ಮಾಡುವದಕ್ಕಾಗಿ ಒಂದು ಕಮಿಶನ ನೇಮಿಸುವರೆಂದು ೧೫ ದಿವಸಗಳ ಹಿಂದೆ ಪ್ರಸಿದ್ಧವಾದ ಸಂಗತಿಯು ಸದ್ಯದಲ್ಲಿ ನೆನೆಗುದಿಗೆ ಬಿದ್ದಿರುತ್ತದೆ. ಈ ಕಮೀಶನದಲ್ಲಿ ಐವರು ಮೆಂಬರರಿರುವರಷ್ಟೇ; ಇವರಲ್ಲಿ ಇಬ್ಬರು ಸಂಸ್ಥಾನಿಕರು, ಇಬ್ಬರು ಹಾಯ ಕೋರ್ಟಿನ ಜಡ್ಜರು ಮತ್ತು ಸರಕಾರದ ಪಕ್ಷದಿಂದ ಪೊಲಿಟಿಕಲ ಖಾತೆಯ ಒಬ್ಬ ಯುರೋಪಿಯನ್ನರು ಈ ಪ್ರಕಾರ ಐವರ ನ್ಯಾಯಕೋರ್ಟು ಆಗುವದು. ಹಿಂದುಸ್ಥಾನ ಸರಕಾರದವರು ಪೊಲಿಟಿಕಲ ಖಾತೆಯ ಮುಖಾಂತರವಾಗಿಯೇ ಪೂರ್ವ ಸಿದ್ಧತೆಯನ್ನು ಮಾಡಿದ್ದಾರೆ. ಆದ್ದರಿಂದ ಇದೇ ಖಾತೆಯವರೇ ಒಬ್ಬ ಮೆಂಬರರೇಕೆ? ಎಂಬ ಪ್ರಶ್ನೆಯು ಸಹಜವಾಗಿ ಹೊರಡುತ್ತದೆ. ಇದಲ್ಲದೆ ಕಮಿಟಿಯಲ್ಲಿ ಇಬ್ಬರು ಹಿಂದೂ ಮತ್ತು ಮೂವರು ಯುರೋಪಿಯನ್ನರಾಗುವದು ವಿಷಮವಾಗುತ್ತದೆ. ಮೂವರು ಹಿಂದೂ ಇಬ್ಬರು ಯುರೋಪಿಯನ್ನರೇಕೆ ಆಗಬಾರದು?

ಈ ಕಮಿಟಿಯಲ್ಲಿ ಬಾವಲಾ ಕೊಲೆಗೆ ಸಂಬಂಧಿಸಿದ ಆರೋಪಗಳನ್ನು ಮಾತ್ರ ವಿಚಾರ ಮಾಡದೆ, ಹೊಸ ಹೀಗೆ ಕೂಡ ಹಳೇ ಕೀರಣ್ಣ ತೆಗೆಯುವರೆಂದು ಸಂಶಯ ಬಂದದ್ದರಿಂದ ಮಹಾರಾಜರು ಕಮೀಶನದ ನೇಮಣೂಕಿಯ ಪ್ರಶ್ನಕ್ಕೆ ಸಮ್ಮತಿ ಕೊಡುವದಕ್ಕೆ ದಿನಮೇಕ ಮಾಡುತ್ತಿದ್ದಾರೆಂದು ಸುದ್ದಿಯುಂಟು. ಮೊದಲು ಬಾವಲಾದ ಇತ್ಯರ್ಥ ತಿಳಕೊಳ್ಳಬೇಕು. ಅನಂತರ ಬೇರೆ ಅನ್ಯ ಅಪರಾಧಗಳನ್ನು ಸ್ವತಂತ್ರ ರೀತಿಯಿಂದ ಅವುಗಳ ಬಗ್ಗೆ ವಿಚಾರ ಮಾಡುವದು ವಿಹಿತವಾಗುತ್ತದೆ. ಇಲ್ಲವಾದರೆ- ಒಂದರೊಳಗೊಂದು ಕೂಡಿಸುವದು ತೋರುವು ಕುರುಮುರೀ ಮೂರಿದ ನ್ಯಾಯವಾಗುವದು. ರಾಜ್ಯಕಾರಭಾರದಲ್ಲಿ ಮಹಾರಾಜರಿಂದ ಅಂಥ ಘನ ಅಪರಾಧಗಳಾಗಿದ್ದರೆ- ಈ ವರೆಗೆ ಸರಕಾರವು ಸುಮ್ಮನೇಕೆ ಕೂತಿತು? ಅದರ ದೋಷವು ತಾನಾಗಿ ಸರಕಾರಕ್ಕೇ ಬರುವದು.

ಹಿಂದೆ ಕಮೀಶನದ ಮುಖಾಂತರ ಆದಂಥ ವಿಚಾರಣೆಗಳಲ್ಲಿ ಸಂಸ್ಥಾನಿಕರ ಮೇಲೆ ಆರೋಪ ಹೊರಿಸಿದ್ದರೂ, ಅವರು ಪದಭ್ರಷ್ಟರಾಗಿದ್ದಾರೆ. ಇದಕ್ಕೆಲ್ಲ ಸರಕಾರದ ಮನಸ್ಸಿನಲ್ಲಿರುವ ಕುನುಸೇ ಕಾರಣ. ಇವಲ್ಲದೆ ಸರಕಾರದ ಒತ್ತಾಯದ ಮೂಲಕ ಅನೇಕರು ತಾವಾಗಿ ರಾಜ್ಯತ್ಯಾಗ ಮಾಡಿದ್ದಾರೆ. ಇವೆಲ್ಲ ಅನ್ಯಾಯಯಾಕ್ರಮಗಳು ಕರ್ಜನಸಾಹಿಗೆ ಒಪ್ಪುವಂತಾದವು. ಇದು ಸ್ವರಾಜ್ಯ ಸ್ವಾತಂತ್ರ್ಯದ ಕಾಲವು. ಸಂಸ್ಥಾನಿಕರು ಹಕ್ಕುಗಳನ್ನು ಕಾಯ್ದುಕೊಳ್ಳುವದಲ್ಲದೆ, ಅನ್ಯರ ಹಂಗಿನೊಳಗಿರದೆ, ವ್ಯಕ್ತಿ ಸ್ವಾತಂತ್ರ್ಯ ಮತ್ತು ವಿಚಾರ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವ ಕಾಲವಾಗಿದೆ. ಬಾವಲಾ ಪ್ರಕರಣದ ಹೊರತು ಬೇರೆ ಅಪರಾಧಗಳನ್ನು ಸೇರಿಸುವದಾದರೆ- ಸಂಸ್ಥಾನಿಕರು ಮೆಂಬರರಾಗುವದನ್ನೇ ಹಿತ ಪಡಿಸುವದೇ ತಮ್ಮ ಹಾಗು ಸಂಸ್ಥಾನಗಳ ಗೌರವ ಪ್ರತಿಷ್ಠೆಯನ್ನು ಕಾಯ್ದುಕೊಂಡಂತಾಗುತ್ತದೆ.

ಇಂದೂರಿನ ಸುದ್ದಿ—

ಶ್ರೀ. ಹೋಳಕರ ಮಹಾರಾಜರು ರಾಜ್ಯತ್ಯಾಗ ಮಾಡುವರೋ? ಕಮೀಶನದ ಮುಂದೆ ಆರೋಪಿಯಾಗಿ ನಿಲ್ಲುವರೋ? ಎಂಬದು ಇನ್ನೂ ಪೂರಾ ತಿಳಿದಿಲ್ಲ. ಸ್ವೇಚ್ಛೆಯಿಂದ ಪದತ್ಯಾಗ ಮಾಡಬೇಕೆಂಬ ವಿಚಾರದಿಂದ ಕಮೀಶನದ ನೇಮಣೂಕಿಯ ವಿಷಯವಾಗಿ ತಮ್ಮ ಮತವನ್ನು ಇನ್ನೂ ಹಿಂದುಸ್ಥಾನ ಸರಕಾರಕ್ಕೆ ತಿಳಿಸಿಲ್ಲೆಂದು ಲಂಡನದ ವರ್ತಮಾನ ಪತ್ರಗಳು ತರ್ಕ ಮಾಡಿವೆ. ಈ ತರ್ಕದ ಕೂಡ ಲಾರ್ಡ ಸಿಂಹರು ಮಹಾರಾಜರ ಪಕ್ಷದಿಂದ ಕೆಲಸ ನಡಿಸುವರೆಂದು ವರ್ತಮಾನ ಬಂದಿದೆ. ಇದೇ ವೇಳೆಯಲ್ಲಿ ಬಾವಲಾ ಕೊಲೆಯ ಹಿಂದೆ ನಿಂತ ಜನರ ಮೇಲೆ ಕೆಲಸ ನಡಿಸುವಿರಾ ಎಂದು ಕೌನ್ಸಿಲ ಅಫ ಸ್ಟೇಟದಲ್ಲಿ ಮಾಡಿದ ಪ್ರಶ್ನಕ್ಕೆ, ಈ ಮೊದಲು ಜಾಹೀರ ಮಾಡಿದ ಸುದ್ದಿಗಿಂತ ಹೆಚ್ಚಿಗೆ ಹೇಳಲಾಗದೆಂದು ಉತ್ತರ ಕೊಡಲ್ಪಟ್ಟಿರುತ್ತದೆ. ಮೂರೂ ಮೂರು ತರಹವಾಗಿರುತ್ತವೆ.

ಸ್ವಾರ್ಥ ಮತ್ತು ಪಾರಮಾರ್ಥ.

—c—

ಮುಂಬಯಿಯ ಹತ್ತರ ಕಾಂದಿಪ್ವಲಿ ಎಂಬಲ್ಲೊಂದು ಗೋರಕ್ಷಣ ಸಂಸ್ಥೆಯುಂಟು. ಈ ಸಂಸ್ಥೆಯವರು ಗೋರಕ್ಷಣದಿಂದ ಸ್ವಾರ್ಥ ಮತ್ತು ಪಾರಮಾರ್ಥವನ್ನೆರಡೂ ಸಾಧಿಸುವರು. ಈ ಸಭೆಯಲ್ಲಿ ೭೧ ಆಕಳುಗಳುಂಟು. ಪಾಂಜರಪೋಳದಂಥ ಕೇವಲ ಪಾರಮಾರ್ಥ ಸಾಧನೆಗಾಗಿ ಪೋಷಿಸಲ್ಪಡುವಂಥವಲ್ಲ. ಧಷ್ಟಪುಷ್ಟವಾಗಿ ಹಾಲು ಬೆಣ್ಣೆಯನ್ನು ಕೊಡುವಂಥವು ಹೋದವರ್ಷ ೭ವುಗಳ ಹಾಲಿನಿಂದಲೇ ೮೦ ಸಾವಿರ ರೂಪಾಯಿ ಪ್ರಾಪ್ತಿಯಾಗಿದೆ. ಗೋಶಾಲೆಗಾಗಿ ಎಳುಸಾವಿರ ರೂಪಾಯಿ ವೆಚ್ಚ ಬಂದಿದೆ. ಉಳಿದ ವೆಚ್ಚವನ್ನು ಹೋರಿಗಳನ್ನು ಮಾರಿ, ಬಾಯಿಗೂಡಿಸುವರೆ. ವರ್ಷ ವರ್ಷಗಳಲ್ಲಿ ಈ ಸಭೆಯು ಬೆಳೆಯುತ್ತಾ ಹೋದರೆ- ಗೋರಕ್ಷಣವು ಹೇಗೆ ಸ್ವಾರ್ಥ [illegible] ಪಾರಮಾರ್ಥವಾಗುವದೆಂಬದು ತಿಳಿದು ಬರುವದು. ಕಾಂದಿಪ್ವಲಿಯಲ್ಲಿ ಬೇಕಾದಷ್ಟು ಹುಲ್ಲಿನ ಫುಲವತಿಯುಂಟು. ದನಗಳ ಮೇಯಿಸುವ ಐನೂರು ಎಕರೆ ಅಡವಿಯು ಇವರ ವಶದಲ್ಲುಂಟು. ಮಳೆಯು ಬೇಕಾದಷ್ಟು ಆಗಿ, ಹುಲ್ಲಿನ ಕೊರತೆ ಇರುವದಿಲ್ಲ. ಹತ್ತರವೇ ಮುಂಬಯಿ ಇರುವದರಿಂದ ಹಾಲಿಗೆ ಉತ್ತಮ ಧಾರಣೆ ಬರುವದು. ಗ್ರಾಮಸ್ಥಿತಿ ಮತ್ತು ಪರಿಸ್ಥಿತಿಯು ಪೂರಾ ಅನುಕೂಲವಾಗಿರುವದರಿಂದ ಗೋರಕ್ಷಣೆಯು ಉತ್ತಮ ತರದಿಂದ ನಡೆದಿದೆ ಈ ಶಾಲೆಯಲ್ಲಿ ಶಾಸ್ತ್ರೀಯ ಸುಧಾರಣೆಯ ಎಲ್ಲ ನಿಯಮಗಳನ್ನು ಪಾಲಿಸುತ್ತಿರುವರು. ಗೋರಕ್ಷಣೆ ಮಾಡತಕ್ಕವರಿಗೆ ಇದೊಂದು ಮಾದರಿ ತಕ್ಕಂಥ ಸಂಸ್ಥೆಯಾಗಿರುತ್ತದೆ.

ಸಮಾಜ ಮತ್ತು ರಾಜಕೀಯ ಬದಮಾಷ-

ಕ್ರಿಮಿನಲ ಪ್ರೊಸೀಜರ ಕೋಡಿನ ೧೦೯ ನೇ ಕಲಮಿನನ್ವಯ ಸಮಾಜ ಕಂಟಕರಾದ ಬದಮಾಷರ ವರ್ಗದಲ್ಲಿ ರಾಜಕೀಯ ಉಚ್ಚತರವಾದ ಧ್ಯೇಯವುಳ್ಳಂಥ ಗೃಹಸ್ಥರನ್ನು ಸೇರಿಸಿ, ಇಬ್ಬರಿಗೂ ಜಾಮೀನು ಮುಚ್ಚಳಿಕೆ ಬೇಡುವರು. ಬದಮಾಷ ಜನರು ಜಾಮೀನು ದೊರೆಯದಿದ್ದರೇ [illegible] ರಂಗಕ್ಕೆ ಹೋಗುವರು. ಆದರೆ ರಾಜಕೀ[illegible]ಯಲ್ಲಿ ಸೇರಿದವರು ಸರಕಾರದ ಕೃತ್ಯವನ್ನು ನಿಷೇಧಿಸುವದೇ ಮುಖ್ಯ ಕರ್ತವ್ಯವೆಂದು ಜಾಮೀನು ಕೊಡುವಂಥ ಯೋಗ್ಯ[illegible]ದರೂ, ಗಟ್ಟಿಗತನದಿಂದ ತುರಂಗಕ್ಕೆ ಹೋಗುವರು. ಸರಕಾರದವರು ಬಂಗಾರ ಮತ್ತು ಬೆಳ್ಳಿಯನ್ನು ಒಂದೇ ಯೋಗ್ಯತೆಯದಾಗಿ ತಿಳಿದು, ಇಬ್ಬರಿಗೂ ಸಶ್ರಮ ಶಿಕ್ಷೆ ವಿಧಿಸುತ್ತಾ ಬಂದರು. ಆದರೆ ಈ ಮೊದಲು ಬರೆದಂತೆ ಅಸೆಂಬ್ಲಿಯಲ್ಲಿ ಈ ಕಲಮಿನನ್ವಯ ಶಿಕ್ಷೆ ಹೊಂದಿದವರಿಗೆ ಸಾದಾ ಶಿಕ್ಷೆ ಕೊಡಬೇಕೆಂಬ ಠರಾವು ಪಾಸಾಯಿತು. ಈ ಠರಾವು ಸರಕಾರದ ಮೇಲೆ ಶಹ ಕೂಡಿಸಿದಂತಾಯಿತು. ಈ ಶಹ ತಪ್ಪಿಸಿಕೊಳ್ಳುವದಕ್ಕಾಗಿ ಸರ ಮುದಿಮನಸಾಹೇಬರು ದುರಸ್ತಿಯ ಬಿಲ್ಲನ್ನು ತಂದು ರಾಜಕೀಯ ಕೈದಿಗಳಿಗೆ ಸಾದಾ ಶಿಕ್ಷೆ ಕೊಡುವಂತೆ ಸರಕ್ಯೂಲರ (ಒಟ್ಟಪ್ಪಣೆ) ತೆಗೆಯುತ್ತೇವೆಂದು ಅಸೆಂಬ್ಲಿಗೆ ಆಶ್ವಾಸನ ಕೊಟ್ಟ ಬಳಿಕ, ಶಹ ಎಬ್ಬಿಸಲ್ಪಟ್ಟಿತು. ಈ ಸಮಯದಲ್ಲಿ ಸರಕಾರವು ಸೋತು ನಡೆದಂತೆ ಮಿಕ್ಕ ವಿಷಯಗಳಲ್ಲಿಯೂ ತಗ್ಗಿ ನಡೆದರೆ, ಅಸಂತೋಷವು ತಾನಾಗಿ ಲಘುವಾಗುವದು.

ನೇಪಾಳದ ಮಹಾರಾಜರಾದ ಶಮಶೇರ ಜಂಗಬಹಾದ್ದೂರರವರು ಹಿಂದೂ ಮಹಾಸಭೆಯ ಅಧ್ಯಕ್ಷರಾಗಲೊಪ್ಪಿದ್ದಾರೆ.

ಆಗ್ರಾದಲ್ಲಿ ಆರ್ಯ ಸಮಾಜದವರಿಗೂ ಮುಸಲಮಾನರಿಗೂ ಹೊಡದಾಟವಾಗಿ ಆರು ಜನರು ಘಾಯ ಹೊಂದಿದರು.

ಧಾರವಾಡ—

ಡಿಸ್ಟ್ರಿಕ್ಟ ಮ್ಯುನಿಸಿಪಾಲ್ಟಿಯ ಹೊಸ ಕಾಯದೆಪ್ರಕಾರ ರಾಜಕೀಯ ಕೈದಿಗಳಾದಂಥವರು ಮ್ಯುನಸಿಪಾಲಿಟಿ ಲೋಕಲಬೋರ್ಡುಗಳ ಚುನಾವಣೆಯಲ್ಲಿ ಉಮೇದವಾರರಾಗುವಂತೆ ಹಿಂದುಸ್ಥಾನ ಸರಕಾರದ ಮಂಜೂರಿ ಬಂದಂತೆ ತಿಳಿಯುತ್ತದೆ.

ಹೋಳೀ ಹಬ್ಬದ ರಜೆ—

ವಾರ್ಷಿಕ ಪದ್ಧತಿ ಪ್ರಕಾರ ಹೋಳೀ ಹಬ್ಬದ ದೆಸೆಯಿಂದ ವಿಜಯದ ಮುಂದಿನ ಮಂಗಳವಾರದ ವಾರಪತ್ರಿಕೆಯು ಪ್ರಕಟಿಸಲ್ಪಡಲಾರದು.

ಕರ್ನಾಟಕದ ದುರ್ದೈವವು.

ಹಿಂದುಸ್ಥಾನದಲ್ಲಿರುವ ೧೮ ದೇಶಗಳಲ್ಲಿ ಕನ್ನಡ ನಾಡಿನಷ್ಟು ದುರ್ಭಾಗ್ಯ ದೇಶವು ಇನ್ನೊಂದು ಇಲ್ಲವಿಲ್ಲ. ಈ ದೇಶವು ಐದು ಭಾಗವಾಗಿ ಹಂಚಿ ಹೋಗಿದೆ. ಇಬ್ಬರು ಸಂಸ್ಥಾನಿಕರು, ಒಬ್ಬ ರೆಸಿಡೆಂಟರು ಮತ್ತು ಇಬ್ಬರು ಗವರ್ನರರು ಆಳುತ್ತಿದ್ದಾರೆ. ಸಂಸ್ಥಾನಿಕರಲ್ಲೊಬ್ಬರು ಸರಭೂಷ(?) ಮತ್ತು ಪರದುಶೀಯರಾಗಿ(?) ಅವರಿಗೆ ಕನ್ನಡ ಅಥವಾ ಬೇರೆ ದೇಶ ಭಾಷೆಗಳ ಪೂರ್ಣ ಅಭಿಮಾನವಿರುವದಿಲ್ಲ. ಈ ರೀತಿಯಾಗಿ ಐದು ಭಾಗವಾಗಿ ಹೋಗಿ, ಆಯಾ ಭಾಗಗಳ ರಾಜ್ಯಕಾರಭಾರವು ಬೇರೆ ಬೇರೆಯಾಗಿರುವದರಿಂದ, ಕನ್ನಡಿಗರೆಂಬುವರಿಗೆ ಪರಸ್ಪರ ಸಹಾಯ ಮತ್ತು ಸಹಾನುಭೂತಿಯ ಸಂಬಂಧವೆಷ್ಟೂ ಉಳಿದಿರುವದಿಲ್ಲ. ಈ ಸಂಬಂಧ ಮತ್ತು ಭಾಷಾಭಿಮಾನವು ಜಾಗೃತವಾಗಿ, ಕರ್ನಾಟಕದ ಏಕೀಕರಣವಾಗಬೇಕಾದರೆ ಕರ್ನಾಟಕವೆಂಬುದು ಒಂದು ಮಂಡಲವಾಗಬೇಕೆಂದು ಪ್ರಜರಿಗೆ ಮಾತ್ರವಲ್ಲ; ಬ್ರಿಟಿಶ ಸರಕಾರಕ್ಕೆ ಸಹ ಅನ್ನಿಸಿತ್ತು. ಮಾಂಟೆಗ್ಯು-ಚೆಲ್ಮ್ಸ್‌ಫೋರ್ಡ ಸುಧಾರಣೆ ಬರುವ ಮುಂಚೆಯಾಗಿ ೧೯೧೭ ನೇ ಇಸವಿಯಲ್ಲಿ ಭಾಷೆಯ ಪ್ರಕಾರ ಪ್ರಾಂತ ರಚನೆಯಾಗಬೇಕೆಂಬ ತತ್ವವನ್ನು ಸರಕಾರದವರು ಒಪ್ಪಿದ್ದಾರೆ. ಇದರ ಕುರುಹಾಯಾ ಅರ್ವಾಚೀನ ಸುಧಾರಣೆಯಲ್ಲಿ ಇದೊಂದು ಮುಖ್ಯ ವಿಷಯವಾಗಿರುತ್ತದೆ. ಈ ಪ್ರಕಾರ ಸರಕಾರದವರು ಓರಿಯಾ ದೇಶವನ್ನು ಒಂದು ಮಾಡಿದರು. ಆಂಧ್ರರು ಸ್ವತಂತ್ರ ಇಲಾಖೆ ಮಾಡಿಕೊಳ್ಳುವ ಉದ್ಯೋಗ ಪ್ರಾರಂಭಿಸುವರು. ಓರಿಯಾ ಮತ್ತು ಆಂಧ್ರಕ್ಕಿಂತ ವಿಶಿಷ್ಟವಾದ ಕರ್ನಾಟಕವನ್ನು ಒಂದು ಮಾಡುವದು ಸರಕಾರದ ಕರ್ತವ್ಯವು. ಸರಕಾರವು ತನ್ನ ಕರ್ತವ್ಯ ಮರೆತರೂ, ಪ್ರಜರು ಸರಕಾರವನ್ನು ಎಚ್ಚರಿಸಿ ಹೋದರೆ ಸರಕಾರವು ಅಡ್ಡ ತಿಡ್ಡ ಉತ್ತರ ಕೊಟ್ಟು, ಪ್ರಜರನ್ನು ನಿರಾಶೆಪಡಿಸುವದು ಅತ್ಯಂತ ದುಃಖದ ಸಂಗತಿಯು.

ಕರ್ನಾಟದ ಏಕೀಕರಣವಾಗಬೇಕೆಂದು ನಾಗಪೂರದ ಕಾಂಗ್ರೆಸದ ವೇಳೆಯಿಂದ ಚಳವಳಿ ನಡೆದಿರುತ್ತದೆ. ಮಹಾತ್ಮಾ ಗಾಂಧಿಯವರು ಕರ್ನಾಟಕಕ್ಕೆ ಸ್ವತಂತ್ರ ಸರಕಲ(?) ಮಾಡಿಕೊಟ್ಟಿದ್ದಾರೆ. ಈ ಅಧಿಕಾರ ಸ್ವಾತಂತ್ರ್ಯದಿಂದಲೇ ಬೆಳಗಾವಿಯಲ್ಲಿ ಕಾಂಗ್ರೆಸ ಸಭೆಯನ್ನು ಕೂಡಿಸುವ ಪಕ್ಕ(?) ದೊರೆಯಿತು. ಬೆಳಗಾವಿಯಲ್ಲಿ ಕಾಂಗ್ರೆಸ ಕೂಡಿದಾಗ್ಗೆ ಕರ್ನಾಟಕ ಏಕೀಕರಣದ ಸಂಘಸ್ಥಾಪನೆಯಾಯಿತು. ಅನಂತರ ಕರ್ನಾಟಕ ಮಂಡಲದ ತುಂಬ ಸತತವಾದ ಚಳವಳ ನಡೆದಿದೆ. ಬಳ್ಳಾರಿ ಜಿಲ್ಲೆಗೆ ಸೇರಿದ ಕನ್ನಡ ನಾಡನ್ನು ಆಂಧ್ರದಲ್ಲಿ ಕೂಡಿಸಕೂಡದೆಂದು ಕನ್ನಡಿಗರದೊಂದು ಡೆಪ್ಯುಟೇಶನವು ಮದ್ರಾಸದ ಗವರ್ನರ ಸಾಹೇಬರ ಕಡೆಗೆ ಹೋಯಿತು. ಮುಂಬಯಿ ಇಲಾಖೆಯ ಕಾಯದೆ ಕೌನ್ಸಿಲದಲ್ಲಿ ಈ ಬಗ್ಗೆ ಠರಾವು ತರಲು, ಇದು ಪ್ರಾಂತಿಕ ಸರಕಾರದ ವಿಷಯವಲ್ಲ. ಹಿಂದುಸ್ಥಾನ ಸರಕಾರದ ಕೆಲಸವೆಂದು ಉತ್ತರ ಕೊಟ್ಟು, ಠರಾವಿಗೆ ಸಂಮತಿ ಕೊಡಲಿಲ್ಲ. ಕರ್ನಾಟಕಕ್ಕಾಗಿ ಒಂದು ಯುನಿವರ್ಸಿಟಿಯನ್ನು ಸ್ಥಾಪಿಸಬೇಕೆಂದು ಮುಂಬಯಿ ಕೌನ್ಸಿಲದಲ್ಲಿ ಠರಾವು ಬರತಕ್ಕದ್ದಿದೆ. ಮೈಸೂರವನ್ನು ಸೇರಿಸಿಕೊಂಡು ಅಖಿಲ ಕರ್ನಾಟಕ ವಿಶ್ವವಿದ್ಯಾಲಯ ಮಾಡಬೇಕೆಂಬ ವಿಚಾರವೂ ನಡೆದಿದೆ. ಕರ್ನಾಟಕವೆಲ್ಲ ಒಂದಾಗಬೇಕೆಂಬ ಸಕಲ ವಿಧದಿಂದಲೂ ಪ್ರಯತ್ನೋಪಾಯಗಳು ನಡೆದಿರುವಾಗ, ಹಿಂದುಸ್ಥಾನ ಸರಕಾರದ ಗೃಹಮಂತ್ರಿಯಾದ ಮೆ. ಕ್ರೇರಾರ ಸಾಹೇಬರು ಕೌನ್ಸಿಲ ಅಫ ಸ್ಟೇಟದಲ್ಲಿ " ಇದಕ್ಕೆ ಮೊದಲು ಪ್ರಬಲವಾದ(?) ಮತ್ತು ಬಲವಾದ ಲೋಕಮತ ಬೇಕು. ಮತ್ತು ಮೂಲದಲ್ಲಿ ಇಲಾಖೆಯ ಕೌನ್ಸಿಲಗಳಲ್ಲಿ ಈ ಬಗ್ಗೆ ಠರಾವು ಆಗಬೇಕು " ಎಂಬದಾಗಿ ಹೇಳಿ ಠರಾವನ್ನು ನಾಮಂಜೂರ ಮಾಡಿಸಿಬಿಟ್ಟರು. ಮುಂಬಯಿ ಇಲಾಖೆಯಲ್ಲಿ ಠರಾವು ಬಂದಾಗ ಇದು ಹಿಂದುಸ್ಥಾನ ಸರಕಾರದ ಕೆಲಸವೆಂದರು. ಈ ವಿಷಯವನ್ನು ಡಾ. ರಾಮರಾಯರು ಸಾಹೇಬರ ಧ್ಯಾನಕ್ಕೆ ತಂದುಕೊಟ್ಟರೂ, ಸಾಹೇಬರು ತಮ್ಮ ಮಾತನ್ನು ಎಷ್ಟು ಹಿಂದಕ್ಕೆ ತೆಗೆದುಕೊಳ್ಳದಿದ್ದದ್ದು ಆಶ್ಚರ್ಯವಲ್ಲವೇ?

ಡಾ. ಯು. ರಾಮರಾಯರು ಕಳೆದ ಬುಧವಾರ ದಿವಸ ಈ ಬಗ್ಗೆ ಹಾಗೆ ಅಧಿಕೃತವಾದ ಬಹುಮುಖವಿರುವಂಥ ಕಮಿಟಿ ನೇಮಿಸಬೇಕೆಂದು ಠರಾವನ್ನು ಕೌನ್ಸಿಲ ಅಫ ಸ್ಟೇಟದಲ್ಲಿ ತಂದರು. ಠರಾವಿನ ಮೇಲೆ ಚರ್ಚೆ ನಡೆದಾಗ ಚುನಿತ ಮೆಂಬರರಿಗಿಂತ ಹೆಚ್ಚು ಜನರಿದ್ದಿಲ್ಲ. ಡಾಕ್ಟರ ರಾಮರಾಯರು ಭಾಷಣ ಮಾಡಿದ ಕೂಡಲೆ, ಸರ ಉಮರ ಹಯಾತಖಾನ ಸಾಹೇಬರು ಠರಾವನ್ನು ವಿರೋಧಿಸಿದರು. ಸರಕಾರ ಪಕ್ಷದ ಯುರೋಪಿಯನ್ನ ಮೆಂಬರರು " ಕನ್ನಡಿಗರಲ್ಲಿ ಪ್ರಬಲವಾದ ಆದರವಿಲ್ಲ. ಲೋಕಮತದ ಅಪೇಕ್ಷೆ ಇಲ್ಲ " ಎಂಬದಾಗಿ ಅಪ್ರಸ್ತುತ ಮತ್ತು ಲೋಕ ವಿಲಕ್ಷಣವಾದ ಭಾಷಣಗಳನ್ನು ಮಾಡಿ, ದುಗ್ಗನ ದೊಡ್ಡ ಅಡಚಣಿ ತೋರಿಸಿದರು. ಮುಂ ಬ ಯಿ ಇ ಲಾ ಖೆ ಯ ಮ … ದ ಮಿ. ಹಾಲಸನ್ನವರೆಂಬವರೂ ಮಿ. ಕ್ರೇರಾರ ಸಾಹೇಬರಂತೆಯೇ ಪ್ರತಿಧ್ವನಿ ತೆಗೆದು ಕನ್ನಡಿಗರಲ್ಲಿ ಬಲವಾದ ಲೋಕಪ್ರಿಯವಾದಂಥ ಬೇಡಿಕೆಯೇ ಇಲ್ಲೆಂದರು. ಇದರಿಂದ ಸಾಹೇಬರು ಎಂದಾದರೂ ಕನ್ನಡ ನಾಡನ್ನು ನೋಡಿದುವರೇ ಎಂಬ ಸಂಶಯಬರುತ್ತದೆ. ಹೀಗಾಗಿ ಡಾಕ್ಟರ ರಾಮರಾಯರೊಬ್ಬರೇ ಮೂಲ ಠರಾವಿನ ಪುರಸ್ಕರ್ತರಾದ್ದರಿಂದ, ಹೋಟು ತೆಗೆದುಕೊಳ್ಳುವ ಶ್ರಮ ಸಹ ಮಾಡುವ ಪ್ರಸಂಗ ಬರದೆ, ಠರಾವು ನಾಮಂಜೂರಾಯಿತು.

ಡಾಕ್ಟರ ರಾಮರಾಯರು ಠರಾವು ತಂದ ವೇಳೆಯು ಕನ್ನಡಿಗರಿಗೆ ರಾಹುಕಾಲವಾಗಿತ್ತೆಂದು ಹೇಳಬಹುದು. ಕೌನ್ಸಿಲ ಅಫ ಸ್ಟೇಟದಲ್ಲಿ ೧೮ ಜನರು ಸ್ವರಾಜ್ಯ ಪಕ್ಷೀಯರಾಗಿದ್ದಾರೆ. ಠರಾವು ಬಂದಾಗ ಇವರಾರೂ ಸಭೆಯಲ್ಲಿದ್ದಿಲ್ಲದ್ದರಿಂದಲೇ ನಾಮಂಜೂರಾಯಿತು. ಕರ್ನಾಟಕದ ದುರ್ದೈವವೇ ಸರಿ. ಇವರು ಸರ ಶ್ರೀನಿವಾಸ … ಹೇಳಿಕೆಯ ಪ್ರಕಾರ ಈ ಠರಾವನ್ನು ಮುಂಬಯಿ ಮತ್ತು ಮದ್ರಾಸದ ಕೌನ್ಸಿಲದಲ್ಲಿ ತಂದು, ಪಾಸ ಮಾಡಿಕೊಂಡು, ಅಸೆಂಬ್ಲಿ ಮತ್ತು ಕೌನ್ಸಿಲ ಅಫ ಸ್ಟೇಟಕ್ಕೆ ಹೋಗಬೇಕು. ಆದರೆ ಆಗ ಬರುವ(?) ನೂತನ(?) ಕೌನ್ಸಿಲದ ತನಕ ತಡೆಯಬೇಕೆಂದು ಸೂಚಿಸುತ್ತೇವೆ.

ಕೌನ್ಸಿಲ ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷೀಯರ ಉಮೇದವಾರಿಯು.

ಕಾನಪೂರದಲ್ಲಿ ಕೂಡಿದ ಕಾಂಗ್ರೆಸ ಸಭೆಯಲ್ಲಿ ಸ್ವರಾಜ್ಯ ಪಕ್ಷವು ಕಾಂಗ್ರೆಸದ ಒಂದು ಮುಖ್ಯ ಅವಯವವಾಯಿತು. ರಾಜಕೀಯ ಆಂದೋಲನದ ಸಮಸ್ತ ಭಾರವು ಈ ಪಕ್ಷದ ಮೇಲೆ ಬಿತ್ತು. ಮತ್ತು ಕೌನ್ಸಿಲ ವಿರೋಧಿಗಳು ಕೂಡ ಇದಕ್ಕೆ ಸಂಪೂರ್ಣ ಸಹಾಯ ಮಾಡುವಂತೆ ವಚನ ಸಿಕ್ಕಿತು. ಆದ್ದರಿಂದಲೇ ಹಿಂದುಸ್ಥಾನದಲ್ಲಿ ನಡೆದಿರುವ ಉಪ-ಚುನಾವಣೆಗಳಲ್ಲಿ ಕೌನ್ಸಿಲ ವಿರೋಧಿಗಳು ಸ್ವರಾಜ್ಯ ಪಕ್ಷದ ಉಮೇದವಾರರಿಗೆ ಮನಃಪೂರ್ವಕವಾಗಿ ನೆರವಾಗುತ್ತಿದ್ದಾರೆ.

ಬರುವ ನವ್ಹೆಂಬರ ತಿಂಗಳಲ್ಲಾಗುವ ಚುನಾವಣೆಯ ಜ್ವರವು ಕೆಲ ಕೆಲವರಿಗೆ ಈಗಿನಿಂದಲೇ ಹತ್ತಿದೆ. ಆದುದರಿಂದ ಲೋಕಮತಕ್ಕೆ ಯೋಗ್ಯ ಚಾಲನೆ ಕೊಡುವದಕ್ಕೆ ತಡ ಮಾಡಿದರೆ ಚುನಾವಣೆಯು ಸಮೀಪಿಸಿದಂತೆ ವಿನಾಕಾರಣ ಹೆಚ್ಚು ತ್ರಾಸವಾಗಬಹುದೆಂದು ಕಾಂಗ್ರೆಸಾಂತರ್ಗತರಾದ ಸ್ವರಾಜ್ಯ ಪಕ್ಷೀಯರು ಈಗಿನಿಂದಲೇ ಲೋಕಮತದ ಪ್ರವಾಹವು ಸರಳವಾಗಿ ಹರಿಯುವಂತೆ ಕರ್ತವ್ಯದಕ್ಷರಾಗಿದ್ದಾರೆ.

ಪ್ರತಿಯೊಂದು ಸ್ಥಳವನ್ನು ಸ್ವರಾಜ್ಯವಾದಿಗಳೇ ಆಕ್ರಮಿಸಬೇಕೆಂದು ಅಭಿಲಾಷೆಪಡುವದು ಸ್ವಾಭಾವಿಕವು. ಆ ಪ್ರಕಾರ ಅವರ ಪ್ರಯತ್ನವೂ ಇರುತ್ತದೆ. ಎಲ್ಲ ಸ್ಥಳಗಳ ದೆಸೆಯಿಂದ ಪ್ರಯತ್ನ ಮಾಡಿದಾಗ ಕೊನೆಯಲ್ಲಿ ಬಹುಮತವಾದರೂ ದೊರೆಯುವದು. ಬಹುಮತವೆಂದರೂ ಒಂದೇ! ಎಲ್ಲ ಸ್ಥಳಗಳನ್ನು ಹಿಡಕೊಳ್ಳುವದೂ ಒಂದೇ!

ಸ್ಥಾನಿಕ ಮಹತ್ವ ದೃಷ್ಟಿಯಿಂದ ಕೆಲವರು ಸ್ವರಾಜ್ಯ ಪಕ್ಷಕ್ಕೆ ಸೇರದೆ, ಸ್ವತಂತ್ರ ವೃತ್ತಿಯಿಂದಿರಬೇಕೆನ್ನುತ್ತಾರೆ. ಪಂಡಿತ ಮದನಮೋಹನ ಮಾಲವೀಯರವರು ಕಾಂಗ್ರೆಸದ ಭಕ್ತರಾದರೂ, ಸ್ವತಂತ್ರರೆಂಬ ಅಭಿಮಾನಪಡುವರು. ಸರಕಾರ ಮತ್ತು ಸ್ವರಾಜ್ಯ ಪಕ್ಷದ ನಡುವೆ ಪ್ರಸಂಗೋಚಿತವಾದ(?) … ಮಾಡಿಸಲು ನಾರದರಂತೆ ತಾವು ಉಭಯತರಿಗೂ ಪ್ರಿಯರಾಗಿರಬೇಕೆಂಬದೇ ಇವರ ಮನೀಷೆಯು. ಇಂಥವರ ಚುನಾವಣೆಯೂ ಅನಿವಾರ್ಯವಾಗುತ್ತದೆ. ಆದ್ದರಿಂದ ಪ್ರತಿಯೊಂದು ಇಲಾಖೆಯಲ್ಲಿ ನಾಲ್ಕೆಂಟು ಜನರು ಈ ತೆರವಾಗಿ ಆರಿಸಲ್ಪಡತಕ್ಕವರಾಗುತ್ತಾರೆ. ಇಂಥವರಿಗೆ ಸ್ವರಾಜ್ಯ ಪಕ್ಷೀಯರು ತಮ್ಮಿಂದಾದಷ್ಟು ಅನುಕೂಲತೆ ಮಾಡಿಕೊಡುತ್ತಾರೆ. ಮುಖ್ಯವಾದ ಕಟಾಕ್ಷವು ಲಿಬರಲರೆಂಬ ಮವಾಳರ ಮೇಲುಂಟು. ಅವರು ಮಾತ್ರ ಚುನಾವಣೆಯಲ್ಲಿ ಹೋರೆ ಮುಂದೆ ಮಾಡಿಕೊಂಡು ಬರದಂತೆ ಮತದಾರರು ಎಚ್ಚರಾಗಿರತಕ್ಕದ್ದು.

ಮುಂಬಯಿ ಕರ್ನಾಟಕ ಪ್ರಾಂತದಲ್ಲಿ ಮವಾಳರು ಇಲ್ಲವೇ ಇಲ್ಲ. ಅವರ ಬದಲಾಗಿ ಮವಾಳರಂತಾಗಿರುವ ಕೆಲ ಬ್ರಾಹ್ಮಣೇತರರು ಮಾತ್ರ ಉಮೇದವಾರರಾಗುವರು ಇಂಥವರಿಗೆ ಆಶ್ರಯ ಕೊಡದಿದ್ದರಾಯಿತು. ಸ್ವರಾಜ್ಯ ಪಕ್ಷವೇ ಯಶಸ್ವಿಯಾಗುವದು.

ಬ್ರಾಹ್ಮಣೇತರರ ವರ್ತನವು ಎಷ್ಟು ಅನ್ಯಾಯ್ಯವಾಗಿರುತ್ತದೆಂಬದು ಕಳೆದ ವಾರದಲ್ಲಿ ಮದ್ರಾಸದಲ್ಲಿ ನಿಚ್ಚಳವಾಗಿ ತೋರಿತು. ದರೆ(?) ಹಿಂದಿಯ(?) ಅಂಗಡಿಗಳನ್ನು ೨೦ ಅಥವಾ ೩೦ ವರ್ಷಗಳಲ್ಲಿ ಬಂದು ಮಾಡುವಂತೆ ವಚನ ಕೊಡಿರೆಂಬ ಠರಾವು ತರಲು ಮಂತ್ರಿಗಳು ಅದನ್ನು ಸಹಾನುಭೂತಿಯಿಂದ ಸಹ ನೋಡದೆ, ಧಿಕ್ಕರಿಸಿದರು. ಇದೇ ಮಂತ್ರಿಗಳ ಮುಂದೆ ಮತ್ತು ಅಧ್ಯಕ್ಷತೆಯಲ್ಲಿ ಹತ್ತು ವರ್ಷಗಳಲ್ಲಿ ಈ ವ್ಯಸನವು ಪೂರಾ ಬಂದಾಗಬೇಕೆಂದು ಅಮರಾವತಿಯ ಬ್ರಾಹ್ಮಣೇತರ ಸಭೆಯಲ್ಲಿ ಠರಾವು ಪಾಸಾಗಿದೆ. ಆ ಠರಾವಿಗೂ ತಮ್ಮ ವರ್ತನಕ್ಕೂ ಬಾದರಾಯಣ ಸಂಬಂಧ ಕೂಡ ಇಲ್ಲವೆಂಬಂತೆ ತೋರಿಸಲು ಮಂತ್ರಿಗಳು ನಟಿಸಿದ್ದಾರೆ. ಸುದೈವದಿಂದ ಇವರ ಸಹಾಯಾಗುವದಿಲ್ಲೆಂದು ಈ ಮೊದಲು ಕಂಡುಬಂದ ಉದಾಹರಣೆಗಳಲ್ಲಿ ಇದೊಂದು ತೀರ ಬಿಸಿ ಬಿಸಿ ಉದಾಹರಣೆಯಾಗಿರುತ್ತದೆ.

ಶ್ರೀ. ಆರ. ರಡ್ಡಿ ಮೊದಲಾದವರು ಬ್ರಾಹ್ಮಣೇತರರಷ್ಟೇ; ಹೋದ ವರ್ಷ ಇವರು ಸಂಪೂರ್ಣವಾಗಿ ಕಾಂಗ್ರೆಸದ ತತ್ವಗಳನ್ನು ಅಂಗೀಕರಿಸಿದ್ದಿಲ್ಲ. ಸ್ವರಾಜ್ಯ ಪಕ್ಷದ ಮೆಂಬರರು ಸಹಿತವಾಗಿ ಒಂದು ಸಂಯುಕ್ತ ಮಂಡಲವನ್ನು ಮಾಡಿಕೊಂಡಿದ್ದರು. ಇಂಥ ಸಹಕಾರಯುಕ್ತ(?) ವಿಲಕ್ಷಣವನ್ನು ಬಿಟ್ಟು, ಇವರೆಲ್ಲರೂ ಕಾಂಗ್ರೆಸದ ಧ್ಯೇಯವನ್ನು ಒಪ್ಪಿ, ಸ್ವರಾಜ್ಯ ಪಕ್ಷವನ್ನು ಕೂಡಿಕೊಂಡರೆಂದು ನಿನ್ನೆ ಬಂದ ವರ್ತಮಾನವಾಗಿರುತ್ತದೆ. ಇವರೆಲ್ಲರೂ ಒಂದಾದದ್ದು ಮಂತ್ರಿಗಳಿಗೆ ಕೊನೆಯ ಮಂಗಳಾರತಿಯಾಗುವದೆಂದು ಹೇಳುವಂಥ ಭವಿಷ್ಯವೇ ಸರಿ.

ಸ್ವರಾಜ್ಯ ಪಕ್ಷಕ್ಕೆ ತತ್ವದ ಅಭಿಮಾನವೇ ಮುಖ್ಯವಾದದ್ದು. ಜಾತಿಯ ಶ್ರೇಷ್ಠಾಶ್ರೇಷ್ಠತೆಯು ಗೌಣವಾದದ್ದು. ಮುಂಬಯಿ ಕರ್ನಾಟಕ ಪ್ರಾಂತದಲ್ಲಿ ಸ್ವರಾಜ್ಯ ಪಕ್ಷದ ದೀಕ್ಷೆ ತಕ್ಕೊಂಡು ಉಮೇದವಾರರಾಗಿ ಬರುವಂಥವರನ್ನು ಕುಲ ವಿಚಾರ ಮಾಡದೆ, … ಕೊಡುವದೇ ಒಂದು ಕರ್ತವ್ಯವು. ನಾಗಪೂರದಲ್ಲಾದ ಚುನಾವಣೆಯಲ್ಲಿ ಬ್ರಾಹ್ಮಣೇತರರಾದ ಶ್ರೀ. ಅಭ್ಯಂಕರರಿಗೇ(?) ಬಹುಮತ ದೊರೆತಿದೆ. ಬ್ರಾಹ್ಮಣೇತರರಿಗೆ ಕೌನ್ಸಿಲದಲ್ಲಿ ಆರಿಸಲ್ಪಡಬೇಕೆಂಬ ಕುತೂಹಲವಿದ್ದರೆ ಮೊದಲು ಸ್ವರಾಜ್ಯ ಪಕ್ಷದ ದೀಕ್ಷೆ ತಕ್ಕೊಂಡು, ಚುನಾವಣೆಯ ಮಂಡಲದಲ್ಲಿ ಸಜ್ಜು ಹೊಡೆದು ನಿಲ್ಲಬೇಕೆಂದು ಮುಂದಾಗಿ ಸೂಚಿಸುತ್ತೇವೆ.

ವಾರನ ಹೆಸ್ಟಿಂಗ್ಸನ ಅವತಾರ-

ಮುಂಬಯಿಯ ಗವರ್ನರರಾಗಿದ್ದ ಸರ ಲಾಯಿಡ ಜಾರ್ಜ ಸಾಹೇಬರು ಈಗ ಈಜಿಪ್ತದ ಹಾಯ ಕಮೀಶನರರಾಗಿ ಲಾರ್ಡರಾಗಿದ್ದಾರೆ. ಇವರು ಈ ಇಲಾಖೆಯ ದೊರೆತನದಲ್ಲಿ ಮುಂಬಯಿಯಲ್ಲಿ ಬ್ಯಾಕಬೇ ದಂಡೆಯನ್ನು ಹಬ್ಬಿಸುವದಕ್ಕಾಗಿ ಹತ್ತಾರು ಕೋಟಿ ರೂಪಾಯಿಗಳನ್ನು ತಿರಿಗಿ ಬರದಂತೆ ಸಮುದ್ರದಲ್ಲಿ ಹಾಕಿದರು. ಈಗಿನ ಸರಕಾರದವರು ಪ್ರತಿವರ್ಷ ೨೨ ಲಕ್ಷ ರೂಪಾಯಿಗಳನ್ನು ತೋಟಾಖಾತೆಗೆ ಬರೆಯಬೇಕೆಂದಿದ್ದಾರೆ. ವಾರನ ಹೆಸ್ಟಿಂಗಸಾಹೇಬನು ಕಂಪನಿ ಸರಕಾರದ ದುಡ್ಡು ಹಾಳು ಮಾಡಿದ ಅಪರಾಧಕ್ಕಾಗಿ ಪಾರ್ಲಮೆಂಟದ ವಿಚಾರಣೆಗೆ ಗುರಿಮಾಡಲ್ಪಟ್ಟನು. ಇದೇ ಪ್ರಕಾರ ಬ್ಯಾರನ ಲಾಯಿಡಸಾಹೇಬರನ್ನು ನ್ಯಾಯಾಸನದ ಮುಂದೆ ಎಳೆಯಬೇಕೆಂದು ಕೌನ್ಸಿಲ ಮೆಂಬರರಾದ ಮೆ. ನರಿಮನ್ನಸಾಹೇಬರೆಂದಿರುತ್ತಾರೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯಲ್ಲಾದ ಠರಾವುಗಳು.

ಕಳೆದ ರವಿವಾರ ಮತ್ತು ಸೋಮವಾರ ದಿವಸ ಈ ಊರಲ್ಲಿ ಕೂಡಿದ್ದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯಲ್ಲಿ ಕೆಳಗಿನ ಠರಾವುಗಳು ಪಾಸಾಗಿರುತ್ತವೆ.

೧ ಕರ್ನಾಟಕ ಏಕೀಕರಣದ ದೆಸೆಯಿಂದ ಪ್ರಯತ್ನ ಮಾಡತಕ್ಕದ್ದು. ಇದಕ್ಕಾಗಿ ಈ ಮೊದಲೇ ಮಂಜೂರ ಮಾಡಿದ್ದ ಎರಡು ಸಾವಿರ ರೂಪಾಯಿಗಳನ್ನು ವೆಚ್ಚ ಮಾಡತಕ್ಕದ್ದು. ಅಧ್ಯಕ್ಷರಾದ ಶ್ರೀ. ಕೌಜಲಗಿ ಶ್ರೀನಿವಾಸರಾಯರು ತಮ್ಮ ಸಂಗಡ ಒಬ್ಬರನ್ನು ಕರಕೊಂಡು ಹೋಗತಕ್ಕದ್ದು.

೨ ಆಯಾ ಜಿಲ್ಲೆಗಳಲ್ಲಿ ಕಾಂಗ್ರೆಸದ ಡೆಲಿಗೇಟರೇ ಆರಿಸಲ್ಪಡುವಂತೆಯೂ, ಕಾಂಗ್ರೆಸ ಕಮಿಟಿಗಳನ್ನು ಪುನರುಜ್ಜೀವನ ಮಾಡುವಂತೆಯೂ ಕಾರ್ಯ ಪ್ರಾರಂಭ ಮಾಡತಕ್ಕದ್ದು.

೩ ಧಾರವಾಡದ ರಾಷ್ಟ್ರೀಯ ವಿದ್ಯಾಲಯಕ್ಕೆ ೩೦೦, ಪ್ರಾಂತಿಕ ಭಗಿನಿಮಂಡಲಕ್ಕೆ ೩೦೦, ಗದಗ, ಸಿದ್ದಾಪೂರ ಮತ್ತು ಹಾನಗಲ್ಲಿನ ರಾಷ್ಟ್ರೀಯ ಶಾಲೆಗಳಿಗೆ ಐವತ್ತೈವತ್ತು ರೂಪಾಯಿಗಳ ಗ್ರಾಂಟು ಕೊಡತಕ್ಕದ್ದು.

೪ ಮೇ ತಿಂಗಳಲ್ಲಿ ಬಳ್ಳಾರಿಯಲ್ಲಿ ಕೂಡುವ ಕರ್ನಾಟಕ ಪ್ರಾಂತಿಕ ಪರಿಷತ್ತಿಗಾಗಿ ಮೆ. ಹಾರ್ನಿಮನ, ಶ್ರೀ. ಶ್ರೀನಿವಾಸ ಅಯ್ಯಂಗಾರ ಮತ್ತು ರಾವಸಾಹೇಬ ಡಾಕ್ಟರ ಯು. ರಾಮರಾವ ಇವರಲ್ಲಿ ಒಬ್ಬರನ್ನು ಅಧ್ಯಕ್ಷರಾಗುವಂತೆ ವಿನಂತಿ ಮಾಡಿಕೊಳ್ಳತಕ್ಕದ್ದು.

೫ ಕರ್ನಾಟಕದಲ್ಲಿ ಖಾದಿಯ ಪ್ರಸಾರ ಮಾಡಲೋಸುಗ ಅಖಿಲ ಭಾರತೀಯ ನೂಲುವ ಸಂಘದ ಏಜಂಟರಾದ ದೇ. ಗಂಗಾಧರರಾಯರಿಗೆ ಮ್ಯಾಜಿಕ ಲ್ಯಾಂಟರ್ನ ಮತ್ತು ಅದರ ಉಪಕರಣಗಳನ್ನು ತರಿಸುವದಕ್ಕಾಗಿ ಮುನ್ನೂರು ರೂಪಾಯಿಯ ಸಹಾಯ ಮಾಡತಕ್ಕದ್ದು.

೬ ಶ್ರೀ. ಮುದ್ಧವರಾವ(?) ಕೆಂಭಾವಿಯವರು ಕರ್ನಾಟಕ ಏಕೀಕರಣದ ಬಗ್ಗೆ ಒಂದು ಪುಸ್ತಕ ಬರೆದು, ಅದನ್ನು ಬಳ್ಳಾರಿಯಲ್ಲಿ ಕೂಡುವ ಪ್ರಾಂತಿಕ ಸಭೆಯ ಮುಂದಿಡತಕ್ಕದ್ದು.

ಹಿಂದುಸ್ಥಾನವು ಆನಿಬಿಸೆಂಟಮ್ಮನವರ ಮಾತೃಭೂಮಿಯು.

ಹಿಂದುಸ್ಥಾನವನ್ನು ತಾಯಿನಾಡಾಗಿ ತಿಳಿಯುತ್ತೇವೆಂದು ಅಮ್ಮನವರು ಅನೇಕ ಸಾರೆ ಕಡಿ ತೋರಿಸಿದ್ದಾರೆ. ಮೊನ್ನೆ ಮೊನ್ನೆ ಕರಾಚಿಯಲ್ಲಿ ಈ ಅಭಿಮಾನವನ್ನು ಕುರಿತು ಕೆಳಗೆ ಕೊಟ್ಟಂತೆ ಭಾಷಣ ಮಾಡಿದ್ದಾರೆ:—

ಹಿಂದುಸ್ಥಾನಕ್ಕೆ ಬರುವ ಮುಂಚಿತವಾಗಿಯೇ ನನಗೆ ಈ ದೇಶದ ವಿಷಯವಾಗಿ ಅಭಿಮಾನ ಹುಟ್ಟಿತ್ತು. ವಿಲಾಯತಿಯಲ್ಲಿದ್ದಾಗಲೇ ಪ್ರಾಚೀನ ಇತಿಹಾಸ ಮತ್ತು ವಾಙ್ಮಯದ ಅಭ್ಯಾಸ ಮಾಡಿದ್ದೆನು. ಇಲ್ಲಿಗೆ ಬಂದ ಕೂಡಲೆ ನನಗೆ ಜನ್ಮಭೂಮಿಗೆ ಬಂದಷ್ಟು ಆನಂದವಾಯಿತು. ಪೂರ್ವಜನ್ಮದಲ್ಲಿ ಆರ್ಯಳಾಗಿದ್ದೆನೆಂಬ ಭಾವನೆಯು ನನ್ನಲ್ಲಿ ನೆಲೆಗೊಂಡಿದೆ. ದೇವರ ಅವತಾರಗಳಲ್ಲಿ ನನ್ನ ನಂಬಿಗೆಯುಂಟು. ಈ ಜನ್ಮದಲ್ಲಿ ನನ್ನ ಮೈದೊಗಲು ಬಿಳಿ … ಯಾಗಿರುವದಕ್ಕೆ ಕಾರಣವುಂಟು. ಸ್ವರಾಜ್ಯ ಚಳವಳಿಯು ಪ್ರಾರಂಭವಾದಾಗ- ಜನರು ಕರೆದೊಗಲಿನವರಿಗಿಂತ ಬಿಳಿದೊಗಲಿನವರ ಮಾತನ್ನೇ ಮುಖ್ಯವಾಗಿ ಕೇಳುತ್ತಿದ್ದರು. ಆದ್ದರಿಂದ ನನ್ನ ತೊಗಲು ಬಿಳಿಯದಾಯಿತು. ಆದರೆ ಈಗ ವಿಚಾರಕ್ರಾಂತಿಯಾಗಿ ಆ ಬಿಳಿದೊಗಲು ಸ್ವರಾಜ್ಯ ಕಾರ್ಯದಲ್ಲಿ ಪ್ರತಿಕೂಲವಾಗಿರುತ್ತದೆ. ಆದರೂ ನನಗೆ ಈ ಬಗ್ಗೆ ಆನಂದವಾಗಿರುವದು. ಹಿಂದುಗಳಿರಾ- ಸ್ವರಾಜ್ಯದ ಭಾರವನ್ನು ಸಂಪೂರ್ಣವಾಗಿ ನೀವೇ ಹೊರುವಿರಾ ಅಥವಾ ನನಗೆ ಒಪ್ಪಿಸುವಿರಾ. ಎಂಬುದನ್ನು ಹೇಳಿರಿ.

ಸರ ಪುಟ್ಟಣಶೆಟ್ಟರು ಸರ ಪದವಿ ಭೂಷಿತರಾದ ಬಗ್ಗೆ ಬೆಂಗಳೂರಿನ ಸೆಂಟ್ರಲ ಕೋ. ಅಪರೇಟಿವ್ಹ ಬ್ಯಾಂಕಿನವರು ಅವರಿಗೆ ಮಾನಪತ್ರ ಕೊಡುವರು.

ವಿವಿಧ ವರ್ತಮಾನಗಳು

ಲಾರ್ಡ ರೀಡಿಂಗಸಾಹೇಬರು ಲಿಬರಲರಿದ್ದಾರೆ. ಕಾನ್ಸರವೇಟಿವ್ಹರನ್ನು ಕೂಡಿಕೊಳ್ಳುವರೆಂದು ಲಂಡನದಲ್ಲಿ ವರ್ತಮಾನವಾಯಿತು. ಇದು ಶೀಲಿಗೆಸ್ಸಿ ಸುಳ್ಳು ಎಂದು ಅವರ ಚಿರಂಜೀವನು ಪ್ರಸಿದ್ಧ ಪಡಿಸಿದ್ದಾನೆ.

ಚಿಂಪೀ ಲೋಕಮತದ ವಿರುದ್ಧ ಸರಕಾರದ ವರು ಕಲ್ಕತ್ತಿ ಕಮೀಟಿ ನೇಮಿಸಿದೆರಷ್ಟೇ; ಅದಕ್ಕೆ ಬೇಕಾದ ಮೂರು ಲಕ್ಷ ರೂಪಾಯಿಗಳ ವೆಚ್ಚವನ್ನು ಮಂಜೂರ ಮಾಡಬಾರದೆಂದು ಸ್ವರಾಜ್ಯ ಮತ್ತು ಸ್ವರಾಜ್ಯ ಪಕ್ಷದವರು ವಾದಮಾಡಿಕೊಂಡಿದ್ದಾರೆ.

ಕಲಕತ್ತೆಯಲ್ಲಿ ನಾವಿಕ ವ್ಯಾಪಾರ ಮಾಡ, ಮಥ ಒಂದು ಕಂಪನಿಯು ಹಾಯಿಕೆಸ್ಟಲಲ್ಲಿ ನಾವ್ವ ರ. [illegible] ಮಾಡಿಗಳನ್ನು [illegible] ಆಡುವರೆಂಬ ಆರೋಪದಿಂದ ದಸ್ತಗಿರ ಮಾಡಿದ್ದಾರೆ.

[illegible]

[illegible]

ಆ ಕಂಪನಿಯ [illegible]

[illegible]

[illegible]

ಸನ್. [illegible]

ಮುಂಬಯಿಯಲ್ಲಿ [illegible] ತಿಳಿಸಲಾಯಿತು.

ಪಂಗಾಬದ ಗವರ್ನರರಾದ ಲಾರ್ಡ ಲಿಟನ ಸಾಹೇಬರು ದಿಲ್ಲಿಗೆ ಹೋಗಿದ್ದಾರೆ.

ಸರ ಕೆ. ವಿ. ರೆಡ್ಡಿಯವರು ಇಂಡಿಯಾ ಕೌನ್ಸಿಲದ ಮೆಂಬರರಾಗುವರು; ಸರ ಎಸ್. [illegible] ಎಕ್ಸಿಕ್ಯುಟಿವ ಕೌನ್ಸಿಲದ ಮೆಂಬರರಾಗುವರು. ಮತ್ತು [illegible] ಆಗುವರೆಂದು ಮದ್ರಾಸಿನಲ್ಲಿ ವರ್ತಮಾನವುಂಟು.

ಮುಂಬಯಿ ಯುನಿವ್ಹರ್ಸಿಟಿಯ ಚುನಾವಣೆಯಲ್ಲಿ ಡಾಕ್ಟರ ಪರಾಂಜಪೆಯವರಿಗೆ [illegible] ಮತ್ತು ಡಾಕ್ಟರ ದೇಶಮುಖರಿಗೆ [illegible] ಮತಗಳು ಬಿದ್ದು ಡಾಕ್ಟರ ಪರಾಂಜಪೆಯವರು ಆರಿಸಲ್ಪಟ್ಟರು. ಸ್ವರಾಜ್ಯ ಪಕ್ಷದ ಅಪೇಕ್ಷಿತ ಪ್ರತಿಯೋಗಿ ಸೋತುಹೋದರು.

ಲಂಡನದಿಂದ ಪ್ಯಾರಿಸಪಟ್ಟಣಕ್ಕೆ ಹೋಗುತ್ತಿದ್ದ ಒಂದು ಉಗಿಬಂಡಿಗೆ ಬೆಂಕಿ ಹತ್ತಿ, ಅಂಚೆಯ ಆಫೀಸು [illegible] ವರ್ತಮಾನಪತ್ರಗಳ ಪಾರ್ಸಲಗಳು ಸುಟ್ಟುಹೋದವು.

ಕೌನ್ಸಿಲ ಆಫ ಸ್ಟೇಟದಲ್ಲಿ ಸರ [illegible] ಹೇಳಿದ ಸ್ವರಾಜ್ಯದ ವಿಷಯವಾಗಿ ರಾಜ್ಯದ ಏಕೆಂದು ನೇಮಿಸುವ ಕುರಿತು ಠರಾವಿನ [illegible] ಆಗಬೇಕಾಗಿತ್ತು. ಸರ [illegible] ಮುದ್ದತು ತ ಕ್ಕೊಂಡಿದ್ದಾರೆ; ಪ್ರಸಂಗದಿಂದ ಪೂರ್ವ ಪುಣ್ಯವನ್ನು [illegible]

ಶ್ರೀ. ಜೆ. [illegible] ಮತ್ತು ಶ್ರೀ. [illegible] ವ್ಯಾಪಾರ ಪ್ರಾಂತ ದಲ್ಲಿ ವಿಶೇಷವಾಗಿ ಮಲೆನಾಡಿನಲ್ಲಿ ಖಾದಿ ಪ್ರಸಾರ ಮಾಡುವದಕ್ಕಾಗಿ ಸಂಚಾರ ಮಾಡುತ್ತಿದ್ದಾರೆ.

ಒಕ್ಕಲಿಗರಿಗೆ ಸುವಾರ್ತೆ — ಅಪೂರ್ವ ಲಾಭ

ರೆಂಟೆಯ ಕರ್ಯರ್ತನ್ನು.

ತಾ॥ [illegible] ಬುಧರಕಟ್ಟಿ (ಬುಧರಗಟ್ಟಿ) ಗ್ರಾಮದಲ್ಲಿ ತಾರೀಖು ೯-೧೦ ಮಾರ್ಚ ೧೯೨೭ ಈ ದಿವಸಗಳಲ್ಲಿ ಕಬ್ಬಿಣ ರೆಂಟೆಗಳನ್ನು ಹೂಡುವ ಕರ್ಯರ್ತನ್ನು ಇಡಲ್ಪಟ್ಟಿರುತ್ತದೆ. ಅದಕ್ಕೋಸುಗ ಕೆ.ಜಿ. [illegible] ಪ್ರತ್ಯಕ್ಷವಾಗಿ [illegible] ಬೇಕು.

ರೆಂಟೆಯನ್ನು ಹೊಡೆಯುವದರ ಸಂಪೂರ್ಣ ಮಾಹಿತಿಗಾರರಿದ್ದೇವೆ. ಮತ್ತು [illegible] ಪ್ರತ್ಯಕ್ಷ ಪ್ರಯೋಗವನ್ನು ಮಾಡಿ ತೋರಿಸಲಾಗುವದು.

ಕರ್ಯರ್ತಿನ [illegible]

[illegible]

ಈ ಕರ್ಯರ್ತಿನ ಪ್ರಯೋಗಗಳು [illegible]

[illegible]

ಮತ್ತು ಈ ಕರ್ಯರ್ತಿನ ದಿವಸಗಳಲ್ಲಿ [illegible] ಬುಧರಕಟ್ಟಿಯ [illegible]

ಈ ಪ್ರಸಂಗದ ಲಾಭವನ್ನು ಪಡೆದುಕೊಳ್ಳಬೇಕೆಂದು ವಿನಂತಿ.

ಸ್ವಾಗತ ಮಂಡಳ

ಗ್ರಾಮಸ್ಥರು ಮೊದಲಾದವರು

ಸದ್ಭಾವುಕ್ಷೇಮಿ
ಹೆಡಾಕ್ಟರ ಹನ್ನಬಸವ ಹಿರೇಮಠ,
ಬುಧರಗಟ್ಟಿ

ಕಿರ್ಲೋಸ್ಕರ ಬ್ರದರ್ಸ ಕಂಪನಿ ಇವರ
ಕೆ. ೪, ೬, ೮, ಪಟ್ಟಿನ ೪ ಪ್ರಕಾರದ

ವತನದಾರ ರೆಂಟೆಗಳು



ಹೆಚ್ಚಿನ ಮಾಹಿತಿ ಬಗ್ಗೆ ಕ್ಯಾಟಲಾಗ ತರಿಸಿಕೊಳ್ಳಿರಿ
ಕಿರ್ಲೋಸ್ಕರ ಬ್ರದರ್ಸ ಕಂ. [illegible]
[illegible], ಧಾರವಾಡ

ಊದುಬತ್ತಿಗಳು

ನಮ್ಮಲ್ಲಿ ಎಲ್ಲಾ ವಿಧವಾದ ಊದುಬತ್ತಿಗಳು ಸೇರು ೧ಕ್ಕೆ ೧-೦-೦ [illegible] ಲಾಭಿಸುವವು. [illegible] ಪರಿಮಳದ [illegible] ಭೃಂಗಾಮಲಕ ತೈಲ, ದಂತಮಂಜನ, [illegible] ಮುಂತಾದ ಸುಗಂಧ ದ್ರವ್ಯಗಳು ಸುಲಭ ಕ್ರಯಕ್ಕೆ ದೊರೆಯುತ್ತವೆ. ಬೇಕಾದವರು ನಮಗೆ ಆರ್ಡರ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಬಿ. ಎಲ್. ಉಪಾಧ್ಯಾಯ ಆಂಡ ಸನ್ಸ
ಸುಗಂಧಾಧಿಕಾರಿ ವ್ಯಾಪಾರಸ್ಥರು.

ಮಾತಾಡುವ ಔಷಧವು.

ಅಪ್ಪಾ! ಮಾತಾಡುವದಿಲ್ಲೇಕೆ! ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ! ತಲೆನೋವೋ! ಹಲ್ಲುನೋವೋ! ಮೈಯಲ್ಲಿ ನೋಯುತ್ತಿದೆಯೋ! ಆಗಿರುವದಾದರೂ ಏನು!

ಅಪ್ಪನು— ಕಂದಾ— ಹೌದು ಮೈಯೆಲ್ಲಾ ನೋಯುತ್ತದೆ.

ಕಂದ— ಹಾಗಾದರೆ ಸೋಮೇಂಟ ಕ್ಯಾಯುರ ತರಿಸಿಕೊಳ್ಳಿ. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಡ್ರುವಿ ಕಿಮ್ಮತ್ತು [illegible] ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುತ್ತೇವೆ.

ವಿಳಾಸ— ಕರ್ನಾಟಕ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ
[illegible]

ವ್ರಣಸಂಹಾರ

ಅಥವಾ

ಘಾಯದ ಮೇಲಿನ ಮಲಮು

ಈ ಮಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣ ಗಜ್ಜಿ, ಗರ್ಮಿ ಯ ಬಕ್ಕೆ, ಭಗೇಂದ್ರ, ಮುಂತಾದವುಗಳ ಮೇಲೂ ರಾಮಬಾಣ ಉಪಯೋಗವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಿರಬೇಕೆಂದು ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ. ಪರಸ್ಥಳದವರಿಗೆ ಅಂಚೆವೆಚ್ಚ ಬೇರೆ

ಹುಬ್ಬಳ್ಳಿಯ ಏಜೆಂಟರು:– ದಿ ಕರ್ನಾಟಕ ಮೆಡಿಕಲಸ್ಟೋರ್ಸ– ನೇಕಾರ ರೋಡ ಹುಬ್ಬಳ್ಳಿ ರೋಡ ಮತ್ತು ಕಿರಾಣಿ ಅಂಗಡಿಗಳಲ್ಲಿ ದೊರೆಯುವದು. | ಎನ. ಎಫ. ಪೆಂಟರ ಖಡೇಬಜಾರ ಬೆಳಗಾವಿ

ಟಿ. ಎಸ್. ಮೋಟಾರ ಸರ್ವ್ಹೀಸ

ಹುಬ್ಬಳ್ಳಿ.

ಶಿವರಾತ್ರಿ ಸಮಯದಲ್ಲಿ ಗೋಕರ್ಣಕ್ಕೆ ಹೋಗುವ ಪ್ರಯಾಣಿಕರ ಸೌಕರ್ಯಕ್ಕಾಗಿ

ತಾ॥ ೧—೩—೨೭ ರಿಂದ ರೆಗ್ಯುಲರ ಸರ್ವ್ಹೀಸ ಇಟ್ಟಿದೆ.

— ಕಾಲಕ್ರಮಗಳು —

೧.	ಹುಬ್ಬಳ್ಳಿ ಬಿಡುವದು ಬೆಳಗ್ಗೆ ೭ ಘಂಟೆ. ಮಧ್ಯಾಹ್ನ ೧೨ ಘಂಟೆ	ಗೋಕರ್ಣ ಸೇರುವದು ಸಾಯಂಕಾಲ ೫ ಘಂಟೆ ಬೆಳಗ್ಗೆ ೫ ಘಂಟೆ
೨.	ಗೋಕರ್ಣ ಬಿಡುವದು ಬೆಳಗ್ಗೆ ೭ ಘಂಟೆ	ಗೋಕರ್ಣ ಸೇರುವದು ಸಾಯಂಕಾಲ ೫ ಘಂಟೆ

ಹುಬ್ಬಳ್ಳಿ) [illegible]
ತಾ. ೧೦-೧-೧೯೨೭)

ಎಮ. ಮಂಜಪ್ಪಾ,
ಪ್ರೊಪ್ರಾಯಿಟರ.

ಬಿಗಿಪಿನ್ ಟಾಯಿಂಪೀಸ ದರ ರೂಪಾಯಿ ೯ | ರಿಸ್ಟವಾಚ ಚೆಕ್ ಜೂಪೆಲ್ಲ ಲಿವ್ಹರ ರೇಡಿಯಂ ದರ ರೂಪಾಯಿ ೧೫



ನಮ್ಮಲ್ಲಿ ಬೇಕಾದ ನಮೂನೆಯ ವಾಚ ಕ್ಲಾಕ, ಟಾಯಿಂಪೀಸ ಸ್ವಿಸ್ಸಿ ಸೆಕೊಂಡಹ್ಯಾಂಡ್ಸ ಸಿಗುತ್ತವೆ [illegible]

ಅರವಿಂದನಗೌಡರ ಟ್ರೇಡಿಂಗ ಕಂಪನಿ.

ವಾಚ ಮರ್ಚಂಟ್ಸ ಆಂಡ ಕಮಿಶನ ಏಜಂಟ್ಸ್, ನಾಮಜೋಶಿರೋಡ, ಗದಗ

ಜಾಹೀರ ನೋಟೀಸು

—೦—

ಈ ವರ್ಷ ಮುಪನೂರ ಜಾತ್ರೆಯಲ್ಲಿ [illegible] ಎಲ್ಲರೂ ಅನುಕೂಲವಾದ ಸ್ಥಳದಲ್ಲಿ [illegible]

[illegible]

ಕೊಳ್ಳಬಾರದು. ಹಾಗೂ ಅರ್ಧ ಬೆಲೆಗೆ [illegible] ಹೊಲದ ಪರವಾನಿಗೆ ಬೇಕಾಗಿದ್ದು ಇರುತ್ತದೆ.
ನವಲಗುಂದ ತಾ. ೧೫-೨-೨೭
ರಾಮಘಾವ ಶೋಧಿ | ಪಟ್ಟಣಗದರಾ ಪಾಟೀಲ
ನವಲಗುಂದ | [illegible] ದೇಸಾಯಿ
ವ್ಯಾಪಾರ ಚೇರಮನ | ಸ್ವಾಗತ ಕ. ಚೇರಮನ

ಶೋಕಗೀತಸಿಕ ವರ್ತನೆಗಳು.

[illegible]

ಮ್ಯಾನೇಜರ ವಿಜಯ ಧಾರವಾಡ

ವಿಜ್ಞಾಪನೆಯು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಮಾಡಲು ರಾಮಬಾಣ.

ಅಂಜರಾರ್ಕ ಬಿಂದು.

[illegible]

ಮ್ಯಾನೇಜರ ಅಂಜಿರಾರ್ಕ ಬಿಂದು ಆಫೀಸ,

[illegible]

ಎನ್. ಕೆ. ಶೇಸ್ತ್ರಿಯವರ

೧ ನೇ ನಂಬರಿನ ಬೀಡಿಗಳು.

[illegible]

ಎನ್. ಕೆ. ಶೆಟ್ಟಿ

C/o [illegible]

SIROMANI NARAYANACHARYA & CO
CHAUKAMBA, BENARES CITY [U. P.]

[illegible]

ಪತ್ತೆ:— ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ

ಚವಕಂಬಾ, ಬನಾರಸ (ಕಾಶಿ)

ಇಂಪೀರಿಯಲ್ ಬ್ಯಾಂಕ ಆಫ್ ಇಂಡಿಯಾ ಶಾಖೆ ಹುಬ್ಬಳ್ಳಿ.

[illegible]

ಬ್ಯಾಂಕಿನಲ್ಲಿ ನಡೆಯುತ್ತಿರುವ ವ್ಯವಹಾರಗಳು.

[illegible]

ಹುಬ್ಬಳ್ಳಿ — ಆರ್. ಎ. ಬನ್ಸ್. ಏಜಂಟ

ಅಂಜಿರೌಷಧಿ ಕಾರಖಾನಾ ಕಿತ್ತೂರ.

[illegible]

ಮನುಷ್ಯನ ಪ್ರಾಣರಕ್ಷಣವು ಪಶುಗಳಿಂದಾಗುತ್ತದೆ. ಆಂದಮೇಲೆ ಪಶುಗಳ ಪ್ರಾಣರಕ್ಷಣೆಯು ಭಾರವು ಮಾನುಷ್ಯನ ಮೇಲೆ ಇರುತ್ತದೆ. ಈ ಸಂಗತಿಯನ್ನು ವಿಚಾರ ಮಾಡಿ ಹನ ಹೇಲ ವ್ಯವಸ್ಥೆ ಪ್ರದರ್ಶನದಲ್ಲಿ ಸರ್ಟಿಫಿಕೇಟು ಪಡೆದ ಮತ್ತು ರಾಣೀ ದಿನಸ್ಸಿನ ಉತ್ಸವದ ಪಶುಗಳ ಪ್ರದರ್ಶನದಲ್ಲಿ ಹಾಗು ಸರಕಾರೀ ದನಗಳ ಆಸ್ಪತ್ರೆಯ ಡಾಕ್ಟರರಿಂದಲೂ ಅನೇಕ ಸದ್ಗೃಹಸ್ಥರಿಂದಲೂ ಸರ್ಟಿಫಿಕೇಟುಗಳನ್ನೂ ಅನೇಕ ಬೆಳ್ಳಿ ಬಂಗಾರದ ಪದಕಗಳನ್ನೂ ಸಂಪಾದಿಸಿದ

ಡಾ. ಎಸ್. ಜಿ. ಕಿತ್ತೂರ ಇವರ

ಪಶುಸಂಜೀವಿನಿ.

[illegible] Rinderpest [illegible]

[illegible]

[illegible]

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ರಕ್ತಶುದ್ಧಿ! ದ್ರಾಕ್ಷಾರ್ಕ ಮಧು ಧಾತುವರ್ಧಕ!

[illegible]

ವ್ಯಾನೇಜರ— ದ್ರಾಕ್ಷಾರ್ಕ ಮಧು ಆಫೀಸ, ಕೋ [illegible] ಬೆಳಗಾವ

ಅಪೂರ್ವ ಗ್ರಂಥವು!!! ಶ್ರೀ. ವಿದ್ಯಾರಣ್ಯ ಪುಸ್ತಕಮಾಲೆ ೪ [illegible]!!!

ಕರ್ನಾಟಕ ಸಾಮ್ರಾಜ್ಯ ಸಂಪುಟ ೧

[illegible]

		ರು. ಆ. ಪೈ
೧	ಶ್ರೀ. ವಿದ್ಯಾರಣ್ಯ ಪುಸ್ತಕ ಮಾಲೆಯ [illegible]	೧—೪—೦
೨	[illegible]	೧—೬—೦
೩	[illegible]	೧—೭—೦

[illegible]

ಶ್ರೀ. ವಿದ್ಯಾರಣ್ಯ ಪ್ರಕಾಶಕ ಸಂಸ್ಥೆ — ಮಾಳಮಡ್ಡಿ ಧಾರವಾಡ. [illegible]

ದಿ ಅಂಕಲಗಿ ಬ್ಯಾಂಕ ಲಿಮಿಟೆಡ್ ಧಾರವಾಡ

[illegible]

K. S. ANKALAGI.

[illegible]

ಧಾರವಾಡ ಜಿಲ್ಲೆಯ ವಾಲ್ಮೀಕಿ ಜನರ ಪ್ರಥಮ ಪರಿಷತ್ತು.

ಈ ಮೊದಲು ಪ್ರಸಿದ್ಧವಾದ ಮೇರೆಗೆ ಕಳೆದ ಆದಿತ್ಯವಾರ ಮತ್ತು ಸೋಮವಾರ ದಿವಸ ಬ್ಯಾಡಗಿಯಲ್ಲಿ ವಾಲ್ಮೀಕಿ ಜನರ ಪರಿಷತ್ತು ಕೂಡಿತ್ತು. ಪರಿಷತ್ತಿಗೆ ಎರಡೂವರೀ ಸಾವಿರ ಜನರು ಕೂಡಿದ್ದರು. ಮೊದಲನೆಯ ದಿವಸ ಡಿ. ಕೆ. ಶಲೆಕ್ಕರ ಮ. ಭದ್ರಾಪೂರ ನಾಯಕರು ಅಧ್ಯಕ್ಷರಾಗಿದ್ದರು. ಎರಡನೆಯ ದಿವಸ ಶ್ರೀ. ದ್ಯಾವನಗೌಡ ಪಾಟೀಲ ಉಪಾಧ್ಯಕ್ಷ ಡಿ. ಎಲ್. ಬೆಲೀರ್ಜ ಇವರು ಅಧ್ಯಕ್ಷರಾಗಿ ಉಳಿದ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿದರು.

ಸಭೆಯಲ್ಲಿ (೧) ವಾಲ್ಮೀಕಿ ಮತದ ಇತಿಹಾಸ, (೨) ವಿದ್ಯಾಭಿವೃದ್ಧಿಯ ಅವಶ್ಯಕ (೩) ಮಾಂಸಾಹಾರ ಮತ್ತು ಮದ್ಯಪಾನಗಳ ನಿಷೇಧ (೪) ಸಂಘಗಳ ಮತ್ತು ಫಂಡಿನ ಅವಶ್ಯಕತೆ ಎಂಬ ವಿಷಯಗಳ ಮೇಲೆ ಅನುಕ್ರಮವಾಗಿ ಶ್ರೀ. ಪರಶುರಾಮ ನಾಯಕ ಹೊಳಲಕೇರಿ, ಶ್ರೀ. ರಾಮಚಂದ್ರರಾವ ಮಾಸ್ತರ ಹಾನಗುಡ್ಡ, ಶ್ರೀ. ಹನುಮಂತಪ್ಪಾ ಬಾಗೇವು, ನವೀಗಲ, ಮತ್ತು ಲಿಂಗಪ್ಪಾ ಹೊಂಬಳ ಗದಗ-ಬೆಟಗೇರಿಯವರ ಭಾಷಣಗಳಾದವು.

ಸಭೆಯಲ್ಲಿ ಪದ್ಧತಿ ಪ್ರಕಾರ ಕೆಲವು ಉಪಚಾರದ ಮತ್ತು ಕೆಲವು ಸಮಾಜಕ್ಕೆ ಹಿತಕರವಾದ ಠರಾವುಗಳು ಪಾಸಾದವು. ಸಮಾಜಕ್ಕೆ ಸಂಬಂಧಿಸಿದ ಠರಾವುಗಳು ಕೆಳಗೆ ಕೊಟ್ಟಂತಿರುತ್ತವೆ.

೧ ಧಾರವಾಡ ಜಿಲ್ಲೆಯಲ್ಲಿ ಫಂಡಿನ ವ್ಯವಸ್ಥೆ.
೨ ಭದ್ರಾಪೂರ ಧಾನ್ಯಶೇಖರ ಸಂಘಸ್ಥಾಪನೆ.
೩ ಬಾಲವಿವಾಹ, ತೆರವು ಮತ್ತು ವಿವಾಹಕಾಲದಲ್ಲಿಯ ದುಂದುಗಾರಿಕೆಯ ನಿಷೇಧ.
೪ ಮಾಂಸಾಹಾರ ಮತ್ತು ಮದ್ಯಪಾನದ ನಿಷೇಧ
೫ ಗಣಿಕಾವೃತ್ತಿಯ ನಿಷೇಧ
೬ ಪ್ರಾಣಿಬಲಿದಾನ ನಿಷೇಧ
೭ ಅಸ್ಪೃಶ್ಯತಾ ನಿವಾರಣೆ
೮ ಕಟಕರಿಗೆ ಗೋವುಗಳನ್ನು ಮಾರುವದರ ನಿಷೇಧ.
೯ ಒತ್ತಾಯದ ಶಿಕ್ಷಣವನ್ನು ಆಚರಿಸಲ್ಲಿ ತರುವದು.
೧೦ ಸಮಾಜದ ವಿದ್ಯಾರ್ಥಿಗಳಿಗೆ ಸರಕಾರದಿಂದ ಸವಲತ್ತು ಪಡೆಯುವದು
೧೧ ಸರಕಾರದಿಂದ ಕಸಭೂಮಿ ದೊರಕಿಸುವದು
೧೨ ಒಕ್ಕಲತನದ ಶಾಲೆಗಳನ್ನು ಹೆಚ್ಚಿಸುವದು
೧೩ ಓಲೆಕಾರರ ಪೋಟಿಗಿ ಹೆಚ್ಚಿಸುವದು
೧೪ ಕ್ರಿಮಿನಲ ಟ್ರೈಬ್ಸ ಆಕ್ಟು ರದ್ದುಪಡಿಸುವದು
೧೫ ಮ್ಯುನಿಸಿಪಾಲಿಟಿ, ಲೋಕಲಬೋರ್ಡುಗಳಲ್ಲಿ ವಾಲ್ಮೀಕಿ ಜನರ ನಾಮಿನೇಶನ ಮಾಡುವದು

ಪರಿಷತ್ತಿನಲ್ಲಿ ಸ್ಥಿರಫಂಡಿನ ಎತ್ತುಗಡೆಯ ಕೆಲಸವು ಅತ್ಯುತ್ಸಾಹದಿಂದ ನಡೆಯಿತು. ಶ್ರೀ. ದಣ ಮಂಕಗೌಡರು ಅತ್ತೀಗೇರಿಯವರು ಹತ್ತು ವರ್ಷಗಳ ತನಕ ಪ್ರತಿ ವರ್ಷ ಸಾವಿರ ರೂಪಾಯಿ ಕೊಡುವಂತೆ ವಾಗ್ದಾನ ಮಾಡಿದರು. ನಾಲ್ಕು ಸಾವಿರದ ತನಕ ಅಂಕಿಗಳು ಬಿದ್ದು ನೂರಾರು ರೂಪಾಯಿಗಳು ನಗದು ಕೂಡಿದವು.

ಪರಿಷತ್ತಿಗಾಗಿ ಕೆಳಗಿನ ಗೃಹಸ್ಥರು ಉತ್ಸಾಹಪೂರ್ವಕವಾಗಿ ಸಹಾಯ ಮಾಡಿದ್ದಾರೆ. ಶ್ರೀ. ಮಲ್ಲಪ್ಪಣ್ಣ ಕಟ್ಟಿಮನಿ, ಶ್ರೀ. ತುಕಾರಾಮಪ್ಪಾ ಹುಲಗಿವರ, ಶ್ರೀ. ಕಾಮಪ್ಪನವರು ಬೆಟಗೇರಿ, ಶ್ರೀ. ಬಾಳಾಜಿ ಮಾರ್ತಾಂಡ ಕುಲಕರ್ಣಿ, ಡಾಕ್ಟರ ಪವಾರ, ಶ್ರೀ. ಸಣ್ಣವೀರನಗೌಡರು ಪಾಟೀಲ, ಶ್ರೀ. ಗುಡ್ಡಪ್ಪನವರು ಬಾರಕೇ, ಶ್ರೀ. ಬಂಡಪ್ಪನವರು, ಶ್ರೀ. ಮುರಿಗೆಪ್ಪನವರು ಶೆಟ್ಟರ, ಶ್ರೀ. ಗಣೇಶ ಬಳ್ಳಾರೀ ಕುಲಕರ್ಣಿ, ಮತ್ತು ಶ್ರೀ. ವೀರಪ್ಪಾ ಮುಖ್ತಾರ ಮೊದಲಾದವರು.

ಕೊಡುಮಕ್ತಾರ ಜಿಲ್ಲೆಗೆ ಸೇರಿದ ಕುಮಾರಸ್ವಾಮಿ ಎಂಬ ತರುಣ ಮತ್ತು ಶ್ರೀಮಂತಗೌಡರು ಗುಂಡು ಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡಿದ್ದಾರೆ. ಇವರು ಕಾಲೇಜ ಮತ್ತು ಪ್ರಿನ್ಸ್ ಮೋಡರ್ನ ಮಿತ್ರರಾಗಿದ್ದರು.

ಕೆಮಾಲ ಪಾಶಾನವರು ಲಂಡನ್ನಿಗೆ ಬರುವ ರೇಟು ಸುದ್ದಿಯು ಶಿಕಾಗೋವಾದದ್ದೆಂದು ಪ್ರಸಿದ್ಧ ಮಾಡಲ್ಪಟ್ಟಿದೆ.

ಪುಣೆಯಲ್ಲಿ, ಮುಂಬಯಿ ಇಲಾಖೆಯೊಳಗಿನ ನೇಕಾರ ಸಹಕಾರೀ ಸಂಘಗಳಲ್ಲಿ ತಯಾರಾಗುವ ಮಾಲಿನ ಜಂಗೀ ಪ್ರದರ್ಶನವು.

ಮುಂಬಯಿ ಇಲಾಖೆಯ ಸಹಕಾರಿ ಖಾತೆಯ ವಿದ್ಯಮಾನವಾಗಿ ತಾ. ೧೪-೨-೩೭ ಇಸ್ವಿ ದಿವಸ ಪುಣೆಯ "ಸೇವಾಸದನ"ದಲ್ಲಿ ಇಲಾಖೆಯೊಳಗಿನ ಎಲ್ಲ ನೇಕಾರ ಸಂಘಗಳಲ್ಲಿ ಕೈಮಗ್ಗದ ಮೇಲೆ ತಯಾರಾಗುತ್ತಿರುವ ಮಾಲಿನದೊಂದು ಪ್ರದರ್ಶನವು ಪ್ರಾರಂಭಿಸಲ್ಪಟ್ಟಿತು. ಈ ಪ್ರದರ್ಶನಕ್ಕಾಗಿ ಧಾರವಾಡ, ಬೆಳಗಾವಿ, ವಿಜಾಪೂರ, ಸೊಲ್ಲಾಪೂರ, ನಗರ, ಖಾನದೇಶ ಮುಂತಾದ ಜಿಲ್ಲೆಗಳೊಳಗಿನ ನೈಕಾರ ಸಂಘಗಳಿಂದ ಮಾಲು ಬಂದಿರುವದು. ಕರ್ನಾಟಕದೊಳಗಿನ ೧೧ ಸಹಕಾರಿ ಸಂಘಗಳಿಂದ ಅತ್ಯುತ್ತಮವಾದ ಸೀರಿ, ಖಣ, ಧೋತ್ರ, ಅಂಗೀ ಅರವಿ, ಮುಂತಾದ ಮಾಲು ಚತುರ ನೈಕಾರರಿಂದ ತಯಾರಿಸಿ ಬಂದಿರುವದು.

ಮೊದಲಿಗೆ ಸರಕಾರ್ಯಲರ ತೆಗೆದ ಪ್ರಕಾರ ತಾ. ೧೪-೨-೩೭ನೇ ದಿವಸವೇ ಎಲ್ಲ ಸಂಘಗಳ ಪ್ರತಿನಿಧಿಗಳೂ, ಮಧ್ಯಭಾಗ, ದಕ್ಷಿಣಭಾಗದ ಆ. ರಜಿಸ್ಟ್ರಾರ್ ಸಾಹೇಬರೂ, ಇಲಾಖಾ ರಜಿಸ್ಟ್ರಾರ್ ಸಾಹೇಬರೂ ಇತರ ಕಾಮದಾರರೂ ಹಾಜರಾಗಿ ಎಲ್ಲ ವ್ಯವಸ್ಥೆಯನ್ನು ದಕ್ಷತೆಯಿಂದ ನೋಡುತ್ತಿದ್ದರು.

ಈ ಪ್ರದರ್ಶನಕ್ಕಾಗಿ ಪುಣೆಯ ಸೇವಾಸದನದ ವಿಶಾಲವಾದ ಮುಂಭಾಗದಲ್ಲಿ ಮಂಟಪವನ್ನು ಹಾಕಿ ಅದರಲ್ಲಿ ಚಿಕ್ಕ ಚಿಕ್ಕ ಅಂಗಡಿಗಳನ್ನು ಸಾಲಾಗಿ ಬಿಟ್ಟಿದ್ದರು. ಈ ಅಂಗಡಿಗಳಲ್ಲಿ ಪ್ರತಿಯೊಂದು ಸಂಘದವರೇ ತಮ್ಮ ಮಾಲು ಪ್ರೇಕ್ಷಕರ ಚಿತ್ತಾಕರ್ಷಣವಾಗುವಂತೆ ವ್ಯವಸ್ಥಿತವಾಗಿ ಮಂಡಿಸಿದ್ದರು.

ತಾ. ೧೪ನೇ ದಿವಸ ಸಂಜೆಯ ೫ ಘಂಟೆಗೆ ಸರಿಯಾಗಿ "ಸೇವಾಸದನ"ದ ಭವ್ಯ ಪಟಾಂಗಣದಲ್ಲಿ ಸಭೆಯು ಜರುಗಿಸಲ್ಪಟ್ಟಿತು. ಸಭೆಗಾಗಿ ಬಂದ ಜನರಲ್ಲಿ ಅರ್ಧ ಅಧಿಕವಾಗಿ ಸ್ತ್ರೀ ಸಮಾಜವೇ ಕಂಗೊಳಿಸುತ್ತಿತ್ತು! "ಮಾಡರ್ನ" ಜನರ ಹೊರತಾಗಿ "ಸ್ವದೇಶಿ" "ಖಾದಿ" ಮುಂತಾದ ಪುಣೆಯ ಅನ್ಯ ಪಾರ್ಟಿಯ ಯಾವ ಜನರೂ ತೋರುತ್ತಿದ್ದಿಲ್ಲ !!

ಸಭೆಯ ಪ್ರಾರಂಭಕ್ಕೆ ಇಲಾಖಾ ರಜಿಸ್ಟ್ರಾರ ಮಿ. ಮದನಸಾಹೇಬರು ಅತಿಥಿಗಳ ಸ್ವಾಗತ ಮಾಡಿ ತಮ್ಮ ಅಡಳಿತದಲ್ಲಿದ್ದ ನೈಕಾರ ಜನರ ಹೀನ ದೀನ ಸ್ಥಿತಿಯನ್ನು ತಮ್ಮ ಅನುಭವ ಜನ್ಯ ಅಧಿಕಾರಯುಕ್ತವಾಣಿಯಿಂದ ವಿವರವಾಗಿ ಬಣ್ಣಿಸಿದರು. ಮತ್ತು ವಿಠಾಟ ಸ್ವದೂಷಿ ಗಿರಣಿಗಳ ಸ್ಪರ್ಧೆಯಲ್ಲಿಯೂ ಕೂಡ ಕುಲ ಉದ್ಯೋಗನಷ್ಟವೇ ಆಗಲಿ; ಇನ್ನೂ ನೈಕಾರ ಧಂದೆಯು ಜೀವಂತ ಉಳಿದದ್ದು ಕೇವಲ ನೈಕಾರರ ಆಕುಪಂಕ್ತಿ ಅಭಿಮಾನವೇ ಕಾರಣನೆಂದು ಅವನ್ನು ಸ್ತುತಿಸಿದ್ದಲ್ಲದೆ, ಇನ್ನು ಮುಂದೆ ಈ ಉದ್ಯೋಗವು ಊರ್ಜಿತ ಸ್ಥಿತಿ ಹೊಂದಬೇಕಾದರೆ ಸಹಕಾರಿ ಸಂಘಗಳ ಬೆಳವಣಿಗೆಯಾಗಬೇಕು ಮತ್ತು ನಮ್ಮ ನೈಕಾರರು ಸ್ವದ ನೂಲು ನಾವೆಲ್ಲರೂ ಧರಿಸಲಿಕ್ಕೆ ಬೇಕು ಎಂದು ಕಳಕಳಿಯಿಂದ ಹೇಳಿ ಇಂದಿನ ಸಭೆಗೆ ರಾಜಶ್ರೀ? ದೇವಧರರು ಅಧ್ಯಕ್ಷರಾಗಬೇಕೆಂದು ಸೂಚಿಸಿದರು. ಇದನ್ನು ಶ್ರೀಮತಿ ದ್ವಾರಕಾಬಾಯಿ ಭಟ ಎಂಬವರು ಅನುಮೋದಿಸಲು, ಶ್ರೀ. ದೇವಧರ ಸಾಹೇಬರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು.

ಶ್ರೀ. ದೇವಧರಸಾಹೇಬರು ತಮ್ಮ ಭಾಷಣದಲ್ಲಿ ಸಹಕಾರೀ ಸಂಘಗಳಿಂದಾಗತಕ್ಕ ಲಾಭಗಳನ್ನು ವಿಶದವಾಗಿ ವಿವೇಚಿಸಿ ಸಂಘದ ಮೆಂಬರ ಜನರ ನಡವಳಿಕೆಯ ಬಗ್ಗೆ ಉಪಯುಕ್ತವಾದ ಕೆಲವು ಸೂಚನೆಗಳನ್ನು ಮಾಡಿದರು. ನೈಕಾರ ಉದ್ಯೋಗವು ಜೀವದಿಂದುಳಿಯಬೇಕಾದರೆ ನಾವೆಲ್ಲರೂ ಕೈಮಗ್ಗದ ಮೇಲೆ ನೆಯ್ದ ಅರಿವೆಗಳನ್ನೇ ಉಪಯೋಗಿಸಬೇಕೆಂದು ಅತ್ಯಂತ ಕಳಕಳಿಯಿಂದ ಆವೇಶಪೂರ್ಣವಾಗಿ ಮಾತಾಡಿದರು! ಆ ಮೇಲೆ ಶಿಷ್ಟಾಚಾರದಂತೆ ಪ್ರದರ್ಶನ ತೆರೆದು ಬಂದು, ಅದರಲ್ಲಿ ಮಂಡಿಸಿದ ಮಾಲು ಬಹು ಸುಂದರವಾಗಿಯೂ ಪೇಟೆಯ ಮಾಲಿಗಿಂತ ಸುಲಭ ಬೆಲೆಯುಳ್ಳದ್ದಾಗಿಯೂ ಇರುವದೆಂದು ಹೇಳಿ ಎಲ್ಲ ನಾಗರಿಕರೂ ಪ್ರದರ್ಶನದೊಳಗಿನ ಮಾಲು ಕೊಂಡು ಸಹಾಯ ಮಾಡಬೇಕೆಂದು ಸೂಚಿಸಿದರು. ನಂತರ ಶ್ರೀಯುತ ಆಪಟೆಯವರು ಅಧ್ಯಕ್ಷರ ಹಾಗೂ ಸಭಿಕರ ಆಭಾರ ಮನ್ನಿಸಲು ಪೂಮಾಲೆ ಗಂಧದ ಪರಿಮಳಗಳನ್ನು ಸಮರ್ಪಿಸಿ ಸಭೆ ವಿಸರ್ಜನವಾಯಿತು.

ನಂತರ ಸಭೆಯೊಳಗಿಂದ ಸ್ತ್ರೀಪುರುಷ ಸಮೂಹವು ಪ್ರದರ್ಶನದಲ್ಲಿ ಮಂಡಿಸಿದ ವಸ್ತುಗಳನ್ನು ಅವಲೋಕಿಸಿ ತಮಗೆ ಇಷ್ಟವಿದ್ದ ವಸ್ತುಗಳನ್ನು ಕೊಳ್ಳುತ್ತಿತ್ತು. ಈ ಪ್ರಕಾರ ರಾತ್ರಿ ೯ ಘಂಟೆಯ ವರೆಗೆ ಕೆಲಸ ಸಾಗಿ ಆ ದಿವಸದ ಕಾರ್ಯವು ಮುಗಿಸಲ್ಪಟ್ಟಿತು. ಪ್ರದರ್ಶನವು ಈ ತಿಂಗಳ ೨೮ನೇ ತಾರೀಖ ವರೆಗೆ ಸಾಗತಕ್ಕದ್ದಿದ್ದು ದಿನಾಲು ಮುಂಜಾವು ಸಂಜೆಗೆ ಅಂಗಡಿಗಳನ್ನು ಬಿಚ್ಚಿ ಮಾಲು ಮಾರಾಟ ಆಗತಕ್ಕದ್ದಿದೆ.

ಒಟ್ಟಿನ ಮೇಲೆ ಪ್ರದರ್ಶನವು ಚಿಕ್ಕದ್ದಾಗಿದ್ದರೂ ಅಚ್ಚುಕಟ್ಟಾಗಿಯೂ ಸೊಗಸಾಗಿಯೂ ಇರುವದು ಅದರಲ್ಲೂ ಕರ್ನಾಟಕದೊಳಗಿನ ಸುಂದರವಾದ ನಮೂನೆಯ ಧಡೂತಿ ಮಾಲು ಇಲ್ಲಿಯ ನಾಗರಿಕರ ಆದರಕ್ಕೆ ಪಾತ್ರವಾದಂತೆ ತೋರುತ್ತದೆ.

ಇಷ್ಟೆಲ್ಲ ಆಡಂಬರ ಬೆಳೆದಿದ್ದರೂ ಮೂಲ ಉದ್ದೇಶವು ನೈಕಾರರ ಉದ್ಯೋಗಾಭಿವೃದ್ಧಿಯಾಗಿ ಅವರ ಸ್ಥಿತಿ ಸುಧಾರಿಸುವಂತಹ ವಿಚಾರಗಳು ಒಂದೂ ಆಗಲಿಲ್ಲ! ಅದ್ದರಿಂದ ತುಂಬಾ ವಿಷಾದಿಸಬೇಕಾಗಿದೆ. ವ್ಯಾಖ್ಯಾನಕಾರರ ಮಾತಿನಲ್ಲಿ ಹಲವು ಬಗೆಯ ರಸ್ತೆ, ಕಳಕಳಿಯು ಕೇಳಬಂದರೂ ಪ್ರತ್ಯಕ್ಷ ಕೃತಿಯ ಹೆಸರಿನಿಂದ ಬಂದೀಗಾಲಿಯಂಥ ಶೂನ್ಯ ಹಾಗೂ ನಿರಾಶೆ!! ದೇವಧರಸಾಹೇಬರೂ ಮಿ॥ ರಜಿಸ್ಟ್ರಾರ ಸಾಹೇಬರೂ ತಮ್ಮ ಮಾತುಗಳಲ್ಲಿ ಪ್ರತಿಯೊಬ್ಬರು ಕೈಮಗ್ಗದ (ಕೈನೂಲಿನವಲ್ಲ) ಬಟ್ಟೆಗಳನ್ನೇ ಉಪಯೋಗಿಸಬೇಕೆಂದು ಆಗ್ರಹದಿಂದ ಉಪದೇಶಿಸಿದ್ದರೂ ಸ್ವತಃ ಸಾಹೇಬರು ಮೊದಲ್ಗೊಂಡು ಅವರ ಪಟ್ಟೇವಾಲಾ ಸಿಪಾಯಿಯವರೆಗೆ ಎಲ್ಲರೂ ಅಂಗಡಿಯ ವಿಲಾಯತಿವಸ್ತ್ರಗಳನ್ನು ಧರಿಸುವವರು. ಅಂಥವರ ಈ ಉಪದೇಶವು ಸಮಾಜದ ಮೇಲೆ ಎಷ್ಟರಮಟ್ಟಿಗಾಗುವದೆಂಬುದನ್ನು ಬೇರೆ ಹೇಳುವ ಕಾರಣ ತೋರುವದಿಲ್ಲ. ಮಹಾತ್ಮಾ ಗಾಂಧಿಯಂಥವರ ಆಚಾರ ಶುದ್ಧ ಹಾಗೂ ವಿಚಾರ ನಿರ್ಮಾಣದಿಂದ ಸಾಧ್ಯವಾಗದ ಮತ್ತು ಅಷ್ಟು ಫಲಪ್ರದವಾಗದ ಮಹತ್ವದ ಕಾರ್ಯವು ಬರೇ ಬಡಬಡಿಸುವವರ ಬಡಿವಾರದ ಮಾತುಗಳಿಂದ ಎಂದೂ ಸಾಧ್ಯವಾಗಲಾರದು! ಅದ್ದರಿಂದ ದೇವಧರ ಸಾಹೇಬರಂಥ ರಾಜಭಕ್ತ ಮುಂದಾಳುಗಳು ತಮ್ಮ ಇಷ್ಟಮಿತ್ರರ (ಅಳಿಯರ) ಸ್ವಾರ್ಥಕ್ಕಾಗಿ ಮಾಡುವ ನಿರರ್ಥಕ ಉಪದೇಶಕ್ಕಿಂತ ಉಪಯೋಗಿಸಬೇಕೆಂಬ ಒಂದು ಸತ್ಕ್ರಿಯೆ ಮಾಡುವದರಿಂದ ಇಂದಿಗೆ ನಮ್ಮ ನೈಕಾರರ ಅರ್ಧ ಅಧಿಕ ತಾಪತ್ರಯವು ದೂರಾಗುವದೆಂದು ಎದೆತಟ್ಟಿ ಹೇಳಬಹುದು! ಇಂಥ ಸತ್ಕೃತ್ಯವನ್ನು ಮಾಡುವ ಸುಬುದ್ಧಿಯು ನಮ್ಮ ದೇವಧರ ಸಾಹೇಬರಂಥ ರಾಜಭಕ್ತರಿಗೆ ದೇವರು ಬೇಗನೆ ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ.

(ಲೇಖ ೨)

ಕಳೆದ ಪತ್ರವನ್ನು ತುಸು ಅವಸರದಿಂದ ಬರೆದುಗರಿಂದ ಮಹತ್ವದ ವಿಷಯಗಳನ್ನು ವಿವರಿಸುವದಾಗಲಿಲ್ಲ. ಅದ್ದರಿಂದ ಈ ಪತ್ರದಲ್ಲಿ ಎಲ್ಲ ವಿಷಯಗಳ ಮೇಲೆ ಸಾಮಾನ್ಯ

ಸಮಾಲೋಚನೆ-

ಮಾಡಬೇಕೆಂದು ಆಲೋಚಿಸಿರುತ್ತೇನೆ. ಮುಂಬೈ ಇಲಾಖೆಯೊಳಗಿನ ಎಲ್ಲ ನೇಕಾರ ಸಹಕಾರೀ ಸಂಘಗಳ ಸಾಂಪತ್ತಿಕ ಅವನತ ಸ್ಥಿತಿಯನ್ನು ಹೋಗಲಾಡಿಸಿ ಅವುಗಳನ್ನು ಉನ್ನತ ಸ್ಥಿತಿಗೆ ತರುವ ಸದುದ್ದೇಶದಿಂದಲೇ ಈ ಪ್ರದರ್ಶನವು ಕೂಡಿಸಲ್ಪಟ್ಟಿರುವದು, ಆದರೆ ಉದ್ದೇಶ ಸಫಲವಾಗುವಂತಹ ಮಹತ್ವದ ಒಂದೂ ಕಾರ್ಯವು ಸಾಧಿಸಲಿಲ್ಲೆಂದರೆ ತಪ್ಪಾಗಲಾರದು. ಯಾಕಂದರೆ- ಪ್ರದರ್ಶನ ಮಂಡಿಸುವ ಮುಖ್ಯ ಉದ್ದೇಶವು ಸಂಘಗಳಿಂದ ತಯಾರಿಸಲ್ಪಟ್ಟ ಮಾಲು ಕೊಳ್ಳಲಿಕ್ಕೆ ಯೋಗ್ಯ ಗ್ರಾಹಕರನ್ನು ಸಂಪಾದಿಸುವದಾಗಿದೆ. ಇದಾದರೂ ರೋಖವಾಗಿ ಕೊಳ್ಳುವ ವ್ಯಾಪಾರೀ ಗೃಹಸ್ಥರನ್ನೇ ತಮ್ಮ ಗ್ರಾಹಕರನ್ನಾಗಿ ಮಾಡಿಕೊಂಡು ಅವರಿಗೆ ಬೇಕಾದ ಮಾಲು ಸಂಘಗಳು ಪೂರೈಸಿಕೊಡುವದಾಗಿದೆ. ಈ ದೃಷ್ಟಿಯಿಂದ ಪ್ರದರ್ಶನ ಮಂಡಲವು ವಿನೋದಕ್ಕೂ ಪ್ರಯತ್ನ ಮಾಡಿಲ್ಲ. ಕೇವಲ ಬಿಡಿ ಗಿರಾಕಿಗಳಿಂದ ದಿನಾಲು ೩-೪ ನೂರು ರೂಪಾಯಿಗಳ ವ್ಯವಹಾರವಾಗುವದು, ಅದೂ ೩೦-೪೦ ಸಾವಿರ ರೂಪಾಯಿ ಬೆಲೆ ಬಾಳುವ ಮಾಲು ಮುಂದಿಟ್ಟುಕೊಂಡು ಕೂತಾಗ್ಗೇ ಸರಿ. ಇದೇನೂ ಮಹತ್ವದ್ದಲ್ಲ. ಒಂದಾನೊಂದು ಫ್ಯಾನ್ಸಿ ಬಾಜಾರದಲ್ಲಿ ಕೂಡ ಈ ತರದ ವ್ಯವಹಾರ ಆಗಬಹುದು. ಇದರಿಂದ ಬಡ ನೇಕಾರರ ಹೊಟ್ಟೆ ಬಟ್ಟೆಗಳ ಮಹತ್ವದ ಪ್ರಶ್ನವು ಬಿಡಲಾರದು. ಪ್ರದರ್ಶನದ ಮುಖ್ಯೋದ್ದೇಶಕ್ಕೆ ಪರಿಪೋಷಕವಾಗುವಂತೆ ಪ್ರಯತ್ನ ಮಾಡುವದು ಪ್ರದರ್ಶನ ಕಮೀಟಿಯ ಮುಖ್ಯ ಕರ್ತವ್ಯವಾಗಿದೆ. ಈ ದೃಷ್ಟಿಯಿಂದ ದೊಡ್ಡ ದೊಡ್ಡ ವ್ಯಾಪಾರಸ್ಥರನ್ನು ಕರೆಯಿಸಿ ಅವರಿಗೆ ಬೇಕಾಗುವಂಥ ಮಾಲು ಪೂರೈಸಿ ಕೊಡುವ ಏರ್ಪಾಡು ಮಾಡಬೇಕೆಂದು ಪ್ರದರ್ಶನ ಕಮೀಟಿಯವರಿಗೆ ನಮ್ಮ ಆಗ್ರಹದ ವಿನಂತಿಯಿರುವದು. ಇದರ ಹೊರತಾಗಿ ಇನ್ನೊಂದು

ಮಹತ್ವದ ಸಂಗತಿ-

ಎಂದರೆ- ಸಹಕಾರಿ ಸಂಘಗಳ ಮೆಂಬರರ ಹಾಗು ಸರಕಾರೀ ನೌಕರರು ಕೈಮಗ್ಗದ ಬಟ್ಟೆಗಳನ್ನೇ ಉಪಯೋಗಿಸಲಿಕ್ಕೆ ಬೇಕೆಂದು ಗವ್ಹರ್ನರ ಮೊದಲಿನಂತೆ ಒತ್ತಾಯದ ಕಟ್ಟಪ್ಪಣೆಯನ್ನು ಮಾಡಿಸುವದು! ಸಾಂಪ್ರತ ನಮ್ಮ ದೇಶದಲ್ಲಿ ಹಳ್ಳಿ ಹಳ್ಳಿಗಳಲ್ಲಿ ಕೂಡ ಒಕ್ಕಲಿಗರು ಹಾಗು ಮಧ್ಯಮ ತರಗತಿಯ ಜನರು ಬಹು ಭಾಗವಾಗಿ ಕೈಮಗ್ಗದ ಬಟ್ಟೆಗಳನ್ನೇ ಉಪಯೋಗಿಸುತ್ತಿರುವರು. ಮಿ. ಮದನಸಾಹೇಬರು ತಮ್ಮ ಭಾಷಣದಲ್ಲಿ ಹೇಳಿದಂತೆ ಒಂದು ನಾಶೋನ್ಮುಖದಲ್ಲಿದ್ದ ನೇಕಾರರ ಉದ್ಯೋಗವು ಸದ್ಯ ಉಳಿದಿದ್ದರೂ ಅದು ಕೇವಲ ಒಕ್ಕಲಿಗರ ಸಾಮರ್ಥ್ಯ ಜನರಿಂದ ಮತ್ತು ಹೆಂಗಸರಿಂದಲೇ. ಮುಳುಗಿದ ಮೂರು ನಾಲ್ಕಾಣೆ ಭಾಗವು ಮೇಲ್ವರಗತಿಯ ಸುಶಿಕ್ಷಿತ ತಿಳಿದವರ ಸ್ವದೇಶಭಕ್ತಿಯಿಂದ!! ಈಗ ಬಲ್ಲವರು ಸರಕಾರದ ಸೇವೆ ಮಾಡಿ ಅಳಿದುಳಿದು, ಕೂಗಿ ತೂಗಿ ವೇತನ ಪಡೆಯುತ್ತಿರುವ ಜನರೇ ಸ್ವಕೀಯರಿಂದ ಮಳೆಯಾಗಲಿ ಆಗದಿರಲಿ ಬೆಳೆ ಬರಲಿ; ಮುಳುಗಲಿ ಪ್ರತಿ ತಿಂಗಳಿಗೆ ತಪ್ಪದೆ ಬರುತ್ತಿರುವ ದ್ರವ್ಯದ ಜೀಳಿಯ ಬಲದಿಂದ ಇವರು ಬಡ ನೇಕಾರರ ಸ್ಥಿತಿಗತಿಗಳನ್ನು ಅರಿಯದೆ ವಿದೇಶಿ ಬಟ್ಟೆಗಳನ್ನು ಕೊಂಡು ಆತ್ಮೀಯರಾದ ತಮ್ಮ ಬಡ ನೇಕಾರರ ಹೊಟ್ಟೆಯ ಮೇಲೆ ಕಲ್ಲನ್ನು ಹಾಕುತ್ತಿರುವರು. ಈ ಸ್ಥಿತಿಯು ಇತ್ತೀಚೆಗಾಗಿ ನಮ್ಮ ಸ್ವದೇಶೀ ನೌಕರಶಾಹಿಯಲ್ಲಿ ಬಹಳ ನೆಲೆಗೊಂಡಿರುವದು. ಇದನ್ನು ಹೋಗಲಾಡಿಸಬೇಕಾದರೆ ಸರಕಾರದಿಂದಲೇ ಕಟ್ಟಪ್ಪಣೆಯಾಗಬೇಕಲ್ಲದೆ ಅನ್ಯೋಪಾಯವಿಲ್ಲ. ಮಹಾತ್ಮಾಜಿಯವರ ಸತ್ಯಾಗ್ರಹ, ಅವರೂ ಸಂಪೂರ್ಣ ಅಂಗೀಕರಣದ ಬುದ್ಧಿ ಮಾತು ಈ ವರೆಗೆ ಶಿಕ್ಷಿತ ಮಾತ್ರವೂ ಸನದು ಕೇಳುವಲ್ಲಿ ತರದ ಸ್ವದೇಶೀ ನೌಕರಶಾಹಿಯು ಸಂತೋಷದಿಂದ ಅಥವಾ ನೇಕಾರರ ಹೀನ ದೀನ ಸ್ಥಿತಿಯನ್ನು ಕಂಡು ಕರುಣಾಸಿಯೋ ಈ ಪ್ರಶ್ನವನ್ನು ಸ್ವೀಕರಿಸಲಾರದು. ಅಂತೇ ಸಾವು ಕಾಯುವೆಂದರೆ ಈ ಒತ್ತಾಯವು ಬೇಕೆಂದು ಸೂಚಿಸುತ್ತೇವೆ. ಇಂಥ ಸೂಚನೆಗಳನ್ನು ಬಳಕೆಯಲ್ಲಿ ತರಿಸುವದು ಸಾಂಪ್ರತಕಾಲದಲ್ಲಿ ದೇವಧರ ಸಾಹೇಬರಂಥ ರಾಜಾಶ್ರಯದ ದೇಶಭಕ್ತರಿಗೆ ತುಸು ಪಟ್ಟಿಗಾದರೂ ಸಾಧ್ಯವಿದ್ದಂತೆ ತೋರುತ್ತದೆ. ಪ್ರದರ್ಶನವು ಮುಗಿಯುವಷ್ಟರಲ್ಲಿ ಇನ್ನೊಂದು ಸಾರೆ ಸಭೆ ಕೂಡುವದೆಂದು ಕೇಳುತ್ತೇವೆ. ಅದರಲ್ಲಿ ಈ ವಿಷಯದ ಚರ್ಚೆಯಾಗಿ ಈ ಉದ್ದೇಶದ ಒಂದು ಠರಾವು ಪಾಸ ಮಾಡಿ ಸರಕಾರಕ್ಕೆ ಕಳಿಸಬೇಕೆಂದು ಪ್ರಾರ್ಥಿಸುತ್ತೇವೆ.

ಅತಿಥಿ ಸತ್ಕಾರ-

ಕೈ. ವಾಸಿ ನ್ಯಾಯಮೂರ್ತಿ ರಾನಡೆ, ಗೋಖಲೆ, ಲೋಕಮಾನ್ಯ ಟಿಳಕರ ತಾಲಿಮಿನಲ್ಲಿ ತಯಾರಾದ ಪುಣೆಯ ನಾಗರಿಕರು ಅತಿಥಿ ಸತ್ಕಾರದಲ್ಲಿ ಬಲು ನುರಿತವರೆಂದು ಆಗಾಗ್ಗೆ ವರ್ತಮಾನಪತ್ರದಲ್ಲಿ ಓದಿ ಓದಿ ಗಳಿಸಿ ಹೋದ ಮನಸ್ಸಿಗೆ ಈ ಸದ್ಗುಣದ ಬಗ್ಗೆ ಸಾಮಾನ್ಯತಃ ಆದರ ಹುಟ್ಟುತ್ತದೆ. ಇದಕ್ಕೆ ಬೆಸಗೊಂಡು ಎಷ್ಟೆಂದಷ್ಟು ಬಂದ ಕನ್ನಡಿಗರಿಗೆ ಆದ ಸಂಭಾವನೆಯು ಅಪೂರ್ವವಾಗಿದೆ! ದಕ್ಷಿಣಭಾಗ ಹಾಗೂ ಮಧ್ಯಭಾಗದಿಂದ

ತ ಎಲ್ಲ ಸಂಘಗಳ ೩೦-೩೫ ಜನ ಪ್ರತಿನಿಧಿಗಳಾಗಿ ಇಲ್ಲಿಯ ಸೆಂಟ್ರಲ್ ಕೋ- ಆ- ಬ್ಯಾಂಕಿನ ಪ್ರಸಾಲದಲ್ಲಿರುವ "ಕೌನ್ಸಿಲ್ ಸ್ವರಾಜ್ಯ ಸಂಘ" ಮತ್ತು ಇನಸ್ಟಿಟ್ಯೂಟದ ಎರಡು ಚಿಕ್ಕ ಆಫಿಸುಗಳನ್ನು ಇಳಿದುಕೊಳ್ಳಲಿಕ್ಕೆಂದು ದಯಪಾಲಿಸಿರುವರು. ಇದರ ಜೊತೆಗಾಗಿ ಆಯಾಯ ಜಾತಿಯ ಪ್ರತಿನಿಧಿಗಳಿಗೆ ತಂತಮ್ಮ (ಖಾನಾವಳಿ) ಹಿಟ್ಟುಗಳನ್ನು ನಡೆಸಿಕೊಂಡು ಊಟ ಮಾಡಲಿಕ್ಕೆ ಪರವಾನಿಗಿ ಕೊಟ್ಟಿರುವರು. ಇದಲ್ಲದೆ ೧೪ನೇ ಫೇಬ್ರುವರಿ ೧೯೨೬ ಇಸ್ವಿ ದಿವಸ ಕೇವಾಸದನದಲ್ಲಿ ಕೂಡಿದ ಸಭೆಯಲ್ಲಿ ಎಲ್ಲ ಸಂಘಗಳ ಪ್ರತಿನಿಧಿಗಳನ್ನು ಮಿಯಾನೋ ಪೆಟ್ಟಿಗೆ ಬಾರಿಸುವವರ ಹಿಂದಿನ ೨೦ ಬಾದ ಜಾಗೆಯಲ್ಲಿ ಕುರಿಗಳಂತೆ ಕೂಡ್ರಿಸಿ ಮಾಡಿದ ಸನ್ಮಾನವು ಅತ್ಯಂತ ಅಪೂರ್ವವಾಗಿದೆ. ಅತಿಥಿ ಸತ್ಕಾರದಲ್ಲಿ ಪೂರ್ವ ಸಂಸ್ಕೃತಿ ಯಾಗೂ ಪರಂಪರೆಯನ್ನು ಶಬ್ದಶಃ ಪಾಲಿಸುತ್ತಿರುವ ಕರ್ನಾಟಕದವರು ಈ ಆಧುನಿಕ ಶಾಸ್ತ್ರವನ್ನು ಅವಶ್ಯವಾಗಿ ಕಲಿತುಕೊಳ್ಳಬೇಕಾಗಿದೆ. ಬೆಳಗಾವಿ ಕಾಂಗ್ರೆಸದಲ್ಲಿ ಪ್ರೇಮದ ಪುರೆ ತಂದು ಕೇಗಿದ ಕೇಸರಿಕಾರರು ಈ ಅಪೂರ್ವ ಸತ್ಕಾರವನ್ನು ಕಣ್ಣಾರೆ ಕಂಡಿದ್ದರೆ ತಮ್ಮ ಪತ್ರಿಕೆಯ ಎಷ್ಟು ಕಾಲಮುಗಳನ್ನು ಈ ವಿಷಯಕ್ಕಾಗಿ ವೆಚ್ಚ ಮಾಡುತ್ತಿದ್ದರೋ ದೇವರೇ ಬಲ್ಲ! ಇರಲಿ, ಅರಿಯದೆ ಮಾಡಿದ ಪಾಪಕ್ಕಿಂತ ಅರಿತು ಮಾಡಿದ ಪಾಪಕ್ಕೆ ಜಗತ್ತಿನಲ್ಲಿ ಕ್ಷಮೆ ಇಲ್ಲ! ಅಂದರೆ ದು ಇಷ್ಟು ತದಾರ ಜನರಿಗೆ ಬಹಿಷ್ಕಾರರಿಗೆ ಹಾಗೂ ಅವರ ಪ್ರತಿನಿಧಿಗಳಿಗೆ ಮಾಡಿದ ಸಂಭಾವನೆಯು ನಮ್ಮ ಸ್ವದೇಶೀ ನೌಕರಶಾಹಿಯ ಶೀಲಕ್ಕೆ ಒಪ್ಪತಕ್ಕಂಥದೇ ಇರುತ್ತದೆ. ಹುಟ್ಟಿಸಿದ ದೇವನೇ ಕೈಬಿಟ್ಟ ಮೇಲೆ ಮೃತ್ಯುಲೋಕದ ಮಾನವರಿಗಾದರೂ ಅನ್ನುವದೇನು? ಒಟ್ಟಿಗೆ "ದೇವೋ ದುರ್ಬಲ ಘಾತಕಃ" ಇದೇ ಸತ್ಯ

ಪುಣೆ ತಾ॥ ೧೮-೨-೧೯೨೬ } ತಮ್ಮ ವಿಶ್ವಾಸು ಕನ್ನಡಿಗ

ವಿವಿಧ ವಿಷಯ

ಭಯಂಕರ ಶಿಕ್ಷೆ —

ನಾಗಪೂರ ಕೌನ್ಸಿಲದ ಮೆಂಬರರಾಗಿದ್ದ ಶ್ರೀ ಮುತುವೇದಿ ಮದನ ಮೋಹನ ಕಾಂಡೆಯವರು ಕಟ್ನಿ ಮ್ಯುನಿಸಿಪಾಲಿಟಿಯ ಅಧ್ಯಕ್ಷ ಮತ್ತು ತಾಲೂಕ ಲೋಕಲ ಬೋರ್ಡಿನ ಮೆಂಬರರಾಗಿದ್ದಾರೆ. ತಾ. ಬೋರ್ಡಿನ ಮೂರು ಸಾವಿರ ರೂಪಾಯಿಗಳ ಅಪಹಾರ ಮಾಡಿದರೆಂಬ ಆರೋಪದಿಂದ ಇವರ ಮೇಲೆ ಖಟ್ಲೆ ಬಂದು ... ಇವರಿಗೆ ನಾಲ್ಕು ವರ್ಷದ ಸಕ್ತ ಮಜುರಿ ಶಿಕ್ಷೆ ಮತ್ತು ಮೂರು ಸಾವಿರ ರೂಪಾಯಿ ದಂಡ ಆಗಿರುವರು. ಸೆಶನ ಜಡ್ಜರು ಅಪೀಲು ಕಿತ್ತಿ ಹಾಕಿದರು. ನಂತರ ಜ್ಯುಡಿಶಿಯಲ ಕಮೀಶನರರ ಕೋರ್ಟಿಗೆ ಅಪೀಲು ಮಾಡಲು- ನ್ಯಾಯಮೂರ್ತಿಗಳು ಇವರನ್ನು ಹತ್ತು ಸಾವಿರದ ಜಾಮೀನದ ಮೇಲೆ ಬಿಡುಗಡೆ ಮಾಡಿದ್ದಾರೆ.

ಸ್ವರಾಜ್ಯ ಪಕ್ಷೀಯರ ಮೇಲೆ ಕೋಪ.

ವಿಜಾಪುರದ ಹತ್ತರಿರುವ ಸಡಿಗಾಮದ ತಾಲೂಕ ಬೋರ್ಡಿನ ಚುನಾವಣೆಯಾಗತಕ್ಕದ್ದಿರುತ್ತದೆ. ಶ್ರೀ ಕಾಲೇಶ್ವರರಾವ ಮೊದಲಾಗಿ ಆರು ಜನ ಸ್ವರಾಜ್ಯ ಪಕ್ಷೀಯರು ಉಮೇದವಾರರಾಗಿದ್ದಾರೆ. ಅಧ್ಯಕ್ಷರು ಜಸ್ಟೀಸ ಪಕ್ಷದವರಾದ್ದರಿಂದ, ಅರ್ಜದಾರರ ಬರಹಕ್ಕೂ ಮುದ್ರಿಸಿದ ಅಕ್ಷರಗಳಿಗೂ ವಿರುದ್ಧತ್ವದೆಂಬ ನಿಮಿತ್ತ ಹೇಳಿ, ಅಧ್ಯಕ್ಷರು ಇವರ ಅರ್ಜಿಗಳನ್ನು ನಾಮಂಜೂರ ಮಾಡಿದರು. ಅಕ್ಷರ ದೋಷವು ಮುದ್ರಕರದಾಗಿ ರುವದರಿಂದ ಪ್ರಾಂತ ಅಧಿಕಾರಿಯು ಅರ್ಜಿಗಳನ್ನು ಹಿಡಿಯಲಿಕ್ಕೆ ಹೇಳಿದರೂ, ಅಧ್ಯಕ್ಷರು ಮನ್ನಿಸಲಿಲ್ಲ. ಶ್ರೀ ಕಾಲೇಶ್ವರರಾವ ಮೊದಲಾದವರು ದಿವಾಣಿ ಕೋರ್ಟಿನಲ್ಲಿ ದಾವೆ ಮಾಡಿ, ಚುನಾವಣೆಯನ್ನು ತಡೆಹಿಡಿಯಬೇಕೆಂದಿದ್ದಾರೆ

ನೌಕು ತಾಸುಗಳಲ್ಲಿ ಮುಂಬಯಿ-

ಬರುವ ಚಳಿಗಾಲದ ಪ್ರಾರಂಭದಲ್ಲಿ ಲಂಡನದಿಂದ ವಿಮಾನ ಬಿಟ್ಟು ನೂರೇ ತಾಸುಗಳಲ್ಲಿ ಮುಂಬಯಿಗೆ ತರುವರು. ಪ್ರಯಾಣಿಕರನ್ನೂ ಟಪಾಲನ್ನೂ ತರುವರು. ವಿಮಾನವು ಈಜಿಪ್ತದ ಮೇಲೆ ಹಾದು ಬರುವದು.

ಅತ್ಯಪೂರ್ವ! ಅಮೇರಿಕಾಖಂಡದ ಅತ್ಯಪೂರ್ವ!!

ಪ್ರಸಿದ್ಧ ಡಾಕ್ಟರನೊಬ್ಬನು ಕಂಡು ಹಿಡಿದ ಸಿದ್ಧೌಷಧ

ಸರ್ವರೋಗ ನಿವಾರಣೆಯಾಗುವ ಸಂಜೀವನೌಷಧವನ್ನು ಕಂಡು ಹಿಡಿಯುವದಕ್ಕಾಗಿ ಅಮೇರಿಕಾಖಂಡದ ಪ್ರಖ್ಯಾತ ಡಾಕ್ಟರನೊಬ್ಬನು ಅನೇಕ ವರ್ಷಗಳಿಂದ ಬಹು ಧನ ನಷ್ಟಮಾಡಿಕೊಂಡು ಸಂಶೋಧನೆಗಳನ್ನು ಮಾಡಿ, ಕೊನೆಯಲ್ಲಿ

ಎಲಿಕ್ಸಿರ್ ಆಫ್ ಲೈಫ್

ಅಥವಾ

ಜೀವನಾಧಾರ

ಎಂಬ ಔಷಧವನ್ನು ಸಿದ್ಧಿಗೊಳಿಸಿರುವನು ಅನುಪಾನ ಭೇದದಿಂದ ಅನೇಕ ರೋಗಗಳಿಗೆ ಎಂದರೆ ಅಗ್ನಿಮಾಂದ್ಯ, ಅಜೀರ್ಣ, ಹೊಟ್ಟೆ ಅಥವಾ ತಲೆ ಭಾರವಾಗಿರುವದು, ಅತಿಸಾರ, ವಾಂತಿ, ಭೇದಿ ಅಥವಾ ಕಾಲರಾ, ತಲೆನೋವು, ನೆಗಡಿ, ಮಲೇರಿಯಾ, ಜ್ವರ, ಇತರ ವಿವಿಧನಾದ ಜ್ವರಗಳು, ಮಾನಸಿಕ ದೌರ್ಬಲ್ಯ, ಕಣ್ಣು ಮತ್ತು ಕಿವಿ ನೋವು, ಮಲಬದ್ಧತೆ ನಾಯಿಕೆಮ್ಮು, ಸ್ತ್ರೀವ್ಯಾಧಿ ಮುಂತಾದ ಎಲ್ಲಾ ಬಗೆಯ ಸಾಂಕ್ರಾಮಿಕ ರೋಗಗಳಿಗೆ (ಇನ್‌ಫ್ಲುಯೆಂಜಾವಿಗೆ, ಪ್ಲೇಗಿಗೆ,) ಹಾವು, ಚೇಳು ಮುಂತಾದ ವಿಷ ಜಂತುಗಳ ಕಡತಕ್ಕೆ ಬಾಲಗ್ರಹ ಇವೇ ಮುಂತಾದವುಗಳಿಗೆ ಈ ಜೀವನಾಧಾರವನ್ನು ಕೊಟ್ಟು ಗುಣಪಡಿಸಿರುತ್ತಾನೆ. ಊರಲ್ಲಿ ಸಾಂಕ್ರಮಿಕ ರೋಗವಿರುವಾಗ ಇದನ್ನು ಅಲ್ಪ ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದರೆ ಯಾವ ರೋಗವೂ ಅಂಟುವದಿಲ್ಲ. ಈ ಜೀವನಾಧಾರವೆಂಬ

ಸಂಜೀವನೌಷಧ.

ಒಂದು ಶೀಸೆಯು ಪ್ರತಿ ಮನೆಯಲ್ಲಿ ಅಥವಾ ಪ್ರತಿ ಒಬ್ಬನ ಜೇಬಿನಲ್ಲಿದ್ದರೆ ಅನುಭವಸ್ಥನಾದ ಡಾಕ್ಟರೊಬ್ಬನು ಹಸ್ತಗತವಿದ್ದಂತೆಯೇ. ಡಾಕ್ಟರರಿಗೆ ಕೊಡಬೇಕಾದ ಫೀಜುಗಳನ್ನು ಈ 'ಜೀವನಾಧಾರ' ವೆಂಬ ಡಾಕ್ಟರರಿಗೆ ಕೊಡಬೇಕಾಗಿದ್ದಿಲ್ಲ. ಶೀಸೆ ಒಂದಕ್ಕೆ ೧-೮-೦ ಟಪಾಲು ಚಾರ್ಜು ವಗೈರೆ ಅಲಾಯಿದಾ ಬೀಳುವದು.

ಜೀವನಾಧಾರ ಡಿಪೊ,
ಮೈಸೂರ.
ಬ್ರ್ಯಾಂಚ— **ಜೀವನಾಧಾರ ಡಿಪೊ,**
ಹುಬ್ಬಳ್ಳಿ.

ನಾಗಪೂರದ ಚುನಾವಣೆಯು-

ಪ್ರತಿಯೋಗಿ ಸಹಕಾರಿಗಳಾದ ಡಾಕ್ಟರ ಮುಂಜೆಯವರು ರಾಜೀನಾಮೆ ಕೊಟ್ಟ ಬಳಿಕ ನಾಗಪೂರ ಭಾಗದ ಕೌನ್ಸಿಲದ ಉಪಚುನಾವಣೆಯಾಯಿತು. ಪ್ರತಿಯೋಗಿ ಸಹಕಾರಿಗಳು ತಮ್ಮ ಪತಿಯಿಂದ ಮುನಿಸಿಪಾಲಿಟಿಯ ಅಧ್ಯಕ್ಷರಾಗಿರುವ ಮಿ. ಭವಾನಿಶಂಕರ ನಿಯೋಗಿಯವರನ್ನು ನೇಮಿಸಿದರು. ಶ್ರೀ ನೀಲಕಂಠರಾವ ಉದೋಜಿಯವರು ಸ್ವರಾಜ್ಯ ಪಕ್ಷದ ಉಮೇದವಾರರಾದರು. ಮೊದಲನೆಯವರಿಗೆ ೧೧೧೪ ಮತ್ತು ಎರಡನೆಯವರಿಗೆ ೧೩೨೪ ಮತಗಳು ಬಿದ್ದು, ಸ್ವರಾಜ್ಯ ಪಕ್ಷದ ಜಯವಾಯಿತು. ಬ್ರಾಹ್ಮಣೇತರರು ಸ್ವರಾಜ್ಯ ಪಕ್ಷದ ಉಮೇದವಾರರಿಗೆ ಮತಕೊಟ್ಟರೆಂಬದು ವಿಶೇಷ ಸಂಗತಿಯು.

ಕುರುಂಗದಲ್ಲಿ ಸಕ್ತಿಯ ಶಿಕ್ಷಣ-

ಬ್ರಹ್ಮದೇಶದಲ್ಲಿ ಯೆರವಡೆಯಂಥ ನಾಲ್ಕು ದೊಡ್ಡ ಕುರುಂಗಗಳುಂಟು. ಇಲ್ಲಿಯ ಕೈದಿಗಳಲ್ಲಿ ಎರಡು ವರ್ಗ ಮಾಡುವರು. ೨೫ ವರ್ಷದೊಳಗಿನವರಿಗೆ ದಿನಾಲು ಸಕ್ತಿಯ ಶಿಕ್ಷಣ ಕೊಡುವರು ಮತ್ತು ೩೫ ವರ್ಷ ವಯಸ್ಸಿನವರಿಗೆ ಕಲೆಯನ್ನು ವಿದ್ಯೆಯನ್ನು ಕಲಿಸುವರು. ಕೈದಿಗಳು ಬಿಡುಗಡೆಯಾದ ಮೇಲೆ, ಸನ್ಮಾರ್ಗಕ್ಕೆ ಹತ್ತಬೇಕೆಂಬದೇ ಶಿಕ್ಷಣದ ಉದ್ದೇಶವಾಗಿರುತ್ತದೆ.

ಬಹಿಷ್ಕಾರದ ಪ್ರಭಾವ-

ಲಾಹೋರ ಮ್ಯುನಿಸಿಪಾಲಿಟಿಯ ಕಾಯದೆಯಲ್ಲಿ ಹಿಂದೂ ಜನರಿಗೆ ಅಹಿತವಾಗುವಂಥ ಕಲಮುಗಳಿದ್ದದರಿಂದ, ಹಿಂದೂ ಜನರು ಚುನಾವಣೆಗೆ ಬಹಿಷ್ಕಾರ ಹಾಕಿದ್ದರು. ರಾಯಸಾಹೇಬ ಚವಧರಿ ಚೌಧರಾಮರೆಂಬ ಹಿಂದೂ ಗೃಹಸ್ಥರು ಈಗ ಮಂತ್ರಿಯಾಗಿದ್ದಾರೆ. ಕಾಯದೆಯ ದೋಷಗಳನ್ನು ತೆಗೆದು ಹಾಕುವೆವೆಂದು ಇವರು ಮಾತು ಕೊಟ್ಟದ್ದರಿಂದ ಹಿಂದೂ ಜನರು ಸದ್ಯ ನಾಮಿನೇಶನದಿಂದ ಮ್ಯುನಿಸಿಪಾಲಿಟಿಯಲ್ಲಿ ಪ್ರವೇಶ ಮಾಡಲು ಒಪ್ಪಿದ್ದಾರೆ.

ಜನ್ಮಭೂಮಿಯ ಮೇಲಿನ ಪ್ರೇಮ-

ಈ ದೇಶದಲ್ಲಿರುವ ಪಾರ್ಸಿಗಳಿಗೆ ಜನ್ಮಭೂಮಿಯ ಮೇಲೆ ಪ್ರೇಮವಾಗಿದೆ. ತರುಣರನ್ನು ಇರಾಣಕ್ಕೆ ಕಳಿಸಿ, ಅಲ್ಲಿಯೂ ವಸಹಾತು ಮಾಡಬೇಕು. ಹಿಂದುಸ್ಥಾನ ಮತ್ತು ಇರಾಣದ ನಡುವೆ ವ್ಯಾಪಾರ ಬೆಳಿಸಬೇಕು. ತೆಹರಾಣದಲ್ಲಿರುವ ಹಾಯಸ್ಕೂಲಿಗೆ ದ್ರವ್ಯಸಹಾಯ ಮಾಡಬೇಕು. ಎಂಬದಾಗಿ ಮುಂಬಯಿಯ ಪಾರ್ಸಿಗಳು ಸಭೆ ಮತ್ತು ವ್ಯಾಖ್ಯಾನಗಳಿಂದ ಸ್ವಜನರಲ್ಲಿ ಚಳವಳಿ ಹುಟ್ಟಿಸಿದ್ದಾರೆ.

ನೀರಿನ ದುರ್ಭಿಕ್ಷ-

ಬೆಂಗಳೂರಲ್ಲಿ ನೀರಿನ ತುಟಾಗ್ರತೆಯಾಗುವದು. ದಂಡಿನವರು ಪೂರೈಕೆ ಮಾಡಲು ಈಗಿನಿಂದಲೇ ವ್ಯವಸ್ಥೆ ಮಾಡಿದ್ದಾರೆ. ಹೊಸಕೋಟೆಯ ಹತ್ತರಿರುವ ಯಲಿಮಲ್ಲಪ್ಪನಶೆಟ್ಟಿಯ ಕೆರೆಯಿಂದ ಇಂಜಿನು ಹಚ್ಚಿ ನೀರು ತರುವರು. ಊರೊಳಗೆ ಹತ್ತಿಪ್ಪತ್ತು ದೊಡ್ಡ ದೊಡ್ಡ ಬಾವಿಗಳನ್ನು ತೋಡಿ, ವಿದ್ಯುತ್ತಿನ ಸಹಾಯದಿಂದ ನೀರನ್ನು ಹೊರಕ್ಕೆ ತೆಗೆಯುವರು. ಇವುಗಳ ಹೊರ್ತು ಚಿಕ್ಕ ಚಿಕ್ಕವಾದ ತಾತ್ಕಾಲಿಕ ಗುಂಡಲು ತೋಡುವರು. ಸಮಯ ಬಿದ್ದರೆ- ಮನೆಮನೆಗೆ ಇದ್ದಂಥ ನಳಗಳನ್ನು ಬಂದು ಮಾಡಿ, ಸಾರ್ವಜನಿಕ ನಳಗಳಲ್ಲಿ ಪ್ರಮಾಣದ ಮೇಲೆ ನೀರು ಬಿಡುವರು. ಸದ್ಯದಲ್ಲಿ ಮೇ ತಿಂಗಳ ೧೫ ನೆಯ ತಾರೀಖಿನ ವರೆಗೆ ಸಾಲುವಷ್ಟು ನೀರಿನ ಪೂರವಠೆಯುಂಟು.

ADVERTISEMENT

Wanted a qualified compounder on pay Rs. 20/- rising to Rs. 25/- by an annual increment of Rupee one nly with free quarters in the Dispensary at Savanur. Apply with testimonials before 25th February 1926 to the undersigned.

Date 1-2-26 Divan's office, Savanur. } K. G. Kalghatgi Divan Savanur.

ಧಾರವಾಡದಿಂದ ಗದಗ ಮಾರ್ಗವಾಗಿ ಬೆಟಗೇರಿಗೆ ಮೋಟಾರ ಸರ್ವಿಸ.

ನಾವು ಧಾರವಾಡದಿಂದ ದಿನಾಲು ಮುಂಜಾನೆ ೭ ಗಂಟೆಯಿಂದ ಮೋಟಾರ ಬಿಟ್ಟು ಗದಗ, ತಡಕೋಡ, ಕೊಟಬಾಗಿ ಕಲ್ಲೂರದಿಂದ ಬೆಟಗೇರಿಗೆ ೯ ಗಂಟೆಗೆ ಮುಟ್ಟಿಸುವೆವು. ಅಲ್ಲಿಂದ ತಿರಿಗಿ ಕೂಡಲೆ ಹೊರಟು ಕಚೇರಿಯ ವೇಳೆಗೆ ೧೦॥ ಗೆ ಧಾರವಾಡಕ್ಕೆ ತರುವೆವು. ಹೆಚ್ಚಿಗೆ ಪ್ಯಾಸೆಂಜರರು ಸಿಕ್ಕರೆ ಸಾಯಂಕಾಲದಲ್ಲಿಯೂ ಮೋಟಾರ ಬಿಡುವೆವು. ಧಾರವಾಡದಲ್ಲಿ ಮಾರ್ಕೆಟ ಧರ್ಮಶಾಲೆಯ ಹತ್ತರ ನಮ್ಮ ಹಾಟೆಲದಿಂದ ಮೋಟಾರ ಬಿಡುವೆವು.

ಬೆಟಗೇರಿ ಎಜಂಟರು ಮಿ. ಶಮಶುದ್ದೀನ ಬಾರೀಗಿಡದ ಮತ್ತು ಮಿ. ಹುಶೇನಸಾಹೇಬ ಮೊಡವಾಡ ಇವರಲ್ಲಿ ಟಿಕೀಟುಗಳು ಮಾರಲಿಕ್ಕೆ ದೊರೆಯುವವು.

ಎಮ್. ಕೆ. ಸವದಾಗರ
ಧಾರವಾಡ

ಜಾಹೀರಾತು.

ಇಂಪೀರಿಯಲ ಬ್ಯಾಂಕ ಆಫ ಇಂಡಿಯಾ.

ಸೇವ್ಹಿಂಗ್ಸ ಬ್ಯಾಂಕು.

ಈ ನೋಟೀಸಿನಿಂದ ಜಾಹೀರ ಪಡಿಸುವದೇನಂದರೆ—

ಸನ್ನ ೧೯೨೬ನೇ ಇಸವಿಯ ಮಾರ್ಚ ತಿಂಗಳ ೧ನೇ ತಾರೀಖಿನಿಂದ ಈ ಬ್ಯಾಂಕಿನ ಸೇವಿಂಗ್ಸ ಬ್ಯಾಂಕ ಅಕೌಂಟಿನ ಬಡ್ಡಿಯ ದರವನ್ನು ನೂರಕ್ಕೆ ವರ್ಷಕ್ಕೆ (೩॥) ಮೂರೂವರೇ ರೂಪಾಯಿಗಳ್ಕ್ಕು, ಮತ್ತು ಸೇವ್ಹಿಂಗ್ಸ ಬ್ಯಾಂಕ್ಸ ಡಿಪಾಜಿಟ ಅಕೌಂಟಿನ ಬಡ್ಡಿಯ ದರವನ್ನು ಸನ್ನ ೧೯೨೬ನೇ ಇಸವಿಯ ಮೇ ತಿಂಗಳ ೧ನೇ ತಾರೀಖಿನಿಂದ ನೂರಕ್ಕೆ ವರ್ಷಕ್ಕೆ (೩॥) ಮೂರೂವರೇ ರೂಪಾಯಿಗಳ್ಕ್ಕು ಇಳಿಸಲ್ಪಟ್ಟಿರುತ್ತದೆ. ತಿಳಿಯುವದು. ತಾ॥ ೧೩ನೇ ಫೇಬ್ರುವರಿ ೧೯೨೬ ಇ॥

ಎನ್. ಎಮ್. ಮೂರೇ.
ಡಿ. ಎಸ. ಪ್ಯಾಕಸ್ಲಿಯರ
(ಆಫಿಶಿಯ)
ಮ್ಯಾನೇಜಿಂಗ ಗವ್ಹರ್ನರರು.

ದಿ ಧಾರವಾಡ ಅರ್ಬನ ಕೋಆಪರೆಟಿವ್ಹ ಬ್ಯಾಂಕ ಲಿಮಿಟಿಡ್

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೆಂದಿಗೆಯ ಆರುಲಕ್ಷದ ಮೇಲುಂಟು. ಚೆಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಿಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗಿ,
ಮ್ಯಾನೆಜಿಂಗ ಡಾಯರೆಕ್ಟರ.

ದಿ. ಕರ್ನಾಟಕ ಇಂಡಸ್ಟ್ರಿಯಲ ಬ್ಯಾಂಕಲಿಮಿಟೆಡ ಧಾರವಾಡ

ಈ ಬ್ಯಾಂಕಿನಲ್ಲಿ ಮುದ್ದತಿ ಠೇವುಗಳನ್ನು ಆರು ತಿಂಗಳು, ವರ್ಷ ಮತ್ತು ಅದಕ್ಕೂ ಹೆಚ್ಚು ಕಾಲಾವಧಿಯ ವರೆಗೆ ಇಟ್ಟುಕೊಳ್ಳಲಾಗುವದು. ಆರು ತಿಂಗಳಿಗೆ ನೂರಕ್ಕೆ ಐದು ರೂಪಾಯಿ ಮತ್ತು ವರ್ಷಕ್ಕೆ ಆರುವರಿ ರೂಪಾಯಿ ಬಡ್ಡಿ ದೊರೆಯುವದು ಹೆಚ್ಚು ಕಾಲದ ಠೇವಿಯಿಂದ ಸಮಕ್ಷಮ ಗೊತ್ತು ಮಾಡಿಕೊಳ್ಳಬಹುದು. ದಾಗಿನೆಗಳೂ ಪತ್ರೀ ಇಟ್ಟುಕೊಳ್ಳಲ್ಪಡುವವು ಚಕ್ಕ ವ ಹುಂಡಿಯ ವ್ಯವಹಾರವು ಮಾಡಲ್ಪಡುವವು

ಮೆಸರ್ಸ ದೇಶಪಾಂಡೆ ಮತ್ತು ಕಂಪನಿ ಮ್ಯಾನೇಜಿಂಗ ಏಜಂಟ್ಸ | ಅಣ್ಣಾಚಾರ್ಯ ಶಾಸ್ತ್ರಿ ಚೇರಮನ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ರೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿರುತ್ತದೆ.

ಎ. ಕೆ. ಕಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

ಟಿ. ಎಸ್. ಮೋಟಾರ ಸರ್ವ್ಹೀಸ

ಹುಬ್ಬಳ್ಳಿ.

ಶಿವರಾತ್ರಿ ಸಮಯದಲ್ಲಿ ಗೋಕರ್ಣಕ್ಕೆ ಹೋಗುವ ಪ್ರಯಾಣಿಕರ ಸೌಕರ್ಯಕ್ಕಾಗಿ.

ತಾ|| ೧—೨—೨೬ ರಿಂದ ರೆಗ್ಯುಲರ ಸರ್ವ್ಹೀಸ ಇಟ್ಟಿದೆ.

—ಃ ಕಾಲಕ್ರಮಗಳು ಃ—

೧. ಹುಬ್ಬಳ್ಳಿ ಬಿಡುವದು — ಗೋಕರ್ಣ ಸೇರುವದು
ಬೆಳಿಗ್ಗೆ ೭ ಘಂಟೆ. — ಸಾಯಂಕಾಲ ೫ ಘಂಟೆ
ಸಾಯಂಕಾಲ ೫ ಘಂಟೆ — ಬೆಳಿಗ್ಗೆ ೫ ಘಂಟೆ

೨ ಸಾಗರ ಬಿಡುವದು — ಗೋಕರ್ಣ ಸೇರುವದು
ಬೆಳಿಗ್ಗೆ ೭ ಘಂಟೆ — ಸಾಯಂಕಾಲ ೫ ಘಂಟೆ

ಶಿಮೋಗಾ } ಎಮ್. ಮಂಜಪ್ಪಾ,
೨೨-೧-೧೯೨೬ } ಪ್ರೊಪ್ರಾಯಿಟರ.

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲೇಕೆ? ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ? ಸನ್ನಿತಲೆಯೋ? ಮೈಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು?

ಅಜ್ಜನು— ಕಂದಾ— ಹೌದು ಮೈಯೆಲ್ಲಾ ನೋಯುತ್ತದೆ.

ಕಂದ— ಹಾಗಾದರೆ ಮೊಮೆಂಟ ಕ್ಯೂಯರ ತಕ್ಕೊಳ್ಳು. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಡ್ರುವಿ ಕಿಮ್ಮತ್ತು ಶೀಶೆ ೫ಸು. ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ಶೀಘ್ರ ಮಾಡಿ ಕೊಡುವೆವು.

ವಿಳಾಸ—ಗೋವಿಂದ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತು ಡ್ರಗಿಸ್ಟ
ಸ್ಟೇಶನರೋಡ ಹುಬ್ಬಳ್ಳಿ.

ವ್ರಣಸಂಹಾರ

ಅಥವಾ

ಘಾಯದ ಮೇಲಿನ ಮುಲಮು

ಈ ಮುಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣಗಜ್ಜಿ, ಗಡ್ಡೆ ಯಜಟ್ಟಿ, ಭಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಬೇಕೆಂದು ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ. ಹೊಸ್ತರದವರಿಗೆ ಅಂಚೇವೆಚ್ಚ ಬೇರೆ

ಹುಬ್ಬಳ್ಳಿಯ ಏಜಂಟರು— ದಿ ಕರ್ನಾಟಕ ಮೆಡಿಕಲ ಸ್ಟೋರ್ಸ— ಸ್ಟೇಶನ ರೋಡ ಹುಬ್ಬಳ್ಳಿ ಕೂಡ ಮತ್ತು ತಯಾರಕರಿಂದ ದೊರೆಯುವದು } ಎಸ್. ಎಮ್. ಪೆಂಟರ ಶಿರೀಬಡ್ಕಾರ ಬೆಳಗಾವಿ

ಜಾಹೀರ ನೋಟೀಸು.

ಕೆಳಗೆ ಸಹಿ ಮಾಡಿದವರು ತಿಳಿಸುವದೇನಂದರೆ ನಮ್ಮ ಖಾಸ ತಾಯಿ ಆದ ನಸ್ಸೀಬಿ ಕೋಂ ಎಮಾಮಸಾಬ ಧೋಬಿವಾಲೆ ಸಾಕೀನ ಹೊಸಹುಬ್ಬಳ್ಳಿ ಇವಳಿಗೆ ನಮ್ಮ ಅಮ್ಮನವರಿಂದಾ ಹೊಸ ಹುಬ್ಬಳ್ಳಿಯ ಪೈಕಿ ಕವಲಪೇಟೆಯಲ್ಲಿರತಕ್ಕ ಮ್ಯುನಿಸಿಪಾಲ್ಟಿ ನಂಬರ ೧೫೯೭, ೧೫೯೮, ೧೫೯೯ನೇ ಹಂಚಿನ ಮನೆಗಳು ವ ಬೈಲ ಜಾಗಾ ಸಹಿತಾ ಬಂದಿದ್ದು ಇವತ್ತಿನ ವರೆಗೂ ನಮ್ಮ ವಹಿವಾಟಿಯಲ್ಲಿರುತ್ತವೆ. ಸದರ ಆಸ್ತಿಗಳಿಗೆ ನಮ್ಮ ಮುಸಲ್ಮಾನಿ ಧರ್ಮದ ಪ್ರಕಾರ ನಾನು ಪೂರ್ಣ ಮಾಲಿಕಳು ವ ವಾರ್ಸದಾರಳಿದ್ದೇನೆ. ಹೀಗಿದ್ದು ಈಗ ನಮ್ಮ ವಿರುದ್ಧ ಜನರ ದುರ್ಬೋಧನೆಯಿಂದಾ ನಮ್ಮ ತಾಯಿಯು ಸದರ ಆಸ್ತಿಗಳನ್ನು ಹೊಸಹುಬ್ಬಳ್ಳಿ ಕವಲಪೇಟೆಯಲ್ಲಿರತಕ್ಕ ಅಪ್ಪಣ್ಣಾ ಬಿನ್ನ ಶಿವಪ್ಪಾ ದಲಬಂಜೆ ಇವರ ಹೆಸರಿಲೇ ಮಾಡು ಪೋಕಳ ಕಾಗದಾ ಬರಕೊಟ್ಟಂತೆ ಈಗ ಪುಕಾರೆ ಆಗಿದೆ ಆದ್ದರಿಂದಾ ಎಲ್ಲ ಜನರಿಗೆ ತಿಳಿಸುವದೇನಂದರೆ- ನಮ್ಮ ತಾಯಿಗೆ ನನ್ನ ಹೊರತಾಗಿ ಯಾವದೂ ಸಂತತಿಯಿಲ್ಲಾ. ನಾನೊಬ್ಬಳೇ ಮಾಲೀಕಳಿದ್ದು ಸದರಿ ಆಸ್ತಿಗಳನ್ನು ಯಾರೂ ನನ್ನ ಸಮ್ಮತಿ ಹೊರತಾಗಿ ಯಾವದೇ ಕರಾರಿನಾ ಬರಿಸಿಕೊಂಡಿದ್ದರೆ ಅಥವಾ ಮುಂದೆ ಬರೆಸಿಕೊಂಡರೂ ಸಹ ಅವು ಯಾವತ್ತೂ ರದ್ದವಿದ್ದು ಆ ಬೋಜ್ಯಾ ಸದರ ಆಸ್ತಿಗಳ ಮೇಲೆ ವ ನನ್ನ ಮೇಲೆ ಯಾವ ರೀತಿಯಿಂದಾಗೂ ನಡಿಯಲಿಕ್ಕಿಲ್ಲಾ. ನಮ್ಮ ತಾಯಿಯು ಅಜಮಾಸ ೮೦-೮೫ ವರ್ಷದ ವಯೋವೃದ್ಧಳಿದ್ದು ಅವಳ ಬುದ್ಧಿ ಯೇನೊಂದು ಸ್ಥಿರವಿಲ್ಲದ್ದರಿಂದಾ ಅವಳು ಮಾಡಿ ಕೊಟ್ಟ ಯಾವದೇ ಕಾಗದಗಳು ನಡಿಯಲಾರವು ತಿಳಿಯುವದು. ತಾ. ೧೨-೨-೨೬ನೇ ಇಸ್ವಿ

ಈ ಯಡಗ್ಯೆ ಹಬ್ಬಿಟ್ಟನ ಗುತಾರ ಮೆಮ್ರು ಮಬಿ ಕೋಂ ಅಬ್ದುಲರಹಿಮಾನ ಮಾಗಾವಿ ಸಾ. ಹುಬ್ಬಳ್ಳಿ ದನಕಟಕರಪೋಣಿ ಇವಳು ಮಾಡಿದ್ದು ಅದೆ.

ವರ್ಗಣಿಯ ದರ

ನಿತ್ಯಪತ್ರಕ್ಕೆ
೧೨ ತಿಂಗಳಿಗೆ — ೧೨—೮—೦ ರೂ
೬ „ — ೬—೦—೦ ರೂ
೩ „ — ೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ — ೩—೧೨—೦ ರೂ

ವಿಶೇಷ ಮಾಹಿತಿ ಕಳಿಸ ವಿಳಾಸಕ್ಕೆ
ವ್ಯವಸ್ಥಾಪಕರ ವರ್ತಮಾನ ಗಾರವಾಡ-

ಈ ಪತ್ರವನ್ನು ಆನಂದ ಟಂಕಸಾಲೆ ವರಿವರ್ತಾಮಾನ ಹೊಸಕೇರಿ ಧಾರವಾಡದಲ್ಲಿರುವ ತಮ್ಮ ವರ್ತಮಾನದ ಮುದ್ರಣಾಲಯದಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

R. N. B 1443

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭) ಧಾರವಾಡ ಬುಧವಾರ ತಾರೀಖು ೨೪ನೇ ಫೇಬ್ರುವರಿ ೧೯೨೬ (ಸಂಚಿಕೆ ೪೫

ಸರಕಾರದಿಂದ ಪೇಟೆಂಟ ದೊರಕಿದ

ಮಲ್ಹಾರ ಕಪ್ಪಲಿ.

ತೋಟಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟಿದ ಕೂಡಲೇ ಅದರ ಕೆಳಭಾಗದಲ್ಲಿಯ ಜಾಳಿಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಜಗ್ಗುತ್ತಲೇ ಜಾಳಿಗೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು [illegible] ಸ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ ೨೦ ರೂ.
ನಂ ೨	೫೫ ,,	,, ೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

NOTICE

It is hereby notified for public information that Mr. K. L. Deshpande S.T.C who was a teacher and Life Member of the Karnatak High School Dharwar has ceased to be so, with effect from the 19th instant and that no one should have any dealings with him in any capacity either on behalf of the K. E. Board or the K. H. School, Dharwar. All transactions carried on with the said Mr. Deshpande will not be legally binding on the Institution.

Dharwar 23-2-1926. } S. N. Punekar M. A. Principal, K. H. School Dharwar

ನೋಟೀಸು

ಕೆಳಗೆ ಕೊಟ್ಟ ನೋಟೀಸಿನ ದ್ವಾರ ಸಮಸ್ತರಿಗೆ ತಿಳಿಸುವದೇನಂದರೆ— ಮಿ॥ ಕೆ. ಎಲ್. ದೇಶಪಾಂಡೆಯವರು ಕರ್ನಾಟಕ ಹಾಯಸ್ಕೂಲಿನಲ್ಲಿ ಶಿಕ್ಷಕರೂ, ಮತ್ತು ಆಜೀವ ಸಭಾಸದರೂ ಇದ್ದರು. ಅವರನ್ನು ಇದೇ ತಿಂಗಳ ೧೯ ನೇ ತಾರೀಖಿನಿಂದಾ ಶಿಕ್ಷಕರ ಕೆಲಸದಿಂದಲೂ, ಆಜೀವ ಸಭಾಸದತ್ವದಿಂದಲೂ ದೂರ ಮಾಡಿರುತ್ತದೆ. ಕಾರಣ, ಕರ್ನಾಟಕ ಎಜ್ಯುಕೇಶನ್ ಬೋರ್ಡಿನ ಅಥವಾ ಕರ್ನಾಟಕ ಹಾಯಸ್ಕೂಲಿನ ಪರಿಯಿಂದ ಅವರ ಸಂಗಡ ಯಾರೂ ಯಾವ ಪ್ರಕಾರದ ವ್ಯವಹಾರವನ್ನು ಮಾಡಕೂಡದು. ಸದರಿ ಮಿ॥ ದೇಶಪಾಂಡೆಯವರ ಸಂಗಡ ನಮ್ಮ ಸಂಸ್ಥೆಯ ಹೆಸರಿನ ಮೇಲೆ ಮಾಡಿದ ಎಲ್ಲ ವ್ಯವಹಾರಗಳು ಸಂಸ್ಥೆಗೆ ಕಾಯದೆಯಿಂದಾ ಬಂಧನಕಾರಕವಾಗಲಾರವು.

ಧಾರವಾಡ ೨೩-೨-೧೯೨೬ } ಎಸ್. ಎನ್ ಪುಣೇಕರ ಎಮ್. ಎ. ಪ್ರಿನ್ಸಿಪಾಲ, ಕರ್ನಾಟಕ ಹಾಯಸ್ಕೂಲು ಧಾರವಾಡ

ಧಾರವಾಡದಿಂದ ಗದಗ ಮಾರ್ಗವಾಗಿ ಬೆಟಗೇರಿಗೆ ಮೋಟಾರ ಸರ್ವಿಸ.

ನಾವು ಧಾರವಾಡದಿಂದ [illegible] ಮೋಟಾರ ಬಸ್ಸು ಗದಗ, ಕೊಣ್ಣೂರ, [illegible] ಬೆಟಗೇರಿಗೆ [illegible] ಬಿಟ್ಟಿರುವೆವು. [illegible] ಬೆಳಿಗ್ಗೆ ಹೊರಟು [illegible] ಸಾಯಂಕಾಲ [illegible] ಗೆ ಧಾರವಾಡಕ್ಕೆ ಬರುವವು. [illegible] ಸಾಯಂಕಾಲದಲ್ಲಿ [illegible] ಮೋಟಾರ ಬಿಡುವೆವು. ಧಾರವಾಡದಲ್ಲಿ ಮಾರ್ಕೆಟ ಧರ್ಮಶಾಲೆಯ ಹತ್ತರ ನಮ್ಮ [illegible] ದಿಂದ ಮೋಟಾರ ಬಿಡುವೆವು.

ಬೆಟಗೇರಿ ಏಜಂಟರು ಮೆ. [illegible] ಮೆ. [illegible] ದ ಹವರಲ್ಲಿ ಟಿಕೇಟುಗಳು ಮಾರಲಿಕ್ಕೆ ದೊರೆಯುವವು.

ಎಮ್. ಕೆ. ಸವದಾಗರ
ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ [illegible] ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ಪಾಲಿಸಿಗಳನ್ನು ಪತ್ರೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಸನ್ನೆರಡು ಆಣೆಯಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೨೪-೨-೨೬ ನೇ ಇಸ್ವಿ

ಬಾದಶಹರ ದೇಶಾಭಿಮಾನ.

—೦—

ಬಾದಶಹ ಪಂಚಮ ಜಾರ್ಜರು ಹ್ವಾಯಿಟ ಸಿಟಿ ಎಂಬ ಪಟ್ಟಣದಲ್ಲಾದ ಔದ್ಯೋಗಿಕ ಪ್ರದರ್ಶನವನ್ನು ನೋಡಲಿಕ್ಕೆ ಹೋದಾಗ, ಅಲ್ಲಿ ಪರದೇಶೀಯ ಟಾಯಿಪ ರಾಯಟರಗಳನ್ನು ನೋಡಿ "ಅನ್ಯ ಖಾತೆದ ಸರಕಾರಗಳು ಇಂಗ್ಲಂಡದ ಟಾಯಿಪರಾಯಟರಗಳನ್ನು ಉಪಯೋಗಿಸುತ್ತಿರುವಾಗ ನೀವೇಕೆ ಪರದೇಶದ ಒಡಿವೆಗಳನ್ನು ಉಪಯೋಗಿಸುತ್ತೀರೆಂದು" ವ್ಯವಸ್ಥಾಪಕರಿಗೆ ಪ್ರಶ್ನೆ ಮಾಡಿದರು. ವ್ಯವಸ್ಥಾಪಕರಾದ ಸರ ಫಿಲಿಫ ಕನ್ನಲಿಫ ಲಿಸ್ಟರಸಾಹೇಬರು ವಿಚಾರ ಮಾಡುವೆವು ಎಂಬದಾಗಿ ನೊತ್ತು ಮುಂದೂಡುವ ಉತ್ತರ ಕೊಟ್ಟರು. ಆದರೆ ತಾವು ಕೊಡುವ ಉತ್ತರವು ಹಿಂದುಸ್ಥಾನದ ಕೌನ್ಸಿಲಗಳಲ್ಲೆಂಬದು ಅವರಿಗೆ ತಿಳಿಯಲೇ ಇಲ್ಲ. ಸರ ಕನ್ನಲಿಫಸಾಹೇಬರ ಜಾರಿಸಿಕೊಳ್ಳುವ ಉತ್ತರದಿಂದ ಬಾದಶಹರು ಎಷ್ಟು ಸಮಾಧಾನ ಪಡದೆ "ಈ ಕೃತ್ಯವು ನಾಚಿಕೆಯ ಮಾತಾಗಿರುತ್ತದೆ. ನಾನು ಸ್ವತಃ ಈ ಬಗ್ಗೆ ವಿಚಾರ ಮಾಡುವೆನು" ಎಂಬದಾಗಿ ನುಡಿದರು. ಬಾದಶಹರ ಭಾಷಣ ಕೇಳಿದನಂತರ ಬ್ರಿಟಿಶ ಟಾಯಿಪರಾಯಟರಗಳು ಅಮೇರಿಕೆಗಿಂತ ಕನಿಷ್ಠವಾಗಿರುತ್ತವೆಂದೂ ಈ ಬಗ್ಗೆ ಪರೀಕ್ಷೆ ಮಾಡಿಸುವೆವೆಂದೂ ಪಾರ್ಲಮೆಂಟ ಸಭೆಯಲ್ಲಿ ವೆ. ವಸ್ಸಾಕಫೀಲಸಾಹೇಬರು ಭಾಷಣ ಮಾಡಿದ್ದಾರೆ. ಬಾದಶಹರು ಇಂಗ್ಲಂಡದ ವಸ್ತುವಿನ ಬಗೆಯಿಂದ ಜಾಜ್ವಲ್ಯವಾದ ಸ್ವದೇಶಭಕ್ತಿಯನ್ನು ತೋರಿಸಿದಂತೆ, ಅವರ ಪ್ರತಿನಿಧಿಗಳಾದ ಸರ್ವಾಧಿಪತಿಗಳು ಹಿಂದುಸ್ಥಾನದಲ್ಲಿ ಹಿಂದೂ ದೇಶಭಕ್ತಿಯನ್ನು ತೋರಿಸತಕ್ಕದ್ದು ಅವಶ್ಯವಾದ ಕರ್ತವ್ಯಕರ್ಮವಲ್ಲವೇ?

ಪಾಂಡಿಚೇರಿಯಲ್ಲಿದ್ದ ಬಾಬೂ ಅರವಿಂದ ಘೋಷರನ್ನು ಕಾಣಲಿಕ್ಕೆ ಹೋಗುವಂಥ ಸಗ್ಗೃಹಸ್ಥರನ್ನು ಪೋಲೀಸ ಸ್ಟೇಶನಕ್ಕೆ ಕರಕೊಂಡು ಹೋಗಿ, ಅವರ ಎರಡೂ ಕೈಗಳ ಗುರ್ತುಗಳನ್ನು ತಕ್ಕೊಳ್ಳುವದಲ್ಲದೆ, ಬೇರೆ ರೀತಿಯಿಂದ ಅಪಮಾನ ಪಡಿಸುವರು. ಇಂಥ ಅಪಮಾನಕ್ಕೆ ಮದ್ರಾಸ ಕೌನ್ಸಿಲದ ಒಬ್ಬ ಮೆಂಬರರೇ ಗುರಿಯಾಗಿದ್ದಾರೆ.

ಅಧ್ಯಕ್ಷರನ್ನು ಬಂತರ್ಫ ಮಾಡುವ ಠರಾವು.

ಬಂಗಾಲದ ಕಾಯದೆ ಕೌನ್ಸಿಲದಲ್ಲಾದ ಕೋಲಾಹಲದ ವಿಸ್ತೃತವಾದ ಸಂಗತಿಯನ್ನು ಈ ಮೊದಲು ಬರೆದಿರುತ್ತೇವೆ. ಈ ಅನಾಯುಕ್ತ ಸಂಭವಿಸಿದ ಮರುದಿವಸ ಕೂಡಿದ ಸಭೆಗೆ ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷೀಯರು ಗೈರ ಹೋಗದ್ದರಿಂದ ಕೌನ್ಸಿಲ ಮುಂದಿರುವ ಭಣಗುಟ್ಟಿತು. ಈ ಪ್ರಕಾರ ಹಾಳುಸುರಿಯುವ ಸಭೆಯಲ್ಲಿ ನೆ. ಡೋನಾಲ್ಡಸಾಹೇಬರು ಆದಿನ ಪತ್ರಿಕೆಯನ್ನು ಓದಿ ಧನ್ಯರಾದರು. ಇರಲಿ ಅಧ್ಯಕ್ಷರೂ ಅವರಿಗೆ ಎದುರುತ್ತರ ಮಾಡಿದೆಂಬವರೂ ಪರಸ್ಪರ ಖೇದ ಪ್ರದರ್ಶನ ಮಾಡಿ, ರಾಜಿಯಾಗಿ ಸುರಳೀತವಾಗಿ ಕೆಲಸ ಸಾಗಿಸಬೇಕೆಂದು ಕೆಲವರು ಸೂಚಿಸಿ, ರಾಜಿಯ ಸಂಧಾನ ನಡೆಸಿದರು. ಆದರೆ ಇದು ಅನೇಕರಿಗೆ ಸಮ್ಮತವಾಗಲಿಲ್ಲ. ಅಧ್ಯಕ್ಷರನ್ನು ಕೆಲಸದಿಂದ ದೂರ ಮಾಡಬೇಕೆಂಬ ಠರಾವನ್ನು ಇವರು ನಾಮದಾರ ಗವ್ಹರ್ನರಸಾಹೇಬರ ಕಡೆಗೆ ಕಳಿಸಿದ್ದು, ಇದನ್ನು ಕೌನ್ಸಿಲದಲ್ಲಿ ಕೆಲು ಸಾಹೇಬರು ಅನುಮೋದನ ಕೂಡ ಕೊಟ್ಟಿರುತ್ತಾರೆ.

ಸರಕಾರದ ಸೋಲು ಮೇಲಾಯಿತು.

—೦—

ಅಸೆಂಬ್ಲಿಯಲ್ಲಿ ಪ್ಯೂರಕಾಟಿಯಂಥ ೧೮೧೮ ನೇ ಇಸವಿಯ ಮೂರನೇ ರೆಗ್ಯುಲೇಶನ ಕಾಯದೆಯನ್ನು ರದ್ದು ಮಾಡಬೇಕೆಂಬದಾಗಿ ಪಂಡಿತ ಅಮರನಾಥರು ತಂದ ಠರಾವು ಮೂರೇ ಮತಗಳಿಂದ ಸಾಮಂಜೂರಾಗಿ ಸರಕಾರದ ಸೋಲು ಮೇಲಾಯಿತು. ಇದಕ್ಕೆ ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷೀಯರ ಕರ್ತವ್ಯ ಮೂಢತೆಯೇ ಕಾರಣವು. ಅಸೆಂಬ್ಲಿಯಲ್ಲಿ ಬಹಳವಾದರೆ ಸರಕಾರ ಪಕ್ಷಕ್ಕೆ ೫೦ ಜನರಾಗುವರು. ೧೦೧ ಜನರಲ್ಲಿ ೫೦ ಯಾವಾಗಲೂ ಅಲ್ಪಸಂಖ್ಯಾಕವಾಗುವದು. ಅಳರಸರ ಬಣದವರು ಬೇಯೂ ಎಂದು ಯಾವಾಗಲು ಹೇಳಲು ಕೂಡಲಿಕ್ಕೆ ಸಿದ್ಧರಿರುವರು. ಆದರೆ ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷೀಯರು ಗೃಹಕೃತ್ಯ ಅಥವಾ ಉದ್ಯೋಗ ವ್ಯವಸಾಯದಲ್ಲಿ ತೊಡಗಿದ್ದರಿಂದ, ಇದರ ಬಹುಮತವಾಗಲು ಸಮಯವಿರಲಿಲ್ಲ. ಒಬ್ಬರಲ್ಲ ಇಬ್ಬರಲ್ಲ. ೨೫ ಜನ ಮೆಂಬರರು ಬಂದಿರಲಿಲ್ಲ. ಮೆಂಬರರು ಸ್ವಾರ್ಥ ಪರಾಯಣರಾಗಿ ದೇಶಹಿತಘಾತವಾಗಲಿಕ್ಕೆ ಆಸ್ಪದ ಕೊಡುವದು ಅತ್ಯಂತ ಗರ್ಹಣೀಯವೂ, ಅಕ್ಷಮ್ಯವೂ ಆಗುತ್ತದೆ.

ತುರುಕಸ್ತ್ರೀಯರಿಗೆ ನವೀನ ಸ್ವಾತಂತ್ರ್ಯ.

—೦—

ತುರುಕ ರಾಜ್ಯದವರು ಮುಸಲಮಾನ ಧರ್ಮಶಾಸ್ತ್ರವನ್ನು ಬಹುತೇಕ ಬದಿಗೊತ್ತಿ, ಕ್ರಿಶ್ಚನ್ನ ಧರ್ಮದ ಕಾಯದೆಗಳನ್ನು ಅನುಸರಿಸಿದ್ದಾರೆ. ತುರುಕ ಸ್ತ್ರೀಯರ ಗೋಷಾ ತೆಗೆದು ಹಾಕಿ, ನೃತ್ಯ ಮಾಡಲು ಅಪ್ಪಣೆಕೊಟ್ಟದ್ದನ್ನು ಈ ಮೊದಲು ಬರೆದಿರುತ್ತೇವೆ. ಪ್ರಸ್ತುತದಲ್ಲಿ ಇವರ ವಿವಾಹ ವಿಷಯವಾಗಿ ಧರ್ಮಕ್ಕೆ ಎಷ್ಟು ಸಂಬಂಧವಿಡದೆ, ಸ್ವತಂತ್ರ ಕಾಯದೆ ಮಾಡಿದ್ದಾರೆ. ಈ ಕಾಯದೆಯ ನಿಯಮಗಳನ್ನು ಸ್ವಿಜರ್ಲಂಡದಿಂದ ತಕ್ಕೊಂಡಿದ್ದಾರೆ. ಇದರಿಂದ ಹೆಂಗಸು ಪಡೆಯುವ ಅಧಿಕಾರವು ಗಂಡಸರಷ್ಟೇ ಹೆಂಗಸರಿಗೂ ಬರುವದು. ತುರುಕರಲ್ಲಿ ನಾಲ್ವರ ತನಕ ಹೆಂಡರನ್ನು ಮಾಡಿಕೊಳ್ಳುವದುಂಟು. ಆದರೆ ಕಾಯದೆಯಿಂದ ಬಹು ಪತ್ನೀತ್ವವು ನಿಂತು ಹೋಗುವದು. ಒಬ್ಬನು ಒಬ್ಬಳನ್ನೇ ಮದುವೆಯಾಗತಕ್ಕದ್ದು. ಮುಸಲಮಾನ ಸ್ತ್ರೀಯರು ಕ್ರಿಶ್ಚನ್ನರನ್ನು ಮದುವೆಯಾಗುವರು. ಪರಧರ್ಮೀಯರ ಕೂಡ ವಿವಾಹ ಮಾಡಿಕೊಳ್ಳಬಾರದೆಂದು ಬಾಧಿಸುವ ನಿರ್ಬಂಧ ನಡೆಸುವರು.

ಇಂದೂರಿನ ಸುದ್ದಿಯು—

ಇಂದೂರಲ್ಲಿ ಶ್ರೀಮಂತ ಹೋಳಕರ ಮಹಾರಾಜರು ಕುಟುಂಬ ಪರಿವಾರ ಸಹಿತರಾಗಿ ಮಾಂಸಾಹಾರವನ್ನು ವರ್ಜ ಮಾಡಿದ್ದಾರೆ. ೧೫ ದಿವಸಗಳ ತನಕ ಕುರಿ ಕೋಳಿ ಪಕ್ಷಿ ಮೊದಲಾದ ಪ್ರಾಣಿಗಳನ್ನು ಆಹಾರಕ್ಕಾಗಿ ಕೊಲ್ಲಬಾರದೆಂದು ಡಂಗುರ ಹೊಡೆಸಿದ್ದಾರೆ. ೧೫ ದಿವಸಗಳ ತನಕ ಸಂಸ್ಥಾನದಲ್ಲಿರುವ ಮಾಂಸ ಮತ್ತು ಮೀನದ ಅಂಗಡಿಗಳು ಬಂದು ಮಾಡಲ್ಪಡುವವು.

ಬಾವಲಾ ಪ್ರಕರಣ ವಿಚಾರಣೆ ಮುಗಿಯುವ ತನಕ ದಿವಾನ ನರಶಿಂಗರಾವರು ಮಹಾರಾಜರ ಕೂಡ ಇರುವರು. ಸರ ಸಬನೀಸರು ಅಕ್ಟಿಂಗ ದಿವಾನರಾಗುವರು.

ಮಹಾರಾಜರು ಬಂದೂಕವೇ ಅಲ್ಲ ರೂಪಾಯಿ ಕೊಟ್ಟು ಬ್ಯಾರಿಸ್ಟರ ಸರ ಸೊಲಿಸಿಟರಸಾಹೇಬರನ್ನು ಎದರನೇ ಪಕ್ಷಕ್ಕೆ ಹೋಗದಂತೆ ಗೊತ್ತು ಮಾಡಿಕೊಂಡಿದ್ದಾರೆ.

ಅಹಮದಾಬಾದ ಮ್ಯುನಸಿಪಾಲಿಟಿಯ ಒಬ್ಬ ಮೆಂಬರರಾದ ಡಾಕ್ಟರ ಅಮಮಿಯಾ ಕಡುಮಿಯಾ ಎಂಬವರು ಮ್ಯುನಸಿಪಾಲಿಟಿಯ ಹದ್ದಿನಲ್ಲಿ ಓರ್ವ ಬೇಬಿಯ ಪ್ರೇತವನ್ನು ಹುಗಿಯಗೊಟ್ಟರೆಂಬ ಆರೋಪದಿಂದ ಅವರ ಮೇಲೆ ಖಟ್ಲೆ ಮಾಡಲ್ಪಟ್ಟಿದೆ.

ಅಮೇರಿಕೆಯಲ್ಲಿ ಮದ್ಯಪಾನ ಪ್ರತಿಬಂಧದ ಚಾತುರ್ಯ ಉಪಾಯವು.

—o—

ಅಮೇರಿಕಾ ಸರಕಾರದವರು ತಮ್ಮ ರಾಜ್ಯದಲ್ಲಿ ಮದ್ಯಪಾನವನ್ನು ಪೂರಾ ನಿಲ್ಲಿಸಿದ್ದಾರಷ್ಟೇ; ಇದರಲ್ಲಿ ಒಂದು ಛಿದ್ರವಿರುವದು. ಔಷಧದ ದೆಸೆಯಿಂದ ಡಾಕ್ಟರರಿಗೆ ಮದ್ಯ ವಿಕಲು ಅಪ್ಪಣೆ ಕೊಟ್ಟಿದ್ದಾರೆ. ಈ ನೆವಾಗಿ ಕುಡುಕರಿಗೆ ಕದ್ದು ಕುಡಿಯಲು ಸಾಧ್ಯವಾಗುತ್ತದೆ. ಅದು ದರಿಂದ ಡಾಕ್ಟರ ಜನರ ಹತ್ತಿರವಿರುವ ಎಲ್ಲ ಸಾರಾಯಿಯನ್ನು ಕೊಳ್ಳಬೇಕೆಂದು ಆಲೋಚಿಸಿದ್ದಾರೆ. ಈ ಪ್ರಕಾರ ಕೊಳ್ಳುವ ಸಾರಾಯಿಯು ಬೆಲೆಯು ಒಂದು ಅಬ್ಜವಾಗುವದು.

ವಿವಿಧ ವರ್ತಮಾನಗಳು.

—o—

ಬ್ರಹ್ಮದೇಶದ ಅರಣ್ಯದಲ್ಲಿ ಒಂದು ಬಿಳೀ ಆನೆ ಸಿಕ್ಕಿದೆ. ಅದನ್ನು ಪ್ರದರ್ಶನಕ್ಕಾಗಿ ಜಗತ್ತಿನ ತುಂಬ ಯಾವದೊಂದು ಸರಕಸ ಕಂಪನಿಗೆ ಕೊಡುವರು. ಅಥವಾ ಲಂಡನದ ಪಶು ಸಂಗ್ರಹಾಲಯಕ್ಕೆ ಕಳಿಸುವರು. ಬ್ರಹ್ಮೀ ಜನರಿಗೆ ಬಿಳೀ ಆನೆಯು ಪೂಜ್ಯ ಪ್ರಾಣಿಯಾಗಿರುತ್ತದೆ.

ಸಾಂಗಲಿ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಮಿ. ನಾಯಿಕರು ತಮ್ಮ ಕೆಲಸದಿಂದ ದೂರ ಮಾಡಬೇಕೆಂದು ಮಿ. ಭಾಗವತ ಮೊದಲಾದವರು ಮ್ಯುನಿಸಿಪಾಲಿಟಿಯಲ್ಲಿ ಠರಾವು ತಂದರು. ಆದರೆ ಅದು ಪಾಸಾಗಲಿಲ್ಲ.

ತಮಿಳ ನಾಡಿನ ಸ್ವರಾಜ್ಯ ಸಂಘದ ಅಧ್ಯಕ್ಷರಾದ ಶ್ರೀ ಶ್ರೀನಿವಾಸ ಅಯ್ಯಂಗಾರರೂ, ಆಂಧ್ರನಾಡಿನ ಅಧ್ಯಕ್ಷರಾದ ಶ್ರೀ ಪ್ರಕಾಶಮರೂ ಬರುವ ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷದ ಉಮೇದವಾರರಿಗೇ ಮತಕೊಡಬೇಕೆಂದು ಲೋಕಮತ ಜಾಗೃತ ಪಡಿಸಲು ಸಂಚಾರವನ್ನು ಪ್ರಾರಂಭಿಸಿದ್ದಾರೆ.

ನೀಲಗಿರಿಯ ಹತ್ತಿರಿರುವ ಪಾಯಕಾರದ ಕಡಸಲದಿಂದ ಹೊರಡುವ ವಿದ್ಯುಚ್ಛಕ್ತಿಯು ಕೊಯಮತ್ತೂರ ಮತ್ತು ಕಾಲಿಕತ್ತಕ್ಕೆ ವಿದ್ಯುತ್ತಿನ ದೀಪವನ್ನು ಪೂರೈಸುವರು.

ಹಿಂದುಸ್ಥಾನ ಸರಕಾರದವರು ಗಿರಣಿಗಳ ಮೇಲಿನ ಸುಂಕವನ್ನು ತೆಗೆದು ಹಾಕಿದ್ದರಿಂದ, ಮುಂಬಯಿ ಮತ್ತು ಅಹಮದಾಬಾದಿನ ಗಿರಣಿಗಳ ಸನಗಿಗೆ ತೇಜಿ ಬಂದಿದೆ. ಉದ್ದಿಮೆದಾರರು ಮೂರು ನಾಲ್ಕು ತಿಂಗಳ ಹುಟ್ಟುವಳಿಯನ್ನು ಮುಂದಾಗಿ ಕೊಳ್ಳಲು ಸಿದ್ಧರಾಗಿದ್ದಾರೆ.

ಕೆರೆ- ಬಾವಿ ಧರ್ಮಶಾಲೆ ಮತ್ತು ಸರಕಾರೀ ಶಾಲೆಗಳಲ್ಲಿ ಅಸ್ಪೃಶ್ಯರಿಗೆ ಸ್ಥಳ ಕೊಡದಂಥ ಮ್ಯುನಿಸಿಪಾಲಿಟಿಗೆ ಸರಕಾರದಿಂದ ಗ್ರ್ಯಾಂಟು ಕೊಡಬಾರದೆಂಬ ಠರಾವನ್ನು ಮಿ. ಸುರವೆಯವರು ಮುಂಬಯಿ ಕೌನ್ಸಿಲದಲ್ಲಿ ತರತಕ್ಕವರಿದ್ದಾರೆ.

ಧಾರವಾಡ-

ಹಾವೇರಿಯ ವಕೀಲರಾದ ಶ್ರೀ ಜೋಶಿ ಮಧುಸೂದನರು ಡಿಸ್ಟ್ರಿಕ್ಟ ಲೋಕಲಬೋರ್ಡಿನ ಸ್ಕೂಲ ಕಮಿಟಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಮತ್ತು ಬೋರ್ಡಿನ ನಿಯಮಗಳನ್ನು ಬರಿಯುವ ದಕ್ಕೆ ಶ್ರೀ ವಿನಾಯಕರಾವ ಜೋಶಿ, ಶ್ರೀ ದಾವನಗೌಡಾ ಪಾಟೀಲ ಮತ್ತು ಶ್ರೀ. ಪುರೋಹಿತ ಸ್ವಾಮಿ ಇವರದೊಂದು ಕಮಿಟಿ ನೇಮಿಸಿದ್ದಾರೆ.

ಕಲ್ಲೋಳಿ ದಾಸ್ಯ ಮಕ್ಕಳ ಇಂಗ್ಲಿಷ ಶಾಲೆಯನ್ನು ಹಾಯಸ್ಕೂಲು ಮಾಡಬೇಕೆಂದೂ, ಕರ್ನಾಟಕದ ಯಾವದೊಂದು ಸ್ಥಳದಲ್ಲಿ ಆಯುರ್ವೇದ ವಿದ್ಯಾಲಯ ಸ್ಥಾಪಿಸಬೇಕೆಂದೂ, ಧಾರವಾಡ ಜಿಲ್ಲೆಯ ಜನಸಂಖ್ಯೆ, ವಿಸ್ತಾರ ಮತ್ತು ಆದಾಯದ ವಿಚಾರ ಮಾಡಿ ಕೌನ್ಸಿಲ ಚುನಾವಣೆಯಲ್ಲಿ ಮೂವರನ್ನು ಆರಿಸುವ ಅಧಿಕಾರ ಕೊಡಬೇಕೆಂದೂ ಶ್ರೀ ಜೋಗರು ಠರಾವು ತರತಕ್ಕವರಿದ್ದಾರೆ.

ವಿನೋದ.

—o—

ಪುರೋಹಿತ- ನೀವಿಬ್ಬರೂ ಒಂದಾದಿರಿ. ನಮ್ಮ ಪೌರೋಹಿತ್ಯ ಬೇಕಾಗಲಿಲ್ಲ.

ವಧೂ- ಹಾಗಂದರೇನು?

ಪು- ನೀನೇ ತಿಳಕೋ?

ಮದಿವೆ ಮುಹೂರ್ತವಾಯಿತೇ-

ಗಂಡಿನ ಮನೆಯವಳು- ಗಂಡಿನ ಬೇಗಿತ್ತಿಗಿಂತ ಹೆಣ್ಣಿನ ಮಹಿಯು ಬೀಗಿತ್ತಿಯೇ ಶೀಕರಬಾನವ ಇಟ್ಟಳು.

ಈ ಶೀರಿಯು ಬೆಲೆಯೇನು?

ಉ- ಹತ್ತು ರೂಪಾಯಿ.

ಪ್ರ- ಉದ್ರಿಯಾದರೆ?

ಉ- ೧೨ ರೂಪಾಯಿ. ಮುಂಗಡ ೧೦ ರೂಪಾಯಿ ಕೊಡಬೇಕು.

ನಿಮ್ಮ ಹುಡುಗನು ಬಹಳ ಸುಳ್ಳ.

ಉ- ಅದೇನು ದೊಡ್ಡ ಮಾತಲ್ಲ. ಹೊತ್ತು ಸಾಧಿಸಿ ಸುಳ್ಳಾಡುವದು ಮಾತ್ರ ಸಂತಾಪಕ್ಕೆ ಕಾರಣವಾಗುತ್ತದೆ.

ಅಂತೂ ನಿಮ್ಮ ಹುಡುಗನು ಕೆಟ್ಟನು.

ಉ- ಉಪಾಯವಿಲ್ಲ. ಅವನ ಕಾಲದಲ್ಲಿ ಸಾಲಕ್ಷಣದ ಪುಸ್ತಕವೇ ಇರಲಿಲ್ಲ.

ಮೋಟಾರ ಬಿದ್ದು ದೊರೆಸಾನಿಗೆ ಏನಾದರೂ ಕೇಡಾಯಿತೇ?

ಇಲ್ಲ. ಬಣ್ಣ ಮಾತ್ರ ಹೋಯಿತು.

ಮೋರೆಗೆ ಹಚ್ಚಿದ್ದೋ? ಮೋಟಾರಿನದೋ?

ಗ್ರಂಥಕಾರ- ತುಸು ಇತ್ತ ಬರ ಪಿಯಾ

ಹೆಂಡತಿ- ತುಸು ತಡೆಯಿರಿ. ಒಲೆಯು ಹಾಳಕತ್ತಿದ್ದೇನೆ.

ಗ್ರಂಥಕಾರ- ಹಾಗೇ ಆಗಲಿ; ಅಷ್ಟರಲ್ಲಿ ಒಂದು ಅಧ್ಯಾಯ ಬರಿಯುವೆನು.

ಜಾಹೀರ ನೋಟೀಸು

—o—

ಈ ವರ್ಷ ಯಮನೂರ ಜಾತ್ರೆಯಲ್ಲಿ ನವಲಗುಂದ ತಾಲೂಕದ ಶೇತಕಿ ಅಸೋಸಿಯೇಶನ್ನ ಮತ್ತು ದನಗಳ ವ ವಕ್ಕಲತನದ ಸಾಹಿತ್ಯದ ಪ್ರದರ್ಶನವು ಬರುವ ಮಾರ್ಚ ತಿಂಗಳಲ್ಲಿ ತಾರೀಖು ೪.೫.೬ ಈ ಮೂರು ದಿವಸ ಆಗಲಿಕ್ಕಿದೆ. ಮತ್ತು ಸದರ ಜಾತ್ರೆಯಲ್ಲಿ ದನಗಳ ಮಾರಾಟವು ಆಗತಕ್ಕದ್ದದೆ. ಮತ್ತು ಉತ್ತಮ ತರದ ಜಾನವರುಗಳಿಗೆ ಪ್ರದರ್ಶನ ಕಮಿಟಿಯಿಂದ ಯೋಗ್ಯವಾದ ಇನಾಮು ಸಹ ಕೊಡಲ್ಪಡುವವು. ದನಗಳ ಮಾರಾಟ ಮಾಡುವವರೂ ಪ್ರದರ್ಶನದಲ್ಲಿ ಇನಾಮು ಪಡಕೊಳ್ಳಲಿಕ್ಕೆ ಇಚ್ಛಿಸುವವರೂ ಈ ಸಂಧಿಯನ್ನು ಕಳಕೊಳ್ಳಬಾರದು. ಹವೆಯು ಉತ್ಕೃಷ್ಟವಿದ್ದು ನೀರಿನ ಪುರವಠೆಯು ಬೇಕಾದಷ್ಟು ಇರುವದು.

ನವಲಗುಂದ ತಾ. ೧೫-೨ ೨೯

ರಾಮಭಾವು ಜೋಶಿ	ಪರ್ವತಗೌಡಾ ಪಾಟೀಲ
ನವಲಗುಂದ	ಹುಬ್ಬಳ್ಳಿ ಕುರಹಟ್ಟಿ
ವ್ಹಾಯಿಸ ಚೇರಮನ್	ಸ್ವಾಗತ ಕ. ಚೇರಮನ

ಟಿ. ಎಸ್. ಮೋಟಾರ ಸರ್ವೀಸ
ಹುಬ್ಬಳ್ಳಿ

ಶಿವರಾತ್ರಿ ಸಮಯದಲ್ಲಿ ಗೋಕರ್ಣಕ್ಕೆ ಹೋಗುವ ಪ್ರಯಾಣಿಕರ ಸೌಕರ್ಯಕ್ಕಾಗಿ

ತಾ|| ೧—೨—೨೬ ರಿಂದ ರೆಗ್ಯುಲರ ಸರ್ವೀಸ ಇಟ್ಟಿದೆ.

— ಕಾಲಕ್ರಮಗಳು —

೧. ಹುಬ್ಬಳ್ಳಿ ಬಿಡುವದು	ಗೋಕರ್ಣ ಸೇರುವದು
ಬೆಳಗ್ಗೆ ೭ ಘಂಟೆ.	ಸಾಯಂಕಾಲ ೫ ಘಂಟೆ
ಸಾಯಂಕಾಲ ೫ ಘಂಟೆ	ಬೆಳಗ್ಗೆ ೫ ಘಂಟೆ
೨. ಸಾಗರ ಬಿಡುವದು	ಗೋಕರ್ಣ ಸೇರುವದು
ಬೆಳಗ್ಗೆ ೭ ಘಂಟೆ	ಸಾಯಂಕಾಲ ೫ ಘಂಟೆ

ಶಿಮೋಗಾ
೨೦-೧-೧೯೨೬

ಎಸ್. ಮಂಜಪ್ಪಾ,
ಪ್ರೊಪ್ರೈಟರ.

ಮಾತಾಪುತ್ರರ ಸಂವಾದ.

ಅಪ್ಪಾ! [illegible] ಕಲ್ಲುಕಟಿಯೋ? ಮೈಯ್ಯಲ್ಲಿ ನೋಯುತ್ತದೆಯೋ? [illegible]

ಅಜ್ಜನು— ಕಂದಾ— ಹೌದು ಮೈಯ್ಯೆಲ್ಲಾ ನೋಯುತ್ತದೆ.

